
ಮಂಗಳವಾರ, ಆಗಸ್ಟ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 222 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮರೆವು ಎನ್ನುವುದು ನೆನಪಿಗೆ ವ್ಯತಿರಿಕ್ತವಾದ ನಿಷ್ಕ್ರಿಯ ಪ್ರಕ್ರಿಯೆ ಅಲ್ಲ. ಬದಲಿಗೆ, ಮೆದುಳು ಪ್ರಯತ್ನಪೂರ್ವಕವಾಗಿ ಸಂಗತಿಗಳನ್ನು ಮರೆಯಿಸುತ್ತದೆ!



ಆಳ-ಅಗಲ: ವಿದ್ಯುತ್ ವಿತರಣೆ ಆಮೂಲಾಗ್ರ ಬದಲಾವಣೆಗೆ ಸಿದ್ಧತೆ
ಕಡಲ ಭದ್ರತೆ: ಸಹಕಾರಕ್ಕೆ ಸಲಹೆ 9
23ರಿಂದ ಪದವಿ ಪ್ರವೇಶ ಪ್ರಕ್ರಿಯೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,402 ▲	16,258 ▲	₹47,900 (ಬೆಂಗಳೂರು)	₹65,700 (ಬೆಂಗಳೂರು)	74.26 ▼

ಪ್ರತಿಭಟನೆಗೆ ತಾತ್ಕಾಲಿಕ ವಿರಾಮ • ತಿದ್ದುಪಡಿ ಮಸೂದೆಗೆ ಒಪ್ಪಿಗೆ ನೀಡಲು ಪ್ರತಿಪಕ್ಷಗಳು ಸಜ್ಜು

ಒಬಿಸಿ ಪಟ್ಟಿ: ರಾಜ್ಯಗಳಿಗೆ ಅಧಿಕಾರ

ನವದೆಹಲಿ (ಪಿಟಿಐ): ತಮ್ಮದೇ ಪ್ರತ್ಯೇಕ ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಮರುಸ್ಥಾಪಿಸುವ, ಸಂವಿಧಾನ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರವು ಸೋಮವಾರ ಲೋಕಸಭೆಯಲ್ಲಿ ಮಂಡಿಸಿದೆ.

ರಾಜ್ಯ ಸರ್ಕಾರಗಳಿಗೆ ಈ ಹಿಂದೆ ಇದ್ದ ಈ ಅಧಿಕಾರವನ್ನು ಮರುಸ್ಥಾಪಿಸುವ ಸಂವಿಧಾನದ 127ನೇ ತಿದ್ದುಪಡಿ ಮಸೂದೆಯನ್ನು, ಸಮಾಜ ಕಲ್ಯಾಣ ಮತ್ತು ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಮಂಡಿಸಿದರು.

ಇತರೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ದಪಡಿಸುವ ಅಧಿಕಾರವು ಈ ಮೊದಲು ರಾಜ್ಯ ಸರ್ಕಾರಗಳಿಗೆ ಇತ್ತು. ಸಂವಿಧಾನಕ್ಕೆ 102ನೇ ತಿದ್ದುಪಡಿ ತರುವ ಮೂಲಕ ರಾಜ್ಯ ಸರ್ಕಾರಗಳ ಆ ಅಧಿಕಾರವನ್ನು, ಕೇಂದ್ರ ಸರ್ಕಾರವು 2018ರಲ್ಲಿ ತೆಗೆದು ಹಾಕಿತ್ತು. ಕೇಂದ್ರ ಸರ್ಕಾರದ ಆ ನಿರ್ಧಾರದ ವಿರುದ್ಧ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ಸಂಸತ್ತಿನ ಒಳಗೂ ಮತ್ತು ಹೊರಗೂ ಪ್ರತಿಭಟನೆಗಳು ನಡೆದಿದ್ದವು.

2021ರಲ್ಲಿ ಮಹಾರಾಷ್ಟ್ರದ ಮೀಸಲಾತಿ ಪಟ್ಟಿಯ ವಿರುದ್ಧದ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಸಂವಿಧಾನದ 102ನೇ ತಿದ್ದುಪಡಿಯ ಮಾನ್ಯತೆಯನ್ನು ಎತ್ತಿ ಹಿಡಿದಿತ್ತು.

9ನೇ ಪುಟ ನೋಡಿ

ಪ್ರತಿಭಟನೆ ಕೈಬಿಡಲು ನಿರ್ಧಾರ



ರಾಜ್ಯ ಸರ್ಕಾರಗಳು ಒಬಿಸಿ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವನ್ನು ಮರುಸ್ಥಾಪಿಸುವ ಸಂವಿಧಾನದ 127ನೇ ತಿದ್ದುಪಡಿ ಮಸೂದೆಯ ಮಂಡನೆ, ಚರ್ಚೆ ಮತ್ತು ಅಂಗೀಕಾರದ ವೇಳೆ ಸಂಸತ್ತಿನ ಉಭಯ ಸದನಗಳಲ್ಲೂ ಪ್ರತಿಭಟನೆ ಕೈಬಿಡಲು ವಿರೋಧ ಪಕ್ಷಗಳು ನಿರ್ಧರಿಸಿವೆ.

ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾದ ದಿನದಿಂದಲೂ ಪೆಗಾಸಸ್ ಗೂಢಚರ್ಯೆ ಮತ್ತು ರೈತರ ಪ್ರತಿಭಟನೆ ಕುರಿತು ಚರ್ಚೆ ನಡೆಸಲು ವಿರೋಧ ಪಕ್ಷಗಳು ಉಭಯ ಸದನಗಳಲ್ಲೂ ಒತ್ತಾಯಿಸುತ್ತಿವೆ. ಚರ್ಚೆಗೆ ಸರ್ಕಾರ ಒಪ್ಪದ ಕಾರಣ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸುತ್ತಿದ್ದು, ಪ್ರತಿದಿನವೂ ಕಲಾಪವನ್ನು ಮುಂದೂಡಲಾಗುತ್ತಿದೆ. ಆದರೆ ಸಂವಿಧಾನ ತಿದ್ದುಪಡಿ ಮಸೂದೆಗೆ ಪ್ರತಿಭಟನೆ ಮೂಲಕ ಅಡ್ಡಿಪಡಿಸದೇ ಇರಲು ಮತ್ತು ಮಸೂದೆಗೆ ಒಪ್ಪಿಗೆ ನೀಡಲು ವಿರೋಧ ಪಕ್ಷಗಳು ನಿರ್ಧರಿಸಿವೆ. ಕಲಾಪಕ್ಕೆ ಅಡ್ಡಿಪಡಿಸಿದಲ್ಲಿ, ಒಬಿಸಿ ವರ್ಗ ಗುರುತಿಸುವ ಅಧಿಕಾರವನ್ನು ರಾಜ್ಯಗಳಿಗೆ ಕೊಡಲು ಪ್ರತಿಪಕ್ಷಗಳು ಅಡ್ಡಿಯಾದವು ಎಂದು ಬಿಜೆಪಿ ಬಿಂಬಿಸಬಹುದು. ಇದು ಮುಂಬರುವ ಉತ್ತರ ಪ್ರದೇಶ ಹಾಗೂ ಪಂಜಾಬ್ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಪ್ರತಿಕೂಲ ಪರಿಣಾಮ ಬೀರಬಹುದು ಎಂಬುದು ಕೂಡ ವಿರೋಧ ಪಕ್ಷಗಳ ಕಳವಳವಾಗಿದೆ.

ಅಧಿಕಾರ ಕಸಿದುಕೊಂಡಿದ್ದ 102ನೇ ತಿದ್ದುಪಡಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಮೊದಲ ಅವಧಿಯ ಎನ್‌ಡಿಎ ಸರ್ಕಾರವು 2018ರಲ್ಲಿ ಸಂವಿಧಾನಕ್ಕೆ 102ನೇ ತಿದ್ದುಪಡಿಯನ್ನು ತಂದಿತ್ತು. ಆ ತಿದ್ದುಪಡಿಯ ಮೂಲಕ ಸಂವಿಧಾನಕ್ಕೆ 338ನೇ ಬಿ, 342ನೇ ಎ ಮತ್ತು 366ನೇ ವಿಧಿಯನ್ನು ಸೇರಿಸಲಾಗಿತ್ತು.

338ಬಿ ವಿಧಿಯು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ರಚನೆ, ಅಧಿಕಾರ ಮತ್ತು ಕರ್ತವ್ಯಗಳನ್ನು ವ್ಯಾಖ್ಯಾನಿಸುತ್ತದೆ. ದೇಶದ ಯಾವುದೇ ಜಾತಿಯನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗ ಎಂದು ಅಧಿಸೂಚನೆ ಹೊರಡಿಸುವ ಅಧಿಕಾರವನ್ನು 342 ಎ ವಿಧಿಯು ರಾಷ್ಟ್ರಪತಿಗೆ ನೀಡುತ್ತದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗ ಏನು ಎಂಬುದನ್ನು 366ನೇ (26ಸಿ) ವಿಧಿ ವ್ಯಾಖ್ಯಾನಿಸುತ್ತದೆ.

102ನೇ ತಿದ್ದುಪಡಿಯ ಪ್ರಕಾರ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವು ಮಾತ್ರವೇ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವನ್ನು ಹೊಂದಿದೆ. ಆ ಪಟ್ಟಿಯ ದೇಶದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುತ್ತದೆ. ಈ ತಿದ್ದುಪಡಿಯ ಮೂಲಕ, ತಮ್ಮದೇ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಕೇಂದ್ರವು ಕಸಿದುಕೊಂಡಿತ್ತು.

ಈಗ ಲೋಕಸಭೆಯಲ್ಲಿ ಮಂಡಿಸಲಾಗಿರುವ ಸಂವಿಧಾನದ 127ನೇ ತಿದ್ದುಪಡಿ ಮಸೂದೆಯು, ಈ ಎಲ್ಲಾ ಬದಲಾವಣೆಗಳನ್ನು ರದ್ದುಪಡಿಸುತ್ತದೆ. ರಾಜ್ಯ ಸರ್ಕಾರಗಳ ಅಧಿಕಾರವನ್ನು ಮರುಸ್ಥಾಪಿಸುತ್ತದೆ.



ಅದ್ಧೂರಿ ಸ್ವಾಗತ
ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಕ್ರೀಡಾಪಟುಗಳಿಗೆ ನವದೆಹಲಿ ವಿಮಾನ ನಿಲ್ದಾಣದಲ್ಲಿ ಸೋಮವಾರ ಅದ್ಧೂರಿ ಸ್ವಾಗತ ಕೋರಲಾಯಿತು. ಜಾವೆಲಿನ್ ಥ್ರೋ ಚಾಂಪಿಯನ್ ನೀರಜ್ ಚೋಪ್ರಾ ಅವರು ಚಿನ್ನದ ಪದಕ ಪ್ರದರ್ಶಿಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಎಸ್ಸೆಸ್ಸೆಲ್ಸಿ: ದಾಖಲೆಯ ಶೇ 99.99 ರಷ್ಟು ಫಲಿತಾಂಶ

157 ವಿದ್ಯಾರ್ಥಿಗಳಿಗೆ 625 / 625

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020–21ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 99.99ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಆಗಿದ್ದಾರೆ. ರಾಜ್ಯದ ವಿವಿಧ ಶಾಲೆಗಳ ಒಟ್ಟು 157 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿದ್ದಾರೆ.

2019–20ನೇ ಸಾಲಿನಲ್ಲಿ ಶೇ 71.80ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಆರು ವಿದ್ಯಾರ್ಥಿಗಳು ಮಾತ್ರ 625ಕ್ಕೆ 625 ಅಂಕ ಗಳಿಸಿದ್ದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಸಭಾಂಗಣದಲ್ಲಿ ಸೋಮವಾರ ಫಲಿತಾಂಶ ಪ್ರಕಟಿಸಿದರು.


‘ಕೋವಿಡ್ ಸಂದಿಗ್ಧತೆ ಮತ್ತು ಪರೀಕ್ಷೆ ನಡೆಸುವ ಬಗ್ಗೆ ವ್ಯಕ್ತವಾದ ಪರ–ವಿರೋಧಗಳ ನಡುವೆಯೂ ಸರಳೀಕೃತ ವ್ಯವಸ್ಥೆಯಲ್ಲಿ ಪರೀಕ್ಷೆ ನಡೆಸಲಾಗಿದೆ. ಎಲ್ಲರನ್ನೂ ಪಾಸ್ ಮಾಡಲಾಗಿದೆ. ಪರೀಕ್ಷೆ ಫಲಿತಾಂಶವನ್ನು ವಿದ್ಯಾರ್ಥಿಯ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ರವಾನಿಸಲಾಗುವುದು. ತಾತ್ಕಾಲಿಕ ಅಂಕ ಪಟ್ಟಿಯನ್ನು ಶಾಲಾ ಹಂತದಲ್ಲಿಯೇ ಮುದ್ರಿಸಿಕೊಳ್ಳಲು ಅವಕಾಶ ನೀಡಲಾಗಿದೆ’ ಎಂದು ಅವರು ತಿಳಿಸಿದರು.


ಈ ಬಾರಿ ಆರು ದಿನಗಳ ಬದಲಿಗೆ ಎರಡು ದಿನ ಪರೀಕ್ಷೆ ನಡೆಸಲಾಗಿತ್ತು. ಜುಲೈ 19ರಂದು ಕೋರ್ ವಿಷಯಗಳು, 22ರಂದು ಭಾಷಾ ವಿಷಯಗಳಿಗೆ ಬಹು ಆಯ್ಕೆಯ ಪ್ರಶ್ನೆಗಳು, ಒಎಂಆರ್ ಶೀಟ್‌ನಲ್ಲಿ ಪ್ರತಿ ವಿಷಯಕ್ಕೆ 40 ಅಂಕಗಳಿಗೆ ತಲಾ ಒಂದು ಗಂಟೆಯಂತೆ ಒಟ್ಟು 120 ಅಂಕಗಳಿಗೆ 3 ಗಂಟೆ ಎರಡೂ ದಿನ ಪರೀಕ್ಷೆ ನಡೆಸಲಾಗಿತ್ತು.

ಅಂಕ ಆಧಾರಿತ ಗ್ರೇಡ್: ಈ ಬಾರಿ ವಿದ್ಯಾರ್ಥಿಗಳಿಗೆ ಅಂಕ ಆಧಾರಿತ ಗ್ರೇಡ್ ನೀಡಲಾಗಿದೆ. ಎ +, ಎ, ಬಿ, ಸಿ ಗ್ರೇಡ್ ಘೋಷಿಸಲಾಗಿದೆ.

9ನೇ ಪುಟ ನೋಡಿ

ಅತೀ ಹೆಚ್ಚು ಅಂಕ ಪಡೆದವರು





ಪ್ರೌಢಶಾಲೆ ಮತ್ತು ಪಿಯು ವಿದ್ಯಾರ್ಥಿಗಳಿಗೆ ಇದೇ 23 ರಿಂದ ನೇರ ತರಗತಿ ಆರಂಭವಾಗಲಿದೆ. ಉಳಿದ ವಿದ್ಯಾರ್ಥಿಗಳಿಗೆ ‘ವಿದ್ಯಾಗಮ’ ಆರಂಭಿಸುವ ಬಗ್ಗೆ ಶೀಘ್ರ ತೀರ್ಮಾನಿಸಲಾಗುವುದು
ಬಿ.ಸಿ. ನಾಗೇಶ್
ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ

‘ತಾಪಮಾನ: ಗಂಭೀರ ಪರಿಸ್ಥಿತಿ ಸೃಷ್ಟಿ’

ಜಿನಿವಾ (ಎಪಿ): ಭೂಮಿಯ ತಾಪಮಾನ ವಿಪರೀತ ಹೆಚ್ಚಾಗುತ್ತಿದೆ. ಇನ್ನು ಹತ್ತು ವರ್ಷಗಳಲ್ಲಿ ಪರಿಸ್ಥಿತಿ ಮಿತಿಮೀರಿ ಹೋಗಲಿದೆ ಎಂದು ವಿಶ್ವಸಂಸ್ಥೆ ವರದಿ ಎಚ್ಚರಿಕೆ ನೀಡಿದೆ.

ವಿಶ್ವದ ನಾಯಕರು ತಾಪಮಾನ ತಡೆಯುವ ನಿಟ್ಟಿನಲ್ಲಿ ಪ್ರಯತ್ನಕ್ಕೆ ಮುಂದಾಗಬೇಕು. ಇಲ್ಲದೇ ಹೋದಲ್ಲಿ, ‘ಓಡಿಹೋಗಲು ಬೇರೆ ಸ್ಥಳವಿಲ್ಲ; ಅಡಗಲು ಸುರಕ್ಷಿತ ತಾಣವಿಲ್ಲ’ ಎಂದು ವರದಿ ಎಚ್ಚರಿಸಿದೆ.

‘ಮುಂದಿನ ದಿನಗಳಲ್ಲಿ ಪರಿಸ್ಥಿತಿ ಹದಗೆಡುವುದು ಖಚಿತ’ ಎಂದು ವರದಿಯ ಸಹ–ಲೇಖಕಿಯಾಗಿರುವ ಅಮೆರಿಕದ ರಾಷ್ಟ್ರೀಯ ಹವಾಮಾನ ಸಂಶೋಧನಾ ಕೇಂದ್ರದ ವಿಜ್ಞಾನಿ ಲಿಂಡಾ ಮಿರ್ನಸ್ ತಿಳಿಸಿದ್ದಾರೆ.

ಮೂರು ಸಾವಿರಕ್ಕೂ ಹೆಚ್ಚು ಪುಟಗಳ ಈ ವರದಿಯನ್ನು 234 ವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ. ತಾಪಮಾನದಿಂದ ಸಮುದ್ರಮಟ್ಟವು ಹೆಚ್ಚಾಗಿದ್ದು, ಬಿಸಿಗಾಳಿ, ಬರ, ಪ್ರವಾಹ ಮತ್ತು ಚಂಡಮಾರುತದಂತಹ ಭೀಕರ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉದಾಹರಣೆಗೆ, ಪ್ರತಿ 50 ವರ್ಷಗಳಿಗೊಮ್ಮೆ ಬಿಸಿಗಾಳಿಯ ವಾತಾವರಣ ಸೃಷ್ಟಿಯಾಗುತ್ತಿತ್ತು. ಆದರೆ, ಈಗ ಒಂದು ದಶಕದಲ್ಲೇ ಈ ರೀತಿಯ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಮುಂದಿನ ದಿನಗಳಲ್ಲಿ ತಾಪಮಾನ ಮತ್ತೊಂದು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾದರೆ ಪ್ರತಿ ಏಳು ವರ್ಷಗಳಲ್ಲಿ ಎರಡು ಬಾರಿ ಸಂಭವಿಸಬಹುದು ಎಂದು ಎಚ್ಚರಿಕೆ ನೀಡಲಾಗಿದೆ.

2030ರ ವೇಳೆಗೆ ಮತ್ತೆ 1.5 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಹೆಚ್ಚಾಗುವ ಸಾಧ್ಯತೆ ಇದೆ. ಇದು ನಿರೀಕ್ಷೆಗಿಂತಲೂ ಹೆಚ್ಚು ಎಂದು ತಿಳಿಸಿದೆ.

ಹವಾಮಾನ ಬದಲಾವಣೆ ಪರಿಣಾಮ ಭಾರತವು ಬಿಸಿಗಾಳಿ, ಬರ ಪರಿಸ್ಥಿತಿ ಮತ್ತು ಪ್ರವಾಹಕ್ಕೆ ಸಾಕ್ಷಿಯಾಗಲಿದೆ ಎಂದು ಎಚ್ಚರಿಕೆ ನೀಡಿದೆ.

> **ತಾಪಮಾನ ಹೆಚ್ಚಳದ ಬಗ್ಗೆ ಮೂರು ದಶಕಗಳಿಂದಲೂ ವಿಜ್ಞಾನಿಗಳು ಎಚ್ಚರಿಕೆ ನೀಡುತ್ತಿದ್ದಾರೆ. ಆದರೆ, ಜಗತ್ತು ಇದುವರೆಗೆ ಕೇಳಿಸಿಕೊಂಡಿಲ್ಲ**
> **ಇಂಗರ್ ಆ್ಯಂಡರ್ಸನ್,** ವಿಶ್ವಸಂಸ್ಥೆ ಪರಿಸರ ಕಾರ್ಯಕ್ರಮಗಳ ಕಾರ್ಯನಿರ್ವಾಹಕ ನಿರ್ದೇಶಕ

> **ವರದಿಯು ಅಪಾಯದ ಮುನ್ಸೂಚನೆ ನೀಡಿದೆ. ಗಂಭೀರ ಎಚ್ಚರಿಕೆಯನ್ನು ಇದು ನೀಡಿದೆ. ಅರಣ್ಯ ನಾಶದಂತಹ ಕ್ರಮಗಳಿಂದ ಕೋಟ್ಯಂತರ ಜನರನ್ನು ಅಪಾಯಕ್ಕೆ ತಳ್ಳುತ್ತಿದ್ದೇವೆ**
> **ಆಂಟೋನಿಯೊ ಗುಟೆರಸ್**
> ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ

ಒಳ ಪುಟಗಳು



ಮುಕ್ತಾಯಗೊಂಡ ‘ಕಿಸಾನ್ ಸಂಸತ್’ 9
ಪಿಎಂ ಕಿಸಾನ್ ಯೋಜನೆ: ₹ 19,500 ಕೋಟಿ ಬಿಡುಗಡೆ 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲಸಿಕೆ ಪ್ರಯೋಗ: ಮಾಹಿತಿ ಕೋರಿಕೆ

ಐಸಿಎಂಆರ್, ಕೇಂದ್ರ ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಲಸಿಕೆಗಳ ವೈದ್ಯಕೀಯ ಪ್ರಯೋಗಕ್ಕೆ ಸಂಬಂಧಿಸಿದ ಮಾಹಿತಿ ಬಹಿರಂಗ ಪಡಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡಿರುವ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರ, ಐಸಿಎಂಆರ್, ಭಾರತ್ ಬಯೋಟೆಕ್ ಹಾಗೂ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ನೋಟಿಸ್ ನೀಡಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಅನಿರುದ್ಧ ಬೋಸ್ ಅವರಿದ್ದ ಪೀಠ, ‘ದೇಶದಲ್ಲಿ ಅದರಲ್ಲೂ ಗ್ರಾಮೀಣ ಭಾಗದಲ್ಲಿ ಲಸಿಕೆ ಪಡೆಯಲು ಜನರಲ್ಲಿ ಹಿಂಜರಿಕೆ ಇದೆ. ಪ್ರತಿಯೊಬ್ಬರೂ ಲಸಿಕೆ ಪಡೆಯದ ಹೊರತು ಯಾರೂ ಸುರಕ್ಷಿತರಾಗಿ ಇರುವುದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ. ಹೀಗಾಗಿ, ಸದ್ಯಕ್ಕೆ ಈ ಬಗ್ಗೆ ಯಾವುದೇ ಆದೇಶವನ್ನು ನೀಡುವುದಿಲ್ಲ’ ಎಂದು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ಅವರಿಗೆ ತಿಳಿಸಿತು.

9ನೇ ಪುಟ ನೋಡಿ

‘ಎಸ್‌ಸಿ ಕುಟುಂಬಗಳಿಗೆ ಮನೆ ನಿರ್ಮಾಣಕ್ಕೆ ₹ 5 ಲಕ್ಷ’

ಬೆಂಗಳೂರು: ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಮನೆ ನಿರ್ಮಾಣಕ್ಕೆ ನೀಡಲಾಗುವ ಸಹಾಯಧನದ ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಇಲಾಖೆಯ ಅಧಿಕಾರಿಗಳ ಜತೆ ಸೋಮವಾರ ವಿಕಾಸಸೌಧದಲ್ಲಿ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಈಗ ಪರಿಶಿಷ್ಟ ಜಾತಿಯ (ಎಸ್‌ಸಿ) ಕುಟುಂಬಗಳಿಗೆ ಮನೆ ನಿರ್ಮಾಣಕ್ಕೆ ತಲಾ ₹ 1.70 ಲಕ್ಷ ಸಹಾಯಧನ ನೀಡಲಾಗುತ್ತಿದೆ. ಈ ಮೊತ್ತದಲ್ಲಿ ಉತ್ತಮವಾದ ಮನೆ ನಿರ್ಮಾಣ ಅಸಾಧ್ಯ. ಆದ್ದರಿಂದ ಸಹಾಯಧನದ ಮೊತ್ತವನ್ನು ₹ 5 ಲಕ್ಷಕ್ಕೆ ಏರಿಕೆ ಮಾಡಲಾಗುವುದು’ ಎಂದರು.

ಸಹಾಯಧನ ಹೆಚ್ಚಳದಿಂದ ಉಂಟಾಗುವ ಹೊರೆಯನ್ನು ಭರಿಸುವುದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ವರ್ಷದ ಅವಧಿಗೆ ಅನಗತ್ಯ ವೆಚ್ಚ ಮತ್ತು ಅನಿವಾರ್ಯವಲ್ಲದ ಯೋಜನೆಗಳಿಗೆ ಕಡಿವಾಣ ಹಾಕಲಾಗುವುದು. ಪರಿಶಿಷ್ಟ ಜಾತಿಯ ಜನರಿಗೆ ವಸತಿ,-ಶೌಚಾಲಯ, ಶುದ್ಧ ಕುಡಿಯುವ ನೀರು, ಉತ್ತಮವಾದ ಆರೋಗ್ಯ ಸೌಲಭ್ಯ ಹಾಗೂ ಶಿಕ್ಷಣಕ್ಕೆ ನೆರವು ನೀಡುವುದಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಮಂಗಳವಾರದ ಉಷ್ಣಾಂಶ
30° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಬಿಸಿಲಿನ ವಾತಾವರಣವಿದ್ದು, ಸಂಜೆ ನಂತರ ಮೋಡ ಕವಿದ ವಾತಾವರಣವಿರಲಿದೆ. ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ಮುನ್ನೋಟ

ಬುಧವಾರ	ಗುರುವಾರ	ಶುಕ್ರವಾರ
29° 19°	30° 20°	30° 20°

ವಿದ್ಯುತ್ ಖಾಸಗೀಕರಣ: ರೈತ ಸಂಘದಿಂದ ಇಂದು ಚಳವಳಿ

ಬೆಂಗಳೂರು: 'ವಿದ್ಯುತ್ ಖಾಸಗೀಕರಣ ವಿರೋಧಿಸಿ ರಾಜ್ಯದ ಎಲ್ಲ ಜಿಲ್ಲಾಧಿಕಾರಿ ಕಚೇರಿಗಳ ಎದುರು ಆ.10ರಂದು ಚಳವಳಿ ನಡೆಸಲಾಗುವುದು' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಅಂದು ಗಾಂಧೀಜಿ ಅವರು 'ಭಾರತ ಬಿಟ್ಟು ತೊಲಗಿ' ಚಳವಳಿ ನಡೆಸಿ, ವಿದೇಶಿಗರನ್ನು ದೇಶದಿಂದ ಓಡಿಸಿದ್ದರು. ಈಗಿನ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಓಡಿ ಹೋಗಿದ್ದವರನ್ನು ಮತ್ತೆ ದೇಶಕ್ಕೆ ಆಹ್ವಾನಿಸುತ್ತಿದೆ. ದೇಶವನ್ನು ಮತ್ತೆ ಕಂಪನಿ ಆಡಳಿತ ನೀಡಲು ಮುಂದಾಗಿದೆ' ಎಂದು ದೂರಿದರು.

'ಯಾವುದೇ ಕಾರಣಕ್ಕೆ ವಿದ್ಯುತ್ ಖಾಸಗೀಕರಣಕ್ಕೆ ಅವಕಾಶ ನೀಡುವುದಿಲ್ಲ. ವಿದ್ಯುತ್ ಸೇರಿದಂತೆ ಸರ್ಕಾರಿ ಸ್ವಾಮದ ಸಂಸ್ಥೆಗಳನ್ನು ನಷ್ಟದ ಹೆಸರಿನಲ್ಲಿ ಖಾಸಗೀಕರಣ ಮಾಡುವುದನ್ನು ಬಿಟ್ಟು, ನಷ್ಟಕ್ಕೆ ಕಾರಣಗಳು ಹಾಗೂ ಅದಕ್ಕೆ ಪರಿಹಾರಗಳನ್ನು ಸರ್ಕಾರ ಪತ್ತೆ ಹಚ್ಚಬೇಕು. ಖಾಸಗೀಕರಣ ವಿರೋಧಿಸಿ ಬೆಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಬಳಿಯೂ ಬೆಳಿಗ್ಗೆ 11 ಗಂಟೆಗೆ ಚಳವಳಿ ನಡೆಸುವ ಮೂಲಕ ಮನವಿ ಸಲ್ಲಿಸಲಿದ್ದೇವೆ' ಎಂದರು.

7,000 ಮರಗಳನ್ನು ಕಡಿಯುವುದಕ್ಕೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆ

ಮರ ಕಡಿತಲೆ: ತಡೆಯಾಜ್ಞೆ ತೆರವಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ವತಿಯಿಂದ ಬೆಂಗಳೂರು ನಗರದ ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ 7,000 ಮರಗಳನ್ನು ಕಡಿಯುವುದಕ್ಕೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ಅಗತ್ಯವಿರುವ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.


ಸಿ.ಸಿ.ಪಾಟೀಲ

ವಿಕಾಸಸೌಧದಲ್ಲಿ ಸೋಮವಾರ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿದ ಅವರು, ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್, ಮರಗಳ ಕಡಿತಲೆಗೆ ತಡೆಯಾಜ್ಞೆ ನೀಡಿರುವ ಕುರಿತು ಮಾಹಿತಿ ಪಡೆದರು. ತಡೆಯಾಜ್ಞೆ ತೆರವಿಗೆ ಅಗತ್ಯವಿರುವ ಕ್ರಮಕ್ಕೆ ಸೂಚಿಸಿದರು. ಜಮೀನು ಲಭ್ಯವಿರುವ ಸ್ಥಳಗಳಲ್ಲಿ ಕಾಮಗಾರಿ ಆರಂಭಿಸುವಂತೆಯೂ ನಿರ್ದೇಶನ ನೀಡಿದರು.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಎಚ್‌ಡಿಪಿ) ನಾಲ್ಕನೇ ಹಂತದ ಕಾಮಗಾರಿಗಳಿಗೆ ಯೋಜನಾ ವರದಿ ತಯಾರಿಗೆ ಶೀಘ್ರವಾಗಿ ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅಪಘಾತ ವಲಯಗಳನ್ನು ಗುರುತಿಸಿ ಸುಧಾರಣಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು. ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ಹಾನಿಯಾಗಿರುವ ರಸ್ತೆ, ಸೇತುವೆಗಳನ್ನು ಆದ್ಯತೆ ಮೇರೆಗೆ ದುರಸ್ತಿ ಮಾಡಬೇಕು ಎಂದು ಅವರು ಸೂಚಿಸಿದರು.

ರಾಜ್ಯದ ಬಜೆಟ್ ಗಾತ್ರದಲ್ಲಿ ಹೆಚ್ಚಳ ಆಗಿದ್ದರೂ, ಲೋಕೋಪಯೋಗಿ ಇಲಾಖೆಗೆ ನೀಡುತ್ತಿರುವ ಅನುದಾನದಲ್ಲಿ ಐದು ವರ್ಷಗಳಿಂದ ಯಾವುದೇ ಬದಲಾವಣೆ ಆಗಿಲ್ಲ ಎಂದು ಇಲಾಖೆಯ ಕಾರ್ಯದರ್ಶಿ ಕೃಷ್ಣಾ ರೆಡ್ಡಿ ಸಚಿವರಿಗೆ ತಿಳಿಸಿದರು. ಐದು ವರ್ಷಗಳ ಬಜೆಟ್ ಗಾತ್ರ ಮತ್ತು ಅನುದಾನ ಹಂಚಿಕೆಗೆ ಸಂಬಂಧಿಸಿದ ಸಮಗ್ರ ಮಾಹಿತಿ ಸಲ್ಲಿಸುವಂತೆ ಸಚಿವರು ನಿರ್ದೇಶನ ನೀಡಿದರು.

ಎಸ್ಸೆಸ್ಸೆಲ್ಸಿ: ಜಿಲ್ಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ

24 ವಿದ್ಯಾರ್ಥಿಗಳಿಗೆ 625 ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020–21ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಎರಡೂ ಜಿಲ್ಲೆಗಳು 'ಎ' ದರ್ಜೆ ಪಡೆದಿದ್ದು, 24 ವಿದ್ಯಾರ್ಥಿಗಳು 625ಕ್ಕೆ 625 ಅಂಕಗಳನ್ನು ಪಡೆದಿದ್ದಾರೆ.

ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡೂ ಉತ್ತಮ ಫಲಿತಾಂಶ ಪಡೆದಿವೆ. ಬಹುಆಯ್ಕೆಯ ಪ್ರಶ್ನೆಗಳ ಮಾದರಿ ಉತ್ತಮವಾಗಿದ್ದು, ಭವಿಷ್ಯದಲ್ಲಿಯೂ ಇದೇ ವ್ಯವಸ್ಥೆ ಮುಂದುವರಿಸಬೇಕು ಎಂದು ಹಲವು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.


ಅಭಯಚಂದ್ರ


ಎ. ಜ್ಯೋತಿಕಾ


ಆರ್. ಅದಿತಿ

625ಕ್ಕೆ 625 ಅಂಕ ಪಡೆದ ರಾಜಾಜಿನಗರ ವಿವಿಎಸ್ ಸರ್ದಾರ್ ಪಟೇಲ್ ಇಂಗ್ಲಿಷ್ ಮಾಧ್ಯಮ ಶಾಲೆಯ ವಿದ್ಯಾರ್ಥಿ ಸಿ. ಅಭಯಚಂದ್ರ, 'ಈ ಬಾರಿಯ ಪ್ರಶ್ನೆಪತ್ರಿಕೆಯ ಸ್ವರೂಪ ತುಂಬಾ ಚೆನ್ನಾಗಿತ್ತು. ಎಲ್ಲ ವಿಷಯಗಳಲ್ಲಿ ಶೇ 100ರಷ್ಟು ಅಂಕ ಸಿಗುವಲ್ಲಿ, ಈ ಮಾದರಿಯ ಪ್ರಶ್ನೆಪತ್ರಿಕೆಯೂ ಕಾರಣ' ಎಂದು ಹೇಳಿದರು.

'ಉತ್ತಮ ಅಂಕಗಳು ಬರುತ್ತವೆ ಎಂಬ ನಿರೀಕ್ಷೆ ಇತ್ತು. ಕೋವಿಡ್ ಬಿಕ್ಕಟ್ಟಿನ ನಡುವೆಯೂ ಪರೀಕ್ಷೆ ನಡೆಸಲು ನಿರ್ಧರಿಸಿದ ಸರ್ಕಾರ ಮತ್ತು ಈ ಮಾದರಿಯ ಪ್ರಶ್ನೆಪತ್ರಿಕೆ ರೂಪಿಸಿದ ಪರೀಕ್ಷಾ ಮಂಡಳಿಗೆ ಧನ್ಯವಾದ ಹೇಳಲೇಬೇಕು' ಎಂದು 625ಕ್ಕೆ 625 ಅಂಕಗಳನ್ನು ಪಡೆದ ಪೂರ್ಣಪ್ರಜ್ಞ ಪ್ರೌಢಶಾಲೆಯ ವಿದ್ಯಾರ್ಥಿನಿ ಎ. ಜ್ಯೋತಿಕಾ ಹೇಳಿದರು.

'ಬಹುಅಂಕಗಳ ಮಾದರಿಯ ಪ್ರಶ್ನೆಪತ್ರಿಕೆ ತುಂಬಾ ಉಪಯುಕ್ತವಾಗಿತ್ತು. ಅಲ್ಲದೆ, ಪರೀಕ್ಷಾ ಮಂಡಳಿಯು ವಿದ್ಯಾರ್ಥಿಗಳ ಸುರಕ್ಷತೆಗೆ ತೆಗೆದುಕೊಂಡಿದ್ದ ಕ್ರಮಗಳು ನಮ್ಮಲ್ಲಿ ಧೈರ್ಯ ತುಂಬಿದವು. ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಲು ಈ ಅಂಶವೂ ನೆರವಾಯಿತು' ಎಂದರು ಎಲ್ಲ ವಿಷಯಗಳಲ್ಲಿ ಶೇ 100ರಷ್ಟು ಅಂಕ ಗಳಿಸಿದ ಕಾರ್ಮೆಲ್ ಕಾನ್ವೆಂಟ್ ಪ್ರೌಢಶಾಲೆಯ ಆರ್. ಅದಿತಿ.

ಎಸ್ಸೆಸ್ಸೆಲ್ಸಿ ಸಾಧಕರು


ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಸೌಂದರ್ಯ ಶಾಲೆಯ ಕೌಶಿಕ್ ಜಿ.ಎಂ. 625ಕ್ಕೆ 625 ಅಂಕ ಪಡೆದಿದ್ದಾರೆ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ವೃತ್ತಿಪರ ಮಾರ್ಗದರ್ಶನ

ಬೆಂಗಳೂರು: 'ಯೂಥ್ ಫಾರ್ ಸೇವಾ' ಸಂಸ್ಥೆಯು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ವೃತ್ತಿಪರ ಮಾರ್ಗದರ್ಶನ ನೀಡಲಿದೆ.

ಸಂಸ್ಥೆಯ ಸಹಾಯವಾಣಿ '99998 59379'ಗೆ ತಪ್ಪಿದ ಕರೆ ನೀಡಿದರೆ, ಸಂಸ್ಥೆಯ ಸ್ವಯಂಸೇವಕರೇ ಮರಳಿ ಕರೆ ಮಾಡಿ ಮಾರ್ಗದರ್ಶನ ಮಾಡಲಿದ್ದಾರೆ. ಮುಂದೆ ಆಯ್ಕೆಮಾಡಿಕೊಳ್ಳಬಹುದಾದ ಕೋರ್ಸ್‌ಗಳ ಬಗ್ಗೆಯೂ ಸಲಹೆ ನೀಡಲಿದ್ದಾರೆ. ಇದರಿಂದ ಭವಿಷ್ಯದ ಕುರಿತು ನಿರ್ಧಾರ ಕೈಗೊಳ್ಳಲು ವಿದ್ಯಾರ್ಥಿಗಳಿಗೆ ಸ್ಪಷ್ಟತೆ ಸಿಗಲಿದೆ ಎಂದು ಸಂಸ್ಥೆ ಹೇಳಿದೆ.ಕರೆ ಮಾಡಿದ ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆಯನ್ನು ಸಂಗ್ರಹಿಸಿ, ಅವರಿಗೆ 'ಝೂಮ್' ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ಮಾರ್ಗದರ್ಶನ ನೀಡಲಾಗುತ್ತದೆಯಲ್ಲದೆ, ಯೂಟ್ಯೂಬ್ ಮೂಲಕವೂ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಿದೆ. ಸಂಸ್ಥೆಯ ಮುರಳೀಧರ್ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ ಎಂದು ಸಂಸ್ಥೆಯ ಕಾಮಾಕ್ಷಿ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರಿ ಕಾರ್ಯದರ್ಶಿಗೆ ಹೆಚ್ಚುವರಿ ಹೊಣೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ಎನ್. ಜಯರಾಮ್ ಅವರಿಗೆ ಸಹಕಾರ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಸಹಕಾರಿ ಇಲಾಖೆ ಕಾರ್ಯದರ್ಶಿಯಾಗಿದ್ದ ತುಷಾರ್ ಗಿರಿನಾಥ್ ಅವರನ್ನು ಇತ್ತೀಚೆಗೆ ವರ್ಗಾವಣೆ ಮಾಡಿ, ಆ ಹುದ್ದೆಯನ್ನು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ಕಾರ್ಯದರ್ಶಿ ಸೆಲ್ವಕುಮಾರ್ ಅವರಿಗೆ ಹೆಚ್ಚುವರಿ ನೀಡಲಾಗಿತ್ತು. ಸೆಲ್ವ ಕುಮಾರ್ ಅವರನ್ನು ಹುದ್ದೆಯಿಂದ ತೆರವುಗೊಳಿಸಿ ಆದೇಶ ಹೊರಡಿಸಲಾಗಿದೆ.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 10 ಮತ್ತು 11ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಗುರುಸಾರ್ವಭೌಮ ಬಡಾವಣೆ, ಐಟಿಐ ಬಡಾವಣೆ, ಬಾಲಾಜಿ ಬಡಾವಣೆ, ಅಂದಾನಪ್ಪ ಬಡಾವಣೆ, ಟಿ.ಜಿ.ಪಾಳ್ಯ, ಮುನಿಸ್ವಾಮಿ ಗ್ರಾನೈಟ್ ಕಾರ್ಖಾನೆ, ರಾಮಕೃಷ್ಣಪ್ಪ ರಸ್ತೆ, ಕೆಎಚ್‌ಬಿ ಪ್ಲಾಟಿನಂ, ಟೆಲಿಕಾಂ ಬಡಾವಣೆ, ಕೃಷ್ಣಮೂರ್ತಿ 6ನೇ ಬ್ಲಾಕ್, ಸರ್ ಎಂ.ವಿ. ಬಡಾವಣೆ, ಬಿಡಿಎ ಬಡಾವಣೆ 6ನೇ ಬ್ಲಾಕ್, ದುಬಾಸಿ ಪಾಳ್ಯ, ಬಿಇಎಂಎಲ್ ರಸ್ತೆ, ಅಪೂರ್ವ ಬಡಾವಣೆ, ಹೊಯ್ಸಳ ನಗರ, ದೊಡ್ಡಬಸ್ತಿ ಪ್ರದೇಶ, ಹೊಯ್ಸಳ ವೃತ್ತ.

ಬನಹಳ್ಳಿ, ತಿರುಮಗೊಂಡನಹಳ್ಳಿ, ಕೀರ್ತಿ ಬಡಾವಣೆ, ಮುಖ್ಯಶಿಕ್ಷಕರ ಬಡಾವಣೆ, ಚಂದಾಪುರ, ವಕೀಲ್ ಬಡಾವಣೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೆನ್ನಾಗರ. ಮೈಲಸಂದ್ರ, ಐಡಿಯಲ್ ಹೋಮ್ಸ್, ಉತ್ತರಹಳ್ಳಿ, ಸಚ್ಚಿದಾನಂದ ನಗರ, ವಡ್ಡರಪಾಳ್ಯ, ಗಾಣಕಲ್ಲು, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ದೇಗುಲ, ಪಟ್ಟಣಗೆರೆ, ಗ್ಲೋಬಲ್ ವಿಲೇಜ್, ಚನ್ನಸಂದ್ರ, ಕೆಂಗೇರಿ, ಪಿ.ಪಿ. ಬಡಾವಣೆ, ಹ್ಯಾಪಿ ವ್ಯಾಲಿ ಬಡಾವಣೆ, ಬನಶಂಕರಿ 5, 6ನೇ ಹಂತ, ದ್ವಾರಕಾ ನಗರ, ಉತ್ತರಹಳ್ಳಿ, ವಿನಾಯಕ ಬಡಾವಣೆ, 80ನೇ ಅಡ್ಡರಸ್ತೆ, ವಡ್ಡರಪಾಳ್ಯ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಸಂಕ್ಷಿಪ್ತ ಸುದ್ದಿ

'ಜನದ್ರೋಹದ ಪರಮಾವಧಿ'

ಬೆಂಗಳೂರು: 'ವಿದ್ಯುತ್ ಕಾಯ್ದೆ (ತಿದ್ದುಪಡಿ)- 2020 ಅನ್ನು ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವುದು ಜನದ್ರೋಹದ ಪರಮಾವಧಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಕಾಯ್ದೆಯನ್ನು ಖಂಡಿಸಿ ಹೇಳಿಕೆ ನೀಡಿರುವ ಅವರು, 'ಈ ಕಾಯ್ದೆಯ ತಿದ್ದುಪಡಿಯಲ್ಲಿ ಹಲವು ಅನಾಹುತಕಾರಿ ಸಂಗತಿಗಳಿವೆ. ಸಂವಿಧಾನದ ಏಳನೇ ಅನುಸೂಚಿಯ ಪ್ರಕಾರ ವಿದ್ಯುಚ್ಛಕ್ತಿಯು ಸಮವರ್ತಿ ಪಟ್ಟಿಯಲ್ಲಿದ್ದು, ರಾಜ್ಯಗಳ ಮೇಲೆ ಕೇಂದ್ರವು ಸವಾರಿ ಮಾಡುವಂತಿಲ್ಲ. ಈ ಕಾಯ್ದೆ ಜಾರಿಗೊಂಡರೆ ರೈತರು, ಬಡವರು, ಮಧ್ಯಮವರ್ಗದವರು ಸಂಪೂರ್ಣ ನಾಶವಾಗುತ್ತಾರೆ' ಎಂದಿದ್ದಾರೆ.

ಪ್ಲಾಸ್ಟಿಕ್ ಧ್ವಜ ಬಳಕೆಗೆ ನಿರ್ಬಂಧ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಅಥವಾ ಇತರೆ ಸಮಾರಂಭ, ಕ್ರೀಡಾಕೂಟಗಳಲ್ಲಿ ಪ್ಲಾಸ್ಟಿಕ್‌ನಿಂದ ತಯಾರಿಸಲಾದ ರಾಷ್ಟ್ರೀಯ ಧ್ವಜ ಬಳಸುವಂತಿಲ್ಲ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ರಾಷ್ಟ್ರೀಯ ಗೌರವ ಕಾಯ್ದೆ ಹಾಗೂ ಭಾರತದ ಧ್ವಜ ಸಂಹಿತೆ 2002ರ ಅಡಿಯಲ್ಲಿ ಈ ಆದೇಶ ಹೊರಡಿಸಲಾಗಿದೆ. ಎಲ್ಲ ಸರ್ಕಾರಿ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಹಾಗೂ ಸಾರ್ವಜನಿಕರು ಪ್ಲಾಸ್ಟಿಕ್ ಧ್ವಜ ಬಳಸಲು ನಿರ್ಬಂಧ ವಿಧಿಸಲಾಗಿದೆ.

ನಿರುದ್ಯೋಗಿಗಳಿಗೆ ವೃತ್ತಿ ತರಬೇತಿ

ಬೆಂಗಳೂರು: ಇಲ್ಲಿನ ಸದಾನಂದನಗರದಲ್ಲಿರುವ ಉನ್ನತಿ ಕೇಂದ್ರವು ನಿರುದ್ಯೋಗಿಗಳಿಗೆ ವೃತ್ತಿ ತರಬೇತಿ ನೀಡುತ್ತಿದ್ದು, ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಿದೆ.

18ರಿಂದ 25 ವರ್ಷ ವಯಸ್ಸಿನವರಿಗೆ 35 ದಿನಗಳವರೆಗೆ ತರಬೇತಿ ನೀಡಲಾಗುತ್ತದೆ. ಯಾವುದೇ ವಿದ್ಯಾರ್ಹತೆಯ ಅವಶ್ಯಕತೆಯಿಲ್ಲ, ಶೇ 100ರಷ್ಟು ಖಚಿತ ಉದ್ಯೋಗಾವಕಾಶ ಇರಲಿದೆ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಕನಿಷ್ಠ ಶುಲ್ಕ ಪಡೆದು ತರಬೇತಿ ನೀಡಲಾಗುತ್ತದೆ. ಆ.30ರಿಂದ ಪ್ರವೇಶ ಪ್ರಾರಂಭ ಎಂದೂ ಸಂಸ್ಥೆ ತಿಳಿಸಿದೆ.

ಮಾಹಿತಿಗೆ, 080 25384642, 9900146423 ಸಂಪರ್ಕಿಸಬಹುದು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಂಕು ಪತ್ತೆ ದರ ಇಳಿಕೆ • ಅಗತ್ಯ ಬಿದ್ದರೆ ಮಾತ್ರವೇ ಬಿಗಿ ಕ್ರಮ: ಆರ್‌. ಅಶೋಕ

‘15ರವರೆಗೆ ವಾರಾಂತ್ಯ ಕರ್ಫ್ಯೂ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಇದೇ 15ರವರೆಗೆ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸುವುದಿಲ್ಲ. ನಂತರ ಪರಿಸ್ಥಿತಿ ನೋಡಿಕೊಂಡು ಅಗತ್ಯ ಬಿದ್ದರೆ ಮಾತ್ರ ಕೋವಿಡ್ ನಿಯಂತ್ರಣ ಕ್ರಮಗಳನ್ನು ಬಿಗುಗೊಳಿಸಲಿದ್ದೇವೆ’ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಸೋಮವಾರ ಉತ್ತರಿಸಿದ ಅವರು, ‘ರಾಜ್ಯದಲ್ಲಿ ಸೋಂಕು ಪತ್ತೆ ದರ ಶೇ 2ಕ್ಕಿಂತ ಹೆಚ್ಚು ಇರುವ ಕಡೆ ಮಾತ್ರ ವಾರಾಂತ್ಯ ಕರ್ಫ್ಯೂ ಜಾರಿಗೊಳಿಸಲಾಗಿದೆ. ನಗರದಲ್ಲಿ ಸೋಂಕು ಪತ್ತೆ ದರ ಶೇ 0.9 ರಿಂದ 0.64ಕ್ಕೆ ಇಳಿಕೆ ಆಗಿದೆ. ಇಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 179 ಮಂದಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ 479 ಮಂದಿ ಮಾತ್ರ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಬಿಬಿಎಂಪಿಯ ಹೊರಗಿನ ಪ್ರದೇಶಗಳಲ್ಲಿ 68 ಮಂದಿ ಮಾತ್ರ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಾಗಾಗಿ ವಾರಾಂತ್ಯ ಕರ್ಫ್ಯೂವಿನ ಅಗತ್ಯ ಇಲ್ಲ’ ಎಂದು ಸ್ಪಷ್ಟಪಡಿಸಿದರು.



ಮೂರನೇ ಅಲೆ ಕರ್ನಾಟಕಕ್ಕೆ ಬರುತ್ತದೋ, ಇಲ್ಲವೋ ಗೊತ್ತಿಲ್ಲ. ಅದು ಬರಲಿ ಅಥವಾ ಬಾರದೇ ಇರಲಿ ಮುಂಜಾಗ್ರತಾ ಕ್ರಮಗಳನ್ನಂತೂ ನಾವು ಅನುಸರಿಸಲಿದ್ದೇವೆ

ಆರ್.ಅಶೋಕ, ಕಂದಾಯ ಸಚಿವ

‘ಈ ತಿಂಗಳಲ್ಲಿ ಶ್ರಾವಣ ಶನಿವಾರವೂ ಸೇರಿದಂತೆ ನಾಲ್ಕೈದು ಹಬ್ಬಗಳು ಬರುತ್ತಿವೆ. ಈ ಸಂದರ್ಭದಲ್ಲಿ ನಗರದ ಎಲ್ಲ ದೇವಸ್ಥಾನಗಳಲ್ಲಿ ಪೂಜೆಗಳು, ಹಬ್ಬದೂಟ ಜಾಸ್ತಿ ಆಗುತ್ತವೆ. ದೇವಸ್ಥಾನಗಳಲ್ಲಿ ಕೋವಿಡ್ ನಿಯಂತ್ರಣ ಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಆಡಳಿತ ಮಂಡಳಿಗಳಿಗೆ ಸೂಚನೆ ನೀಡಲಿದ್ದೇವೆ. ಭಕ್ತರೂ ಮಾಸ್ಕ್ ಧರಿಸುವ ಹಾಗೂ ಅಂತರ ಕಾಪಾಡುವ ಮೂಲಕ ಮುಂಜಾಗ್ರತೆ ವಹಿಸಬೇಕು’ ಎಂದು ಹೇಳಿದರು.

‘ಕಲಾಸಿಪಾಳ್ಯ ಹಾಗೂ ಕೆ.ಆರ್. ಮಾರುಕಟ್ಟೆಗಳನ್ನು ಮುಚ್ಚಿದರೆ ಬೀದಿಬದಿ ವ್ಯಾಪಾರಿಗಳು ಹಾಗೂ ರೈತರು ಜೀವನ ನಿರ್ವಹಣೆ ಸಮಸ್ಯೆ ಎದುರಿಸುತ್ತಾರೆ. ಈ ಮಾರುಕಟ್ಟೆಗೆ ಒಮ್ಮೆಗೆ ನಿರ್ದಿಷ್ಟ ಸಂಖ್ಯೆಯ ಜನರಿಗೆ ಮಾತ್ರ ಪ್ರವೇಶಾವಕಾಶ ನೀಡಲು ಸಾಧ್ಯವೇ ಎಂಬ ಬಗ್ಗೆ ನಗರ ಪೊಲೀಸ್ ಕಮಿಷನರ್ ಹಾಗೂ ಇತರ ಪೊಲೀಸ್ ಅಧಿಕಾರಿಗಳ ಜೊತೆ ಚರ್ಚಿಸಿದ್ದೇವೆ. ಇಲ್ಲಿ ಬಿಗಿ ಕ್ರಮ ಜಾರಿಗೊಳಿಸುತ್ತೇವೆ’ ಎಂದರು.

ವಾರಾಂತ್ಯದಲ್ಲಿ ನಗರದ ಗಡಿ ಮುಚ್ಚುವ ಸಾಧ್ಯತೆ ಅಲ್ಲಗಳೆದ ಅವರು, ‘ಮಹಾರಾಷ್ಟ್ರ ಹಾಗೂ ಕೇರಳದಿಂದ ನಿತ್ಯ ಐದಾರು ಸಾವಿರ ಜನ ನಗರಕ್ಕೆ ಬರುತ್ತಿದ್ದಾರೆ. ಅವರೆಲ್ಲ ಗಡಿ ಭಾಗದಲ್ಲಿ ತಪಾಸಣಾ ಪ್ರಕ್ರಿಯೆ ಮುಗಿಸಿಯೇ ಬರಬೇಕಾದ ಸ್ಥಿತಿ ಇದೆ. ಕೇರಳದ ಗಡಿಯಲ್ಲಿ ಬಿಗಿ ತಪಾಸಣೆ ಕೈಗೊಂಡಿದ್ದಕ್ಕೆ ಅಲ್ಲಿನ ಮುಖ್ಯಮಂತ್ರಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ, ಅದಕ್ಕೆ ಹೆಚ್ಚಿನ ಬೆಲೆ ಕೊಟ್ಟಿಲ್ಲ. ಕರ್ನಾಟಕದಲ್ಲಿ ಕೋವಿಡ್ ಸ್ಥಿತಿ ಅದ್ವಾನಕ್ಕೆ ತಲುಪಿದ್ದು ಕೇರಳದಿಂದ. ಕೋವಿಡ್ ಸೋಂಕು ಇಲ್ಲ ಎಂಬುದನ್ನು ದೃಢಪಡಿಸುವವರನ್ನು ಮಾತ್ರ ರಾಜ್ಯದೊಳಗೆ ಬಿಟ್ಟುಕೊಳ್ಳುತ್ತೇವೆ’ ಎಂದು ಅವರು ತಿಳಿಸಿದರು.

ಮಕ್ಕಳ ಕೋವಿಡ್ ಚಿಕಿತ್ಸೆಗೆ ಪ್ರತಿ ಕ್ಷೇತ್ರದಲ್ಲೂ ಆಸ್ಪತ್ರೆ

‘ಕೋವಿಡ್‌ನಿಂದ ಬಳಲುವ ಮಕ್ಕಳ ಆರೈಕೆಗಾಗಿ ಪದ್ಮನಾಭ ನಗರದಲ್ಲಿ ನಿರ್ಮಿಸಿರುವ ಆಸ್ಪತ್ರೆ ಉದ್ಘಾಟನೆಗೆ ಸಿದ್ಧವಾಗಿದೆ. ಇಲ್ಲಿ ಮಕ್ಕಳ ಮನರಂಜನಾ ಚಟುವಟಿಕೆಗೂ ವ್ಯವಸ್ಥೆ ಕಲ್ಪಿಸಲಾಗಿದೆ. ಮಗುವಿನ ತಂದೆ ಅಥವಾ ತಾಯಿ ಆಸ್ಪತ್ರೆಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ. ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಿಧಾನಸಭಾ ಕ್ಷೇತ್ರದಲ್ಲೂ ಇಂತಹ ಆಸ್ಪತ್ರೆ ನಿರ್ಮಿಸಲಾಗುತ್ತದೆ’ ಎಂದು ಆರ್.ಅಶೋಕ ಹೇಳಿದರು.

‘ತರಗತಿ ಆರಂಭ– ಪೋಷಕರ ಅನುಮತಿ ಅಗತ್ಯ’

‘ಶಾಲಾ ಕಾಲೇಜುಗಳ ಪುನರಾರಂಭದ ಬಗ್ಗೆ ತಜ್ಞರೂ ಶಿಫಾರಸು ಮಾಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಭೆಯಲ್ಲೂ ಇದರ ಬಗ್ಗೆ ಚರ್ಚೆ ಆಗಿದೆ. ಸೋಂಕು ಹರಡುವಿಕೆ ತಡೆಯಲು ಶಾಲಾ ಕಾಲೇಜುಗಳು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ತರಗತಿ ಆರಂಭಿಸಲು ಪೋಷಕರ ಅನುಮತಿ ಪಡೆಯಬೇಕು. ಪೋಷಕರು ಇಚ್ಛೆ ಇದ್ದರೆ ಮಾತ್ರ ಮಕ್ಕಳನ್ನು ಕಳುಹಿಸಬಹುದು’ ಎಂದು ಆರ್.ಅಶೋಕ ತಿಳಿಸಿದರು.

‘ಅನೇಕ ದೇಶಗಳು ಶಾಲಾ ಕಾಲೇಜುಗಳ ಕಾರ್ಯನಿರ್ವಹಣೆಯನ್ನು ನಿಲ್ಲಿಸಿಯೇ ಇಲ್ಲ. ನಮ್ಮಲ್ಲಿ 9ನೇ ತರಗತಿಗಿಂತ ಮೇಲಿನ ತರಗತಿಗಳನ್ನು ಶುರು ಮಾಡಲಿದ್ದೇವೆ. ವಿದ್ಯಾರ್ಥಿಗಳ ಹಾಜರಾತಿ ಹಾಗೂ ಕೋವಿಡ್ ಪರಿಸ್ಥಿತಿ ನೋಡಿಕೊಂಡು ನಂತರ 7 ಮತ್ತು 8ನೇ ತರಗತಿಗಳನ್ನು ಆರಂಭಿಸುತ್ತೇವೆ’ ಎಂದು ಹೇಳಿದರು.

ಇದೇ 16 ರಿಂದ ಕೋವಿಡ್ ಗುಣಮುಖರಿಗೆ ಟಿಬಿ ಪರೀಕ್ಷೆ

ಬೆಂಗಳೂರು: ಕೊರೊನಾ ಸೋಂಕಿತರಲ್ಲಿ ಕ್ಷಯರೋಗ (ಟಿಬಿ) ಕಾಣಿಸಿಕೊಳ್ಳುತ್ತಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಈ ಕುರಿತು ಅಧ್ಯಯನ ಕೈಗೊಳ್ಳಲು ಆರೋಗ್ಯ ಇಲಾಖೆಯು ಇದೇ 16 ರಿಂದ 31ರವರೆಗೆ ಕೋವಿಡ್‌ನಿಂದ ಗುಣಮುಖರಾದವರಿಗೆ ಟಿಬಿ ಪರೀಕ್ಷೆ ಮಾಡುವ ಶಿಬಿರವನ್ನು ಹಮ್ಮಿಕೊಂಡಿದೆ.

ರಾಜ್ಯದಾದ್ಯಂತ ಸುಮಾರು ಹದಿನೈದು ದಿನ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ವರ್ಷಾರಂಭದಿಂದ ಜುಲೈ 31ರ ಅವಧಿಯಲ್ಲಿ ಕೋವಿಡ್‌ಗೆ ಒಳಗಾಗಿ ಗುಣಮುಖರಾಗಿರುವವರ ಆರೋಗ್ಯ ತಪಾಸಣೆ ನಡೆಸಲಾಗುವುದು. ಅವರಲ್ಲಿ ಸೋಂಕು ಲಕ್ಷಣಗಳು ಕಂಡು ಬಂದವರನ್ನು ಟಿಬಿ ಪರೀಕ್ಷೆಗೆ ಒಳಪಡಿಸಲಾಗುವುದು.

ಇದಕ್ಕಾಗಿ ಆರೋಗ್ಯ ಕಾರ್ಯಕರ್ತರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆ ಭೇಟಿ ನೀಡಿ ಕೋವಿಡ್ ಗುಣಮುಖರ ಆರೋಗ್ಯದ ಮಾಹಿತಿ ಸಂಗ್ರಹಿಸಿ, ರೋಗ ಲಕ್ಷಣ ಆಧರಿಸಿ ಕಫದ ಮಾದರಿ ಸಂಗ್ರಹಿಸಲಿದ್ದಾರೆ. ಅಗತ್ಯವಿದ್ದವರನ್ನು ಆಸ್ಪತ್ರೆಗೆ ಕರೆತಂದು ಹೆಚ್ಚಿನ ಪರೀಕ್ಷೆಗೆ ಒಳಪಡಿಸಲಿದ್ದಾರೆ ಎಂದು ಆರೋಗ್ಯ ಇಲಾಖೆ (ಟಿಬಿ ವಿಭಾಗ) ಜಂಟಿ ನಿರ್ದೇಶಕ ಡಾ. ರಮೇಶ್ ರೆಡ್ಡಿ ತಿಳಿಸಿದ್ದಾರೆ.

‘ಮೂರು ವಾರಗಳಿಂದ ನಿರಂತರ ಕೆಮ್ಮು, ಎರಡು ವಾರಗಳಿಂದ ನಿರಂತರ ಜ್ವರ, ಕೆಮ್ಮಿದಾಗ ರಕ್ತ ಬರುತ್ತಿದ್ದರೆ ಹಾಗೂ ತೂಕ ಕಡಿಮೆ ಆಗಿದ್ದರೆ ಅವರ ಕಫದ ಮಾದರಿ ಸಂಗ್ರಹಿಸಲಾಗುವುದು. ಅಗತ್ಯ ಇರುವವರಿಗೆ ಹತ್ತಿರದ ಪ್ರಾಥಮಿಕ ಅಥವಾ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಎಕ್ಸ್‌ರೇ ಪರೀಕ್ಷೆಗೆ ಒಳಪಡಿಸಲಾಗುವುದು. ನಂತರ ಸೋಂಕು ತಗುಲಿರುವವರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

12,30,782	ಒಟ್ಟು ಪ್ರಕರಣಗಳು (12,30,486 ನಿನ್ನೆಯ ವಿವರ)
8,378	ಸಕ್ರಿಯ ಪ್ರಕರಣಗಳು
12,06,488	ಗುಣಮುಖರಾದವರು
15,915	ಒಟ್ಟು ಸಾವು

ಸೋಮವಾರದ ಏರಿಕೆ

ಹೊಸ ಪ್ರಕರಣ	296
ಗುಣಮುಖ	410
ಸಾವು	1

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬಿಬಿಎಂಪಿ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ 108 ತಂಡ ರಚನೆ: ಕಂದಾಯ ಸಚಿವ

ಮನೆ ಬಾಗಿಲಿಗೆ ಪಾಲಿಕೆ ವೈದ್ಯರ ನಡೆ 16 ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಇದೇ 16ರಿಂದ ‘ಜನರ ಮನೆ ಬಾಗಿಲಿಗೆ ಪಾಲಿಕೆ ವೈದ್ಯರ ನಡೆ’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ವೈದ್ಯಾಧಿಕಾರಿಗಳ ನೇತೃತ್ವದಲ್ಲಿ 108 ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಕಾರ್ಯಗಳ ಕುರಿತು ಪರಿಶೀಲನಾ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದರು. ‘ರೋಗಿಗಳ ಸಂರಕ್ಷಣೆ, ರೋಗ ಬರದಂತೆ ತಡೆಯುವುದು, ಬೇರೆ ಕಾಯಿಲೆ ಹೊಂದಿರುವವರ ವಿವರ ಮತ್ತು ಲಸಿಕೆ ಪಡೆದವರ ವಿವರ ಸಂಗ್ರಹ ಈ ಕಾರ್ಯಕ್ರಮದ ಉದ್ದೇಶ’ ಎಂದರು.

‘ಪ್ರತಿ ತಂಡದಲ್ಲಿ ವೈದ್ಯಾಧಿಕಾರಿ, ಶುಶ್ರೂಷಕಿ, ಸಹಾಯಕ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಇರುತ್ತಾರೆ. ಪ್ರತಿ ಮನೆಗೂ ಭೇಟಿ ನೀಡಲಿರುವ ತಂಡವು ಆ ಕುಟುಂಬದಲ್ಲಿ ಯಾರಿಗಾದರೂ ನೆಗಡಿ, ಜ್ವರ ಮುಂತಾದ ಕೊರೊನಾ ಸೋಂಕಿನ ಲಕ್ಷಣಗಳಿವೆಯೇ, ಯಾರಾದರೂ ಅನ್ಯ ಕಾಯಿಲೆಗಳನ್ನು ಹೊಂದಿದ್ದಾರೆಯೇ ಎಂಬ ಮಾಹಿತಿ ಕಲೆ ಹಾಕಲಿದೆ. ಇದಕ್ಕಾಗಿ ಆ್ಯಪ್ ಸಿದ್ಧಪಡಿಸಲಾಗಿದ್ದು, ಅಗತ್ಯ ವಿವರಗಳನ್ನು ತಂಡದ ಸದಸ್ಯರು ಅದರಲ್ಲಿ ತುಂಬಲಿದ್ದಾರೆ. ಅಗತ್ಯಬಿದ್ದರೆ ಕೋವಿಡ್ ಪರೀಕ್ಷೆ ನಡೆಸಲು ತಂಡವು ಕ್ರಮ ಕೈಗೊಳ್ಳಲಿದೆ’ ಎಂದು ತಿಳಿಸಿದರು.

‘ಕುಟುಂಬದ ಎಷ್ಟು ಮಂದಿ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಗೂ ಎರಡನೇ ಡೋಸ್ ಪಡೆದಿದ್ದಾರೆ, ಎಷ್ಟು ಮಂದಿ ಇನ್ನಷ್ಟೇ ಲಸಿಕೆ ಪಡೆಯಬೇಕಿದೆ ಎಂಬ ವಿವರವನ್ನೂ ಕಲೆ ಹಾಕಲಿದೆ. ಆರಂಭದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದ ಎರಡು ವಾರ್ಡ್‌ಗಳಲ್ಲಿ ಪ್ರಾಯೋಗಿಕವಾಗಿ ಈ ಕಾರ್ಯಕ್ರಮ ಜಾರಿಯಾಗಲಿದೆ. ಕ್ರಮೇಣ ಪಾಲಿಕೆ ವ್ಯಾಪ್ತಿಯ 29 ಲಕ್ಷ ಮನೆಗಳನ್ನೂ ವೈದ್ಯರ ತಂಡ ತಲುಪಲಿದೆ. ಈ ತಂಡಗಳಿಗೆ ವಾಹನ ಸೌಕರ್ಯ, ಪಿಪಿಇ ಕಿಟ್, ಔಷಧಗಳನ್ನು ಒದಗಿಸುತ್ತೇವೆ’ ಎಂದು ವಿವರಿಸಿದರು.

‘ಪ್ರತಿ ಕ್ಷೇತ್ರದಲ್ಲಿ ಕೊರೊನಾ ಸೋಂಕಿತರ ಆರೈಕೆಗೂ ತಂಡಗಳನ್ನು ರಚಿಸಲಾಗಿದೆ. ಸೋಂಕು ಪತ್ತೆಯಾದವರನ್ನು ಪರೀಕ್ಷೆಗೆ ಒಳಪಡಿಸಿ ಔಷಧ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ. ಮನೆಯಲ್ಲೇ ಆರೈಕೆಗೆ ಒಳಗಾಗುವವರನ್ನು ಆಶಾ ಕಾರ್ಯಕರ್ತೆಯರು ಅಥವಾ ಅಂಗನವಾಡಿ ಕಾರ್ಯಕರ್ತೆಯರು ಭೇಟಿ ಮಾಡುತ್ತಿದ್ದರು. ಇನ್ನು ಸೋಂಕು ಪತ್ತೆಯಾದ ಆರು ಗಂಟೆ ಒಳಗೆ ವೈದ್ಯರ ತಂಡವು ಸೋಂಕಿತರ ಮನೆಗೆ ತಲುಪಿ ಅವರಿಗೆ ಆತ್ಮಸ್ಥೈರ್ಯ ತುಂಬಲಿದೆ’ ಎಂದು ಸಚಿವರು ತಿಳಿಸಿದರು.

‘ಸೋಂಕಿತರಿಗೆ ನಿಡುವ ಕಿಟ್‌ನಲ್ಲಿ ಇನ್ನು ಸ್ಥಳೀಯವಾಗಿ ಲಭ್ಯ ಇರುವ ಇಬ್ಬರು ವೈದ್ಯರ ಮೊಬೈಲ್ ಸಂಖ್ಯೆಯನ್ನೂ ಉಲ್ಲೇಖಿಸಲಾಗುತ್ತದೆ. ವೈದ್ಯರು ತಕ್ಷಣ ಲಭ್ಯ ಇರುವಂತೆ ನೋಡಿಕೊಳ್ಳುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ಅಗತ್ಯ ಬಿದ್ದರೆ ಸೋಂಕಿತರು ಈ ವೈದ್ಯರನ್ನು ಸಂಪರ್ಕಿಸಬಹುದು. ಅಲರ್ಜಿ, ಬೇಧಿ ಮುಂತಾದ ಸಮಸ್ಯೆ ಕಾಣಿಸಿಕೊಂಡರೆ ಪರ್ಯಾಯ ಔಷಧವನ್ನು ವೈದ್ಯರು ಸೂಚಿಸಲಿದ್ದಾರೆ’ ಎಂದರು.



ಸಭೆಯಲ್ಲಿ ಆರ್‌.ಅಶೋಕ ಮಾತನಾಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹಾಗೂ ಬಿಬಿಎಂಪಿ ವಿಶೇಷ ಆಯುಕ್ತ ಡಿ.ರಂದೀಪ್ ಇದ್ದಾರೆ

ಶೇ 67ರಷ್ಟು ಮಂದಿಗೆ ಲಸಿಕೆ

ಪಾಲಿಕೆ ವ್ಯಾಪ್ತಿಯಲ್ಲಿ 60,54,264 ಮಂದಿ (ಶೇ 67) ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಗೂ 17,07,679 ಮಂದಿ (ಶೇ 19) ಎರಡನೇ ಡೋಸ್ ಪಡೆದಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಬಿಬಿಎಂಪಿಯ ಹೊರಗಿನ ಪ್ರದೇಶಗಳಲ್ಲಿ 9,78,671 (ಶೇ 92) ಮಂದಿ ಮೊದಲ ಡೋಸ್ ಹಾಗೂ 2,13,976 ಮಂದಿ (ಶೇ 22) ಎರಡನೇ ಡೋಸ್ ಪಡೆದಿದ್ದಾರೆ ಎಂದು ಆರ್.ಅಶೋಕ ತಿಳಿಸಿದರು.

ಜನರಲ್ಲಿ ಆತ್ಮವಿಶ್ವಾಸ ತುಂಬುವುದರ ಜೊತೆ ಆರೋಗ್ಯದ ಕುರಿತ ಅಂಕಿ– ಅಂಶ ಕಲೆ ಹಾಕಲು ‘ಮನೆ ಬಾಗಿಲಿಗೆ ಪಾಲಿಕೆ ವೈದ್ಯರ ನಡೆ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆರ್.ಅಶೋಕ, ಕಂದಾಯ ಸಚಿವ

ರಾಜ್ಯ ಕೋವಿಡ್ ಅಂಕಿ–ಅಂಶ

29,19,711	ಒಟ್ಟು ಸೋಂಕಿತರು (29,18,525 ನಿನ್ನೆಯ ವಿವರ)
23,316	ಸಕ್ರಿಯ ಪ್ರಕರಣಗಳು
28,59,552	ಗುಣಮುಖರಾದವರು
36,817	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,186
ಗುಣಮುಖ	1,776
ಸಾವು	24

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.37 ಕೋಟಿ	3.19 ಕೋಟಿ
ಸಕ್ರಿಯ ಪ್ರಕರಣ	1.63 ಕೋಟಿ	3.89 ಲಕ್ಷ
ಗುಣಮುಖ	18.30 ಕೋಟಿ	3.11 ಕೋಟಿ
ಸಾವು	43.12 ಲಕ್ಷ	4.28 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.73 ಲಕ್ಷ	12,750
ಗುಣಮುಖ	3.99 ಲಕ್ಷ	19,499
ಸಾವು	8,033	336

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಇರಾನ್	39,619
ಇಂಡೊನೇಷ್ಯಾ	36,415
ಬ್ರಿಟನ್	27,335

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	60.51
ಬ್ರಿಟನ್	12.96
ಬ್ರೆಜಿಲ್	6.94

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.34 ಲಕ್ಷ
ತಮಿಳುನಾಡು	34,340
ದೆಹಲಿ	25,067

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	63.57
ಕೇರಳ	35.52
ತಮಿಳುನಾಡು	25.77

ಪ್ರಜಾವಾಣಿ ಗ್ರಾಫಿಕ್ಸ್

ಮಕ್ಕಳ ಆರೋಗ್ಯ ತಪಾಸಣೆ

ಮೈಸೂರು: ‘ಕೊರೊನಾ ಮೂರನೇ ಅಲೆಯಿಂದ ಮಕ್ಕಳನ್ನು ರಕ್ಷಿಸಲು ರಾಜ್ಯದಾದ್ಯಂತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲು ನಿರ್ಧರಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಇಲ್ಲಿ ತಿಳಿಸಿದರು.

ಸಚಿವರು, ಶಾಸಕರು ಹಾಗೂ ಜಿಲ್ಲಾಧಿಕಾರಿ ಜೊತೆ ಕೋವಿಡ್ ಪರಿಸ್ಥಿತಿ ಪರಿಶೀಲನೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು, ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

ಸೋಮಶೇಖರ್ ಕಾರ್ಯವೈಖರಿಗೆ ಶಾಸಕರ ಶ್ಲಾಘನೆ



ಮೈಸೂರು: ಕೋವಿಡ್ ನಿರ್ವಹಣೆ ವಿಚಾರದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಎಸ್.ಟಿ.ಸೋಮಶೇಖರ್ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ಶಾಸಕರು ಶ್ಲಾಘಿಸಿದರು.

ನಗರದಲ್ಲಿ ಸೋಮವಾರ ನಡೆದ ಕೋವಿಡ್ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಶಾಸಕರು, ‘ಕೋವಿಡ್ ಪರೀಕ್ಷೆ, ಲಸಿಕೆ, ಆಸ್ಪತ್ರೆ ವಿಚಾರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಗಮನಕ್ಕೆ ತಂದಾಕ್ಷಣ ಸ್ಪಂದಿಸುವ, ಪರಿಹರಿಸುವ ಕೆಲಸವನ್ನು ಮಾಡುತ್ತಿದ್ದಾರೆ’ ಎಂದು ಹೇಳಿದರು.

ಕಾಂಗ್ರೆಸ್ ಶಾಸಕರಾದ ಎಚ್.ಪಿ.ಮಂಜುನಾಥ್, ತನ್ವೀರ್ ಸೇಠ್, ಜೆಡಿಎಸ್ ವಿಧಾನ ಪರಿಷತ್ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಶಾಸಕ ಜಿ.ಟಿ.ದೇವೇಗೌಡ, ಬಿಜೆಪಿ ಶಾಸಕ ಎಲ್.ನಾಗೇಂದ್ರ ಅವರು ಸಚಿವರ ಕೆಲಸಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು.

ಹೊಸ ಪ್ರಕರಣಗಳಲ್ಲಿ ಇಳಿಕೆ



ಬೆಂಗಳೂರು: ರಾಜ್ಯದಲ್ಲಿ ಸತತ ಮೂರನೇ ದಿನವೂ ಕೋವಿಡ್ ಹೊಸ ಪ್ರಕರಣಗಳಲ್ಲಿ ಇಳಿಕೆಯಾಗಿದೆ. ಸೋಮವಾರ 1,186 ಮಂದಿಗೆ ಸೋಂಕು ತಗುಲಿದ್ದು, 24 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ.

ಹೊಸ ಪ್ರಕರಣಗಳು ಶುಕ್ರವಾರ 1,800ಕ್ಕೆ ಹೆಚ್ಚಿದ್ದು, ಭಾನುವಾರ ಒಂದೂವರೆ ಸಾವಿರ ಆಸುಪಾಸಿಗೆ ಬಂದಿದ್ದವು. ಸದ್ಯ 10 ದಿನಗಳ ಬಳಿಕ 1,200 ಆಸುಪಾಸಿಗೆ ತಗ್ಗಿವೆ. ಅಲ್ಲದೆ, ಪಾಸಿಟಿವಿಟಿ ದರವೂ ಕೂಡಾ ಎರಡು ವಾರದ ಬಳಿಕ ಶೇ 1ಕ್ಕಿಂತ ಕಡಿಮೆಯಾಗಿದೆ.

ಬೆಂಗಳೂರು ನಗರ ಮತ್ತು ದಕ್ಷಿಣ ಕನ್ನಡದಲ್ಲಿ ಮಾತ್ರ 100ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. 1,776 ಮಂದಿ ಗುಣಮುಖರಾಗಿದ್ದಾರೆ.

ಭಾನುವಾರಕ್ಕೆ ಹೋಲಿಸಿದರೆ ಸೋಂಕು ಪರೀಕ್ಷೆಗಳು 14 ಸಾವಿರ (1.32 ಲಕ್ಷಕ್ಕೆ) ಕಡಿಮೆಯಾಗಿವೆ. ಹೊಸ ಪ್ರಕರಣಗಳು 412 ಇಳಿಕೆಯಾಗಿವೆ. ಸೋಂಕಿತರ ಸಾವು 4 ಏರಿಕೆಯಾಗಿದೆ. ಕೋವಿಡ್ ದೃಢ ಪ್ರಮಾಣ ಶೇ 1.1 ರಿಂದ 0.9 ರಷ್ಟಿದೆ. ಮರಣ ದರ ಶೇ 2ರಷ್ಟಿದೆ.

6 ಕ್ಷೇತ್ರಗಳಲ್ಲಿ 300ಕ್ಕೂ ಅಧಿಕ ಪ್ರಕರಣ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 300ಕ್ಕೂ ಹೆಚ್ಚು ಇದೆ. ಒಟ್ಟು 103 ವಾರ್ಡ್‌ಗಳಲ್ಲಿ 10ಕ್ಕಿಂತ ಹೆಚ್ಚು ಸಕ್ರಿಯ ಪ್ರಕರಣಗಳಿವೆ.

ನಗರದಲ್ಲಿ ಕೋವಿಡ್ ಪರೀಕ್ಷೆಗೊಳಗಾದವರಲ್ಲಿ ಸೋಂಕು ಪತ್ತೆ ದರ 0.63ಕ್ಕೆ ಹಾಗೂ ಸೋಂಕಿತರ ಸಾವಿನ ದರ 1.09ಕ್ಕೆ ಇಳಿಕೆಯಾಗಿದೆ.

ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ನಗರದಲ್ಲಿ ಒಟ್ಟು 160 ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಲಾಗಿದೆ. ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ 79 ಕಂಟೈನ್‌ಮೆಂಟ್ ವಲಯಗಳಿವೆ. 70 ಒಂಟಿ ಮನೆಗಳು, ಒಂದು ಶಾಲೆ, ಎಂಟು ಪಿ.ಜಿ ಅಥವಾ ವಿದ್ಯಾರ್ಥಿನಿಲಯಗಳು ಹಾಗೂ ಎರಡು ಇತರ ಪ್ರದೇಶಗಳನ್ನು ಕಂಟೈನ್‌ಮೆಂಟ್ ವಲಯಗಳನ್ನಾಗಿ ಗುರುತಿಸಲಾಗಿದೆ. ಇವುಗಳಲ್ಲಿ ಒಟ್ಟು 648 ಕೋವಿಡ್ ಸಕ್ರಿಯ ಪ್ರಕರಣಗಳಿವೆ.

ಕಂಟೈನ್‌ಮೆಂಟ್ ವಲಯಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ (42) ಗುರುತಿಸಿರುವುದು ಮಹದೇವಪುರ ವಲಯದಲ್ಲಿ. ಈ ವಲಯದ ಕಂಟೈನ್‌ಮೆಂಟ್ ವಲಯಗಳಲ್ಲಿ ಒಟ್ಟು 186 ಕೋವಿಡ್ ಪ್ರಕರಣಗಳಿವೆ.

‘ಪ್ರವಾಹ: ಸೂಕ್ಷ್ಮ ಪ್ರದೇಶಗಳ ಸಂಖ್ಯೆ ಇಳಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಮಳೆಗಾಲದಲ್ಲಿ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಸೃಷ್ಟಿಯಾಗುತ್ತಿದ್ದ 500ಕ್ಕೂ ಅಧಿಕ ಪ್ರದೇಶಗಳಿದ್ದವು. ಅವುಗಳ ಸಂಖ್ಯೆ ಈಗ 209ಕ್ಕೆ ಇಳಿದಿದೆ. 58 ಅತಿಸೂಕ್ಷ್ಮ ಪ್ರದೇಶಗಳನ್ನು ಹಾಗೂ 151 ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅನಾಹುತ ತಡೆಯಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಮಳೆಗಾಲದಲ್ಲಿ ಸಂಭಾವ್ಯ ಅನಾಹುತಗಳನ್ನು ತಪ್ಪಿಸಲು ಬಿಬಿಎಂಪಿ ಕೈಗೊಂಡಿರುವ ಪೂರ್ವಸಿದ್ಧತೆಗಳನ್ನು ಪರಿಶೀಲಿಸಲು ಅವರು ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮಳೆಗಾಲದಲ್ಲಿ ಕೆಲವೆಡೆ ರಸ್ತೆಗಳಲ್ಲೇ ನೀರು ನಿಲ್ಲುತ್ತಿದ್ದು, ಇಂತಹ ಕಡೆ ಚರಂಡಿ ನಿರ್ಮಿಸುವಂತೆ, ಚರಂಡಿಗಳಲ್ಲಿ ಸಿಲುಕಿರುವ ಕಸ ಕಡ್ಡಿಗಳನ್ನು ಸ್ವಚ್ಛಗೊಳಿಸುವಂತೆ ಹಾಗೂ ರಾಜಕಾಲುವೆಗಳ ಹೂಳನ್ನು ತೆರವುಗೊಳಿಸುವಂತೆ ಸೂಚಿಸಿದ್ದೇನೆ’ ಎಂದರು.

‘ಮಳೆಗಾಲದಲ್ಲಿ ಅಹವಾಲು ಸ್ವೀಕರಿಸಲು 9 ಶಾಶ್ವತ ನಿಯಂತ್ರಣ ಕೊಠಡಿಗಳು ಸೇರಿದಂತೆ ಒಟ್ಟು 63 ನಿಯಂತ್ರಣ ಕೊಠಡಿಗಳನ್ನು ನಿರ್ಮಿಸಲಾಗಿದೆ. ಇವುಗಳ ನಿರ್ವಹಣೆಗಾಗಿಯೇ ₹ 5 ಕೋಟಿ ಅನುದಾನ ಒದಗಿಸಲಾಗಿದೆ. ಸಮಸ್ಯೆ ಎದುರಾದರೆ ತುರ್ತು ಸ್ಪಂದನೆಗಾಗಿ ತಂಡಗಳು ಸಜ್ಜಾಗಿವೆ. ಒಣಗಿರುವ ಮರಗಳನ್ನು ಹಾಗೂ ಒಣ ಕೊಂಬೆಗಳನ್ನು ಕೂಡಲೆ ತೆರವುಗೊಳಿಸಬೇಕು. ಬಿದ್ದ ಮರಗಳನ್ನು ತೆರವು ಮಾಡಲು ವಿಶೇಷ ತಂಡಗಳನ್ನು ನಿಯೋಜಿಸುವಂತೆ ನಿರ್ದೇಶನ ನೀಡಿದ್ದೇನೆ’ ಎಂದು ಅವರು ಹೇಳಿದರು.

ಪ್ರವಾಹ ಉಂಟಾಗುವ ಪ್ರದೇಶಗಳ ವಿವರ

ವಲಯ	ಅತಿಸೂಕ್ಷ್ಮ ಪ್ರದೇಶ	ಸೂಕ್ಷ್ಮ ಪ್ರದೇಶ
ದಕ್ಷಿಣ	5	15
ಪೂರ್ವ	5	33
ಪಶ್ಚಿಮ	3	7
ಮಹದೇವಪುರ	10	19
ಬೊಮ್ಮನಹಳ್ಳಿ	4	7
ಆರ್‌.ಆರ್‌.ನಗರ	11	21
ಯಲಹಂಕ	12	7
ದಾಸರಹಳ್ಳಿ	8	29
ಕೇಂದ್ರಕಚೇರಿ ವ್ಯಾಪ್ತಿ	13	

‘ಮಾರ್ಷಲ್, ಅಧಿಕಾರಿಗಳನ್ನು ತಡೆದರೆ ಕ್ರಿಮಿನಲ್ ಕ್ರಮ’

ಬೆಂಗಳೂರು: ‘ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಕೋವಿಡ್ ನಿಯಂತ್ರಣ ಕ್ರಮ ಜಾರಿಗೊಳಿಸಲು ಮುಂದಾಗುವ ಬಿಬಿಎಂಪಿ ಅಧಿಕಾರಿಗಳನ್ನು ಅಥವಾ ಮಾರ್ಷಲ್‌ಗಳನ್ನು ಒಳಗೆ ಬಿಟ್ಟುಕೊಳ್ಳದಿದ್ದರೆ ಅಥವಾ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಕಂದಾಯ ಸಚಿವ ಆರ್.ಅಶೋಕ ಎಚ್ಚರಿಕೆ ನೀಡಿದರು.

‘ಹಿಂದೆಲ್ಲಾ ಕೊಳೆಗೇರಿಗಳಲ್ಲೇ ಕೋವಿಡ್ ಪ್ರಕರಣಗಳು ಜಾಸ್ತಿ ಎನ್ನುತ್ತಿದ್ದರು. ಈಗ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಮೂರು ಪ್ರಕರಣ ಪತ್ತೆಯಾದ ಕಟ್ಟಡವನ್ನೂ ಕಂಟೈನ್‌ಮೆಂಟ್ ವಲಯ ಎಂದು ಗುರುತಿಸಿ ಅಲ್ಲಿನ ನಿವಾಸಿಗಳೆಲ್ಲರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಸೋಂಕು ಪತ್ತೆ ಆದ ಮಹಡಿಯವರು ಹೊರಗಡೆ ಓಡಾಡದಂತೆ ನಿರ್ಬಂಧಿಸಲಾಗುತ್ತದೆ’ ಎಂದು ಸಚಿವರು ತಿಳಿಸಿದರು.

‘ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ವ್ಯಾಯಾಮದ ಉಪಕರಣಗಳು, ಈಜುಕೊಳ ಮುಂತಾದ ಸೌಕರ್ಯಗಳನ್ನು ಎಲ್ಲರೂ ಬಳಸುತ್ತಾರೆ. ಇದು ಕೂಡಾ ಇಲ್ಲಿ ಸೋಂಕು ಹರಡುವಿಕೆ ಹೆಚ್ಚಳಕ್ಕೆ ಕಾರಣ. ಸೋಂಕು ಪತ್ತೆಯಾದ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಇಂತಹ ಸೌಕರ್ಯಗಳ ಬಳಕೆಯನ್ನು ನಿರ್ಬಂಧಿಸಲಾಗುತ್ತದೆ. ವಲಯ ಆಯುಕ್ತರು ತಮ್ಮ ವ್ಯಾಪ್ತಿಯ ವಸತಿ ಸಮುಚ್ಚಯಗಳಿಗೆ ಭೇಟಿ ನೀಡಿ ಇಂತಹ ಸೌಕರ್ಯ ಬಳಕೆ ನಿರ್ಬಂಧಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ’ ಎಂದರು.

ಖಾಸಗೀಕರಣ–ಕೇಸರೀಕರಣದ ನೀತಿ: ವೈ.ಎಸ್.ವಿ. ದತ್ತ

‘ಅಧಿಕಾರ ಕಸಿಯುವ ಎನ್‌ಇಪಿ’

ಪ್ರಜಾವಾಣಿ ವಾರ್ತೆ


ವೈ.ಎಸ್.ವಿ. ದತ್ತ


ಬಸವರಾಜ್


ಸಿದ್ದರಾಮಯ್ಯ

ಬೆಂಗಳೂರು: ‘ಕೇಂದ್ರ ಸರ್ಕಾರವು ತರಾತುರಿಯಲ್ಲಿ ಜಾರಿ ಮಾಡಲು ಹೊರಟಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಒಕ್ಕೂಟ ವ್ಯವಸ್ಥೆಗೇ ಧಕ್ಕೆ ತರುತ್ತದೆ. ಶಿಕ್ಷಣದ ಸಂಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದ್ದಂತೆ, ಈ ಕ್ಷೇತ್ರದ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಹಕ್ಕನ್ನು ರಾಜ್ಯ ಸರ್ಕಾರಗಳು ಕಳೆದುಕೊಳ್ಳುತ್ತವೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸಮುದಾಯ ಕರ್ನಾಟಕ ಸಂಘಟನೆಯು ‘ನೂತನ ಶಿಕ್ಷಣ ನೀತಿ ಮತ್ತು ಒಕ್ಕೂಟ ಧರ್ಮ’ದ ಕುರಿತು ಆನ್‌ಲೈನ್‌ನಲ್ಲಿ ಸೋಮವಾರ ಏರ್ಪಡಿಸಿದ್ದ ಚರ್ಚೆಯಲ್ಲಿ ಮಾತನಾಡಿದ ಅವರು, ‘ಶಿಕ್ಷಣ ತಜ್ಞರು, ಉಪನ್ಯಾಸಕರು, ವಿರೋಧ ಪಕ್ಷಗಳು ಮತ್ತು ಪೋಷಕರ ಜೊತೆ ಚರ್ಚೆ ನಡೆಸದೆ ಏಕಪಕ್ಷೀಯವಾಗಿ ರೂಪಿಸಿರುವ ಈ ನೀತಿಯನ್ನು ಕೂಡಲೇ ಹಿಂಪಡೆಯಬೇಕು’ ಎಂದು ಒತ್ತಾಯಿಸಿದರು.

‘ಎಲ್ಲರ ಜೊತೆ ಚರ್ಚಿಸಿ, ಅಲ್ಲಿ ಮೂಡಿಬರುವ ಅಭಿಪ್ರಾಯದ ಆಧಾರದ ಮೇಲೆ ಮುಂದಿನ ತೀರ್ಮಾನ ಕೈಗೊಳ್ಳಬೇಕು’ ಎಂದೂ ಹೇಳಿದರು.

‘ಭಾಷಾ ಕಲಿಕೆಯನ್ನು ಕೇವಲ ಎರಡು ಸೆಮಿಸ್ಟರ್‌ಗಳಿಗೆ ಸೀಮಿತಗೊಳಿಸಲಾಗಿದೆ. ಕನಿಷ್ಠ ಆರು ಸೆಮಿಸ್ಟರ್ ಅಂದರೆ, ಮೂರು ವರ್ಷಗಳಾದರೂ ಭಾಷೆಯ ಕಲಿಕೆಗೆ ಆದ್ಯತೆ ನೀಡಬೇಕು’ ಎಂದರು.

ಜೆಡಿಎಸ್ ಮುಖಂಡ ವೈ.ಎಸ್.ವಿ. ದತ್ತ, ‘ಈ ನೀತಿಯು ಒಕ್ಕೂಟ ವ್ಯವಸ್ಥೆಯ ಜಾಯಮಾನಕ್ಕೆ ಹೊಂದುವುದಿಲ್ಲ. ಏಕೆಂದರೆ, ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೇ ತೆಗೆದುಕೊಂಡಿಲ್ಲ. ಹೊಸ ನೀತಿಯನ್ನು ರಾಜ್ಯಗಳ ಮೇಲೆ ಹೇರುವ ಕೆಲಸ ನಡೆಯುತ್ತಿದೆ’ ಎಂದರು.

‘ಪದವಿಯ ಅವಧಿಯನ್ನು ನಾಲ್ಕು ವರ್ಷಕ್ಕೆ ಏರಿಸಿರುವುದರಿಂದ ಗ್ರಾಮೀಣ ಪ್ರದೇಶ, ಹಿಂದುಳಿದ, ಕೆಳಸ್ತರದ ವಿದ್ಯಾರ್ಥಿಗಳಿಗೆ ಕಷ್ಟವಾಗಲಿದೆ. ಮೂರು ವರ್ಷಗಳ ಪದವಿಯ ಸಂದರ್ಭದಲ್ಲಿಯೇ, ಅರ್ಧಕ್ಕೆ ಶಿಕ್ಷಣ ತೊರೆದು ದುಡಿಯಲು ಹೋಗುವಂತಹ ಅನಿವಾರ್ಯತೆಯಲ್ಲಿ ಈ ವಿದ್ಯಾರ್ಥಿಗಳು ಇರುತ್ತಾರೆ. ಮುಂದೆ ಈ ಎನ್‌ಇಪಿಯ ಬಹುಶಿಸ್ತಿನ ಶಿಕ್ಷಣ ಪಡೆಯಲು ವರ್ಷಕ್ಕೆ ₹7 ಲಕ್ಷ ಖರ್ಚು ಮಾಡಬೇಕು. ಅಂದರೆ, ನಾಲ್ಕು ವರ್ಷಗಳ ಪದವಿ ಪೂರೈಸಲು ₹28 ಲಕ್ಷ ಬೇಕಾಗುತ್ತದೆ. ಬಡ ವಿದ್ಯಾರ್ಥಿಗಳಿಗೆ ಇದನ್ನು ಭರಿಸಲು ಸಾಧ್ಯವಾಗುತ್ತದೆಯೇ’ ಎಂದು ಅವರು ಪ್ರಶ್ನಿಸಿದರು.

‘ಪ್ರಾದೇಶಿಕ ಭಾಷೆಗಳು ಅಂದರೆ, ಕನ್ನಡ ಸಾಹಿತ್ಯ, ಸಂಸ್ಕೃತಿ, ಕಾವ್ಯದ ಕಲಿಕೆಯನ್ನು ಒಂದು ವರ್ಷಕ್ಕೇ ಮುಗಿಸಿಬಿಡಿ ಎನ್ನುವುದರ ಮೂಲಕ ನಮ್ಮ ಸಂಸ್ಕೃತಿಗೆ ಧಕ್ಕೆ ತರುವ ಕೆಲಸವನ್ನೂ ಕೇಂದ್ರ ಸರ್ಕಾರ ಮಾಡುತ್ತಿದೆ. ಭಾಷೆ, ಸಾಹಿತ್ಯ ಮತ್ತು ಪ್ರಾದೇಶಿಕ ಸೊಗಡನ್ನು ನಮ್ಮ ಮಕ್ಕಳಿಗೆ ಪರಿಚಯಿಸಬೇಕು ಎಂದು ಸಂವಿಧಾನವೇ ಹೇಳಿದೆ’ ಎಂದರು.

‘ಇತಿಹಾಸ ರಾಷ್ಟ್ರೀಯ ವಿಷಯವಲ್ಲ. ಈ ವಿಷಯವನ್ನೂ ರಾಷ್ಟ್ರೀಯಗೊಳಿಸುವ ಯತ್ನ ನಡೆಯುತ್ತಿದೆ. ಅಂದರೆ, ಷಹಜಹಾನ್–ಮುಮ್ತಾಜ್‌ರ ಪ್ರೇಮದ ಸಂಕೇತದಂತಿರುವ ತಾಜ್‌ಮಹಲ್ ಕೇಸರೀಕರಣದ ಪಂಡಿತರ ಕೈಗೆ ಸಿಕ್ಕು ತೇಜೋಮಹಲ್ ಅಥವಾ ಇನ್ನಾವುದಾದರೂ ದೇವಸ್ಥಾನವಾಗಿಬಿಡುತ್ತದೆ. ಇದು ಖಾಸಗೀಕರಣ ಮತ್ತು ಕೇಸರೀಕರಣದ ನೀತಿ’ ಎಂದು ಟೀಕಿಸಿದರು.

ಜೆಎನ್‌ಯು ಕನ್ನಡ ಅಧ್ಯಯನ ಪೀಠದ ನಿವೃತ್ತ ಮುಖ್ಯಸ್ಥ ಪುರುಷೋತ್ತಮ ಬಿಳಿಮಲೆ, ಸಮುದಾಯ ಕರ್ನಾಟಕದ ಅಧ್ಯಕ್ಷ ಅಚ್ಯುತ, ಜನವಾದಿ ಸಂಘಟನೆಯ ಕೆ.ಎಸ್. ವಿಮಲಾ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದರು.

‘ಕನ್ನಡ, ಕನ್ನಡಿಗರ ಮೇಲಿನ ದಾಳಿ’

‘ಹೊಸ ಶಿಕ್ಷಣ ನೀತಿಯು ಭಾಷಾ ಶಿಕ್ಷಣವನ್ನು ಮೊಟಕುಗೊಳಿಸುವ ಮೂಲಕ ಪರೋಕ್ಷವಾಗಿ ಕನ್ನಡ ಮತ್ತು ಕನ್ನಡಿಗರ ಮೇಲೆ ದಾಳಿ ನಡೆಸುವ ಹುನ್ನಾರವಾಗಿದೆ’ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ದೂರಿದರು.

‘ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಪರ ಇರುವ ಕೇಂದ್ರಸರ್ಕಾರವಿದು. ಸಾರ್ವಜನಿಕ ರಂಗವನ್ನು ಆದಷ್ಟು ಬೇಗ ತಮ್ಮ ಕಪಿಮುಷ್ಠಿಗೆ ತೆಗೆದುಕೊಳ್ಳಬೇಕು ಎಂದು ಕಾರ್ಪೊರೇಟ್ ಕಂಪನಿಗಳು ಹವಣಿಸುತ್ತಿವೆ. ಈಗ ಶಿಕ್ಷಣ ಕ್ಷೇತ್ರವನ್ನೂ ತಮ್ಮ ಸುಪರ್ದಿಗೆ ತೆಗೆದುಕೊಳ್ಳಲು ಖಾಸಗಿ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಇಂತಹ ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಗೆ ಪೂರಕವಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ’ ಎಂದು ಆರೋಪಿಸಿದರು.

ನೂತನ ಶಿಕ್ಷಣ ನೀತಿ ಜಾರಿಗೆ ವಿರೋಧ

ಬೆಂಗಳೂರು: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ರಾಜ್ಯ ಸರ್ಕಾರ ಜಾರಿಗೊಳಿಸಲು ಹಠಾತ್ ಆಗಿ ನಿರ್ಧರಿಸಿರುವುದು ಪ್ರಜಾತಾಂತ್ರಿಕ ಶಿಕ್ಷಣ ಮತ್ತು ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಮೇಲಿನ ಪ್ರಹಾರ’ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಘಟಕದ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಹೇಳಿದ್ದಾರೆ.

‘ಎನ್‌ಇಪಿಯು ಬಡವರ ವಿರೋಧಿ, ಕಾರ್ಪೊರೇಟ್ ಪರವಾಗಿದೆ. ಶಿಕ್ಷಣ ತಜ್ಞರ, ಪೋಷಕರ, ವಿದ್ಯಾರ್ಥಿಗಳ ಅಭಿಪ್ರಾಯ ಪಡೆಯದೆ, ಉನ್ನತ ಶಿಕ್ಷಣ ಸಚಿವರು ಏಕಮುಖ ನಿರ್ಧಾರ ತೆಗೆದುಕೊಂಡು ಎನ್‌ಇಪಿ ಜಾರಿಗೆ ತರಲು ಹೊರಟಿದ್ದಾರೆ. ಇದು ಸರ್ವಾಧಿಕಾರಿ ಧೋರಣೆ’ ಎಂದೂ ಅವರು ಖಂಡಿಸಿದ್ದಾರೆ.

‘ಈ ನೀತಿಯಡಿ ಭಾಷೆಯನ್ನು ಕೇವಲ ಸಂಪರ್ಕ ಮತ್ತು ಸಂವಹನ ಮಾಧ್ಯಮವಾಗಿ ಕಲಿಸಲಿರುವುದರಿಂದ ಇದು ಭಾಷಾ ಸಂಸ್ಕೃತಿಯನ್ನು ಅವನತಿಗೆ ತಳ್ಳಲಿದೆ. ಜೊತೆಗೆ ವಿದ್ಯಾರ್ಥಿಯೂ ಶೇ 40 ರಷ್ಟು ಅಂಕಗಳನ್ನು (ಕ್ರೆಡಿಟ್‌ಗಳನ್ನು) ಆನ್‌ಲೈನ್ ಮೂಲಕವೂ ಪಡೆಯುವ ಅವಕಾಶ ನೀಡುವುದರಿಂದ ವಿಶ್ವವಿದ್ಯಾಲಯಗಳು ಇನ್ನುಮುಂದೆ ಕೇವಲ ಪ್ರಮಾಣಪತ್ರಗಳನ್ನು ವಿತರಿಸುವ ಅಂಗಡಿಗಳಂತಾಗಲಿವೆ’ ಎಂದಿದ್ದಾರೆ.

‘ಹಿಂಬಾಗಿಲಿನ ಮೂಲಕ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಇದನ್ನು ಕೂಡಲೇ ಕೈ ಬಿಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.


ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಐಪಿ (ಬೌದ್ಧಿಕ ಆಸ್ತಿ) ಘಟಕದ ಸ್ಥಾಪನೆ ಕುರಿತಂತೆ ವಿಶ್ವವಿದ್ಯಾಲಯ ಮತ್ತು ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ನಡುವೆ ಒಪ್ಪಂದ ಏರ್ಪಟ್ಟಿತು. ವಿಶ್ವವಿದ್ಯಾಲಯದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಸೃಷ್ಟಿಸುವ ಈ ಒಪ್ಪಂದಕ್ಕೆ ಕೆಎಸ್‌ಸಿಎಸ್‌ಟಿ ಕಾರ್ಯನಿರ್ವಾಹಕ ಕಾರ್ಯದರ್ಶಿ ಹೇಮಂತ್ ಕುಮಾರ್, ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ. ಸೂರ್ಯಪ್ರಸಾದ್ ಸಹಿ ಹಾಕಿದರು. ಮಂಡಳಿಯ ಹಕ್ಕುಸ್ವಾಮ್ಯ ಮಾಹಿತಿ ಕೇಂದ್ರದ ಕನ್ಸಲ್ಟಂಟ್ ವಿವೇಕ್ ಆನಂದ ಸಾಗರ್, ಸಂಪನ್ಮೂಲ ವ್ಯಕ್ತಿ ಅಂಶುಮಾನ್, ಕುಲಸಚಿವ ಡಾ. ಸಂದೀಪ್ ದೇಸಾಯಿ ಇದ್ದರು

‘ಕ್ಲಸ್ಟರ್‌ಗಳ ಮುಖೇನ ಕೈಮಗ್ಗ ವಲಯಕ್ಕೆ ನೆರವು’

ಬೆಂಗಳೂರು: ‘ಕೈಮಗ್ಗ ವಲಯವನ್ನು ಅಭಿವೃದ್ಧಿಗೊಳಿಸಲು ರಾಜ್ಯದಲ್ಲಿ ನೇಕಾರರು ಹಾಗೂ ಕುಶಲಕರ್ಮಿಗಳ ಕ್ಲಸ್ಟರ್‌ಗಳನ್ನು ಗುರುತಿಸಿ, ಅಗತ್ಯ ಆರ್ಥಿಕ ನೆರವು ನೀಡಲು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ನಿರ್ಧರಿಸಿದೆ’ ಎಂದು ನಬಾರ್ಡ್‌ನ ಕರ್ನಾಟಕ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ನೀರಜ್ ಕುಮಾರ್ ವರ್ಮಾ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಕೈಮಗ್ಗ ಉತ್ಪನ್ನಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಂಕೇತ ಹಾಗೂ ನೇಕಾರರ ಜೀವನಕ್ಕೆ ಆಧಾರ. ಆದರೆ, ಮಾರುಕಟ್ಟೆ ವ್ಯವಸ್ಥೆ ಹಾಗೂ ವಿವಿಧ ಸಮಸ್ಯೆಗಳಿಂದ ಕೈಮಗ್ಗ ಕ್ಷೇತ್ರ ನಶಿಸುತ್ತಿದೆ’ ಎಂದರು.

‘ಕ್ಲಸ್ಟರ್‌ಗಳ ರೂಪದಲ್ಲಿ ಕೈಮಗ್ಗ ಮತ್ತು ಅದರ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅವುಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಲು ಉದ್ದೇಶಿಸಲಾಗಿದೆ. ಕ್ಲಸ್ಟರ್‌ನಲ್ಲಿ 100ರಿಂದ ಗರಿಷ್ಠ ಒಂದು ಸಾವಿರಕ್ಕೂ ಹೆಚ್ಚು ಸದಸ್ಯರು ಇರಬಹುದು. ಒಂದು ಕ್ಲಸ್ಟರ್‌ಗೆ ಕನಿಷ್ಠ ₹50 ಲಕ್ಷದಿಂದ ₹2 ಕೋಟಿವರೆಗೆ ಅನುದಾನ ನೀಡಲಾಗುವುದು’ ಎಂದು ವಿವರಿಸಿದರು.


‘ಅನುದಾನದಲ್ಲಿ ಕೈಮಗ್ಗ ವಿನ್ಯಾಸ, ಕಚ್ಚಾ ವಸ್ತುಗಳ ಬೇಡಿಕೆ ಮತ್ತು ಪೂರೈಕೆ, ಮಾರುಕಟ್ಟೆ, ಕೌಶಲಗಳ ಬಗ್ಗೆ ತರಬೇತಿ ಸೇರಿದಂತೆ ಸಹಕಾರ ನೀಡಲಾಗುವುದು. ರಾಜ್ಯದಲ್ಲಿ ಈಗಾಗಲೇ ಉಡುಪಿ, ಧಾರವಾಡ, ಶಿವಮೊಗ್ಗ, ಮಂಡ್ಯ ಸೇರಿದಂತೆ ಆರು ಕ್ಲಸ್ಟರ್‌ಗಳನ್ನು ಗುರುತಿಸಿ, ಅಲ್ಲಿ ವಿವಿಧ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಉಡುಪಿ ಕ್ಲಸ್ಟರ್‌ಗೆ ‘ಜಿಐ ಟ್ಯಾಗ್’ ಕೂಡ ದೊರಕಿದೆ’ ಎಂದರು.

‘ಚನ್ನಪಟ್ಟಣದ ಗೊಂಬೆ, ಕೊಲ್ಹಾಪುರದ ಪಾದರಕ್ಷೆಯಂತಹ ಕರಕುಶಲ ಉತ್ಪನ್ನಗಳು ಮತ್ತು ಕಲಾವಿದರಿಗೂ ಉತ್ತೇಜನ ನೀಡಲಾಗುವುದು. ನೇಕಾರರು ಮತ್ತು ಕುಶಲಕರ್ಮಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು’ ಎಂದು ಹೇಳಿದರು.

CONNECT ಕ್ಲಾಸಿಫೈಡ್ಸ್

EDUCATION CORNER ಕ್ಲಾಸಿಫೈಡ್ಸ್


Sri S.T. Somashekar
President, Bharath Education Society
Minister for Co-operation, Govt of Karnataka


Sri B.L. Lakkegowda
Founder
B.E.S Institutions

PUBLIC NOTICE

PUBLIC NOTICE

My Clients **SMT. VIDYA. A. M. Wife of Anand V. Mailapur,** and SRI. ANAND V. MAILAPUR, Son of Vithal Rao Mailapur both residing at No.1675/1, "A" Block, 10th Main, 2nd Stage, Rajajinagar, Bengaluru-560010 intend to purchase the property bearing Municipal No. 24/2/1-2 PID No. 9-64-24/2/1-2, New PID No.066-M0093-62, situated at 1st Main Road, "E" Block, 2nd Stage, Rajajinagar, Bangalore-560 010, coming under the jurisdiction of Ward No.9 of BBMP, measuring East to West 35 (Thirty-five) feet and North to South 20 (Twenty) feet, in all having 700 square feet of area together with Buildings thereon from its Owner **SMT. VASAVI KUMAR,** Wife of Late A.S.N. Kumar, residing at No. MB 301, Golden Grand Apartment, Tumkur Road, Yeshwanthpur, Bangalore-560 022, she claims that she is the absolute owner in possession of the same. If any person/s financial institution/s and or statutory authorities has/have any claim right, title and /or interest in the said property and/or any objections/s to the proposed sale, the same may be communicated to the undersigned along with the supporting docu ments/s within 10 (Ten) days of the publication of this notice. In the absence of any claim/s and /or objections/s within the stipulated period, it shall be deemed that there is /are no claim/s in respect of the same and my clients will not be answerable to any claim/s put forth thereafter and will acquire a clear and marketable title to the Schedule Property without being liable for any claim/s put forth thereafter.

SCHEDULE PROPERTY

All that piece and parcel of the property bearing Municipal No. 24/2/1-2 PID No. 9-64-24/2/1-2, New PID No.066-M0093-62, situated at 1st Main Road, "E" Block, 2nd Stage, Rajajinagar, Bangalore-560 010, coming under the jurisdiction of Ward No.9 of BBMP, measuring East to West 35 (Thirty-five) feet and North to South 20 (Twenty) feet, in all having 700 square feet of area together with Buildings thereon built in with bricks and cement wall, red-oxide flooring, jungle wood doors and windows, ground floor having a built up area of 7 squares, first floor having built up area of 7 squares and second floor having 7 squares built-up area of RCC roofed and provided with Electricity, Water Supply and Sanitary linebils etc., and bounded on the East by : Road West by: 80 Feet Main Road South by: Remaining portion of property bearing old Municipal No. 24/2 belonging to M/s. R. Subbaiah Setty Son & Co North by: Remaining portion of property bearing old Municipal No. 24/2 belonging to Smt. Seethalakshmi.

R. Krishna Murthy, Advocate
No.9/18, 1st Cross, Akkamma Block, Dinnur Main Road,
R.T. Nagar, Bangalore- 560032
Mobile No.: 9845787035.
Date: 08-08-2021

JOB OPPORTUNITIES

Teachers/ Professors

WANTED TRAINED LADY TEACHERS to teach English and Maths in English Medium Primary School. Walk-in Interview on 11-8-2021 between 11.30AM and 1.30PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 77833-77387

Multiple Vacancy

REQUIRED IMMEDIATELY HR, Administration,Manager, Accounts,Supervisor, technical Mechanical, Electronics, Electrical, Computer Engineers -7676760299 /7676760399

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

AUTOMOTIVE

Four Wheelers Selling

Maruti

QUOTATIONS REQUIRED with/ without RC, accident vehicle KA-07 M-3890 Maruti Swift VDI January 2012, vehicle at M/s. Pratham Motors, Bellandur. 9449154992/ 9845058114

REAL ESTATE SELLING

Industrial & Factory

Outskirts

FACTORY FOR SALE
1) Plot area 20000 sq m2 Build up area 4000 sq m2 Kundaim Ind. Estate Kundaim Goa.
2) Plot area 13000 sqm2 build up area 6500 sqm2 Kundaim Ind. Estate Kundaim
3) Industrial land plot area 7387 sqm2 Opp. Hindustan Foods Company Usgaon Ponda-Goa.
7020793947
9422059384

PERSONAL

Lost

NOTICE IS hereby given that the below mentioned share certificates of ZENSAR TECHNOLOGIES LTD having their registered office at: Zensar knowledge Park Kharadi plot No.4, MIDC Pune-411004 are Lost/misplaced and the company is in the process of issuing duplicate share certificates in lieu thereof on request made by the Registered shareholder and on execution of documents required for issue of duplicate share certificates. Folio No.S 05884 Name of the registered shareholder- Sarika Rangaraj share certificate nos.3374 Distinctive nos.1857156 to 1857755 Number of shares: 600. Any person who has a valid claim on the said shares may lodge such claim with the company at the corporate office within 15 days here of failing which the company will issue duplicate share certificates and no claim will lie thereafter.

Change of Name

I VOHRA SAHISTABEN ARIFBHAI R/a #72, 2nd floor, 2nd cross, TCM Royan road, Siddharth Nagar, Bangalore-53 Have Changed my name to HASHMI SAHISTABEN RAFSAN vide Affidavit Dated 09/08/2021 Before Notary L. Shankaranarayana Bangalore

I, SHUBHANKAR, S/o. D.M. Hegde, aged about 19 years, R/at No. 740, Shivakrupa, 60 feet Road, Narayana Nagar 1st Phase, Doddakallasandra, Kanakapura Main Road, Bangalore-560062, have changed my Name to SHUBHANKAR HEGDE vide Affidavit dated 07.08.2021, sworn to before Notary T.Venkategowda, Bangalore

14844548H- NK/MT- SAMAR BAHADUR SINGH at ASC Centre (South) Bangalore changed my Minor Daughter's name AARUHI SINGH to ANVI SINGH notary KV Mani Bangalore.

CHANGE OF NAME
I, LOCHAN. L S/o. LOKESH.D.V. residing at No.54, V. Lokesh, 2nd 'A' Cross, Shani Mahatma Temple Street, Devasandra, Bengaluru-560036, have changed my name from **LOCHAN. L to L. LOCHAN YADAV,** vide affidavit dated 03/09/2020, before Notary, K.B.Sadhashivappa, Bangalore. Henceforth, I shall be called **L. LOCHAN YADAV** only.

I, PRASHANT KILPADY, residing at Flat #E-001, Vaishnavi Nakshathra Apartments, #9/36, Opposite APMC Yard, Tumkur Road, Bangalore-22 have changed my minor son's name from Siddhant Prashant Kilpady to Siddhant Kilpady vide Affidavit dated 07-08-2021 sworn before Notary K.P.Ramesh Bangalore.

WE NALLA KRUPA VARMA and SWAPNA VARMA NALLA both Husband and Wife, residing at No.550, 16th Main Road,4th Sector,HSR Layout, Bangalore-560102 declare that, our minor son`s name changed from PRATYUSH NALLA to PRRATYUSH NALLAA NALLA vide affidavit dated 9-8-2021 sworn before Notary K.V.Mani Bangalore-560030. Henceforth he shall be called as PRRATYUSH NALLAA NALLA in all future documents.

I, SRIHARSHA Kumar M.H S/O Ramakrishna Bhat M.H aged 39 years residing at 101, R V Lakshmana Vilas, 2nd main, 2nd Cross, Ramanjaneya Nagar, Bangalore-61 have changed our son's name from Aniruddha M.H (Aniruddha Mittur Hosamane) to Aniruddha Mitturu vide affidavit dated 04.08.2021 before Notary L. ShankarNarayan, Bangalore

I, JAYAM Anantharaman, w/o late Shri K. Anantharaman and daughter of B Venkatachalam, was named Jayalakshmi but also known as Jayam. References to Jayalakshmi Anantharaman as w/o K Anantharaman are references to me, Jayam Anantharaman.

15338311H, NK, Nagendra Singh, 1ATC my daughter name service record ANJALI instead of ANJALI CHAUDHARY notary H.G. Venkataramu, Bangalore.

I,SOSAMMA SHIBU resident of No.93, 10th Main, 10th Cross, Maruthinagar, Malleshpalya Extn,New Thippasandra, Bengaluru-560075 have changed my name to SHINU SHIBU vide affidavit dated 06.08.2021 sworn before notary A.R.Muneer Ahmed, Bangalore.

I PURNAMMA RAVIPATI 9B, Flt-102, Vagdevi Layout,Opp Vagdevi Vilas School, Munnekolala, Bengaluru-37 have changed my name to PURNAMMA SWARNA vide affidavit dated 09/08/2021 before notary K.V. Mani. Bangalore.

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189



Business Offers

Finance

INVEST 10K-TO 2-Lacs in Trading, Multiple Businesses, Weekly/Monthly 10% secured Fixed Returns. Agents,VRS,RTD, Housewives, Freelancers Also Welcome (Good Income).Call:- 7892818780.

ಪೊಲೀಸರ ದಂಡವನ್ನು ಕಾನೂನಿನಡಿ ಪ್ರಶ್ನಿಸಲು ಅವಕಾಶ • ಫೋಟೊ, ವಿಡಿಯೊ ಪ್ರಮಾಣೀಕರಿಸದ ಪೊಲೀಸರು

ರಸ್ತೆಯಲ್ಲೇ 'ರಾಜಿ': ಮೊಕದ್ದಮೆಗೆ ಜನರ ನಿರಾಸಕ್ತಿ

• ಸಂತೋಷ ಜಿಗಳಿಕೊಪ್ಪ



ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬೆಂಗಳೂರು: ಸಂಚಾರ ಪೊಲೀಸರ ದಂಡ ಸಂಗ್ರಹ ಪ್ರಕ್ರಿಯೆಯ ಬಹುತೇಕ ಅಂಶಗಳು ಕಾನೂನಿನ ಉಲ್ಲಂಘನೆಯಾಗಿದ್ದು, ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿದ್ದರೂ ಜನರು ನಿರಾಸಕ್ತಿ ತೋರುತ್ತಿದ್ದಾರೆ. ಇದರಿಂದಾಗಿಯೇ ಪೊಲೀಸರು, ಸ್ಥಳದಲ್ಲೇ ಕಾನೂನಿನ 'ರಾಜಿ' ಅಸ್ತ್ರ ಬಳಸಿಕೊಂಡು ದಂಡ ವಸೂಲಿ ಮಾಡುತ್ತಿದ್ದಾರೆ.

ದೇಶದೆಲ್ಲೆಡೆ ವಾಹನಗಳ ಬಳಕೆ ಹೆಚ್ಚಿರುವ ಕಾರಣಕ್ಕೆ ಸುಗಮ ಸಂಚಾರ ವ್ಯವಸ್ಥೆಗಾಗಿ ಮೋಟಾರು ವಾಹನಗಳ ಕಾಯ್ದೆ ಜಾರಿಗೆ ತರಲಾಗಿದೆ. ಸಂಚಾರ ನಿಯಮ ಉಲ್ಲಂಘನೆ, ದಂಡ ಸಂಗ್ರಹ, ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಸೇರಿದಂತೆ ಹಲವು ಸಂಗತಿಗಳನ್ನು ಕಾಯ್ದೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಕಾಯ್ದೆಯನ್ನೇ ಉಲ್ಲಂಘಿಸಿ ಸಂಚಾರ ಪೊಲೀಸರು ನಡೆದುಕೊಳ್ಳುತ್ತಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

'ಪೊಲೀಸರ ದಂಡ ವ್ಯವಸ್ಥೆಯನ್ನು ಪ್ರಶ್ನಿಸಲು ಕಾನೂನಿನಡಿ ಅವಕಾಶವಿದೆ. ನ್ಯಾಯಾಲಯಕ್ಕೆ ಹೋದರೆ ವಕೀಲರ ನೇಮಕ ಹಾಗೂ ಇತರೆ ಕೆಲಸಕ್ಕೆ ಹಣ ಖರ್ಚಾಗುತ್ತದೆಂದು ತಿಳಿಯುತ್ತಿರುವ ಜನ, ತಪ್ಪು ಒಪ್ಪಿಕೊಂಡು 'ರಾಜಿ ಪಂಚಾಯಿತಿ' ಮೂಲಕ ಸ್ಥಳದಲ್ಲೇ ಪೊಲೀಸರಿಗೆ ಹಣ ಕೊಟ್ಟು ಕೈ ತೊಳೆದುಕೊಳ್ಳುತ್ತಿದ್ದಾರೆ' ಎಂದು ವಕೀಲ ವಿನಯ್ ವೇಣುಗೋಪಾಲ್ ಹೇಳಿದರು.

'ರಾಜಿ ಪಂಚಾಯಿತಿಗೂ ಕಾನೂನಿನಲ್ಲಿ ಅವಕಾಶವಿದೆ. ಬಹುತೇಕರು ಇದನ್ನೇ ಒಪ್ಪಿಕೊಂಡಿದ್ದಾರೆ. ಆಕಸ್ಮಾತ್, ಇವರಲ್ಲಿ ಕೆಲವರು ನ್ಯಾಯಾಲಯಕ್ಕೆ ಹೋಗಿ ಮೊಕದ್ದಮೆ ಹೂಡಿದ್ದರೆ ಪೊಲೀಸರಿಗೆ ಕಾನೂನಿನ ಬಿಸಿ ಮುಟ್ಟುತ್ತಿತ್ತು. ಅವರ ಅಕ್ರಮಗಳು ಬಯಲಾಗುತ್ತಿದ್ದವು. ಸಾರ್ವಜನಿಕರಿಗೆ ಇಂದು ಆಗುತ್ತಿರುವ ಕಿರಿಕಿರಿಯೂ ತಪ್ಪುತ್ತಿತ್ತು' ಎಂದೂ ತಿಳಿಸಿದರು.

ಫೋಟೊ, ವಿಡಿಯೊ ಪ್ರಮಾಣೀಕರಿಸದ ಪೊಲೀಸರು: 'ಯಾವುದೇ ಪ್ರಕರಣದಲ್ಲಿ ಫೋಟೊ ಹಾಗೂ ವಿಡಿಯೊವನ್ನು ಮಾತ್ರ ಸಾಕ್ಷ್ಯವಾಗಿ ಪರಿಗಣಿಸಲು ಸಾಧ್ಯವಿಲ್ಲವೆಂದು ಸುಪ್ರೀಂ ಕೋರ್ಟ್ ಹಲವು ಆದೇಶಗಳಲ್ಲಿ ಹೇಳಿದೆ. ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಅಡಿ ಫೋಟೊ ಹಾಗೂ ವಿಡಿಯೊವನ್ನು ಕಡ್ಡಾಯವಾಗಿ ತಾಂತ್ರಿಕ ಪರಿಣಿತರ ವರದಿ ಸಮೇತ ಪ್ರಮಾಣೀಕರಿಸಬೇಕು. ಈ ಕೆಲಸವನ್ನು ಪೊಲೀಸರು ಮಾಡುತ್ತಿಲ್ಲ. ಇದನ್ನು ಯಾರೊಬ್ಬರೂ ಪ್ರಶ್ನಿಸುತ್ತಿಲ್ಲ' ಎಂದೂ ವಿನಯ್ ಹೇಳಿದರು.

'ಫೋಟೊ ಹಾಗೂ ವಿಡಿಯೊ ಆಧರಿಸಿ ಹಳೇ ಪ್ರಕರಣಗಳಿಗೆ ಪೊಲೀಸರು ದಂಡ ವಿಧಿಸುತ್ತಿದ್ದಾರೆ. ಇಂಥ ಬಹುತೇಕ ಪ್ರಕರಣಗಳು ಕಾನೂನಿನಡಿ ಅಸಿಂಧು. ಸ್ಥಳದಲ್ಲೇ ಮಾಡಿದ ಉಲ್ಲಂಘನೆಗೆ ಮಾತ್ರ ಪೊಲೀಸರು ದಂಡ ಸಂಗ್ರಹಿಸಬೇಕು. ಹಳೇ ಪ್ರಕರಣಗಳ ದಂಡವನ್ನು ನ್ಯಾಯಾಲಯದಲ್ಲೇ ಪಾವತಿಸಬೇಕೆಂಬ ನಿಯಮವಿದೆ. ಇದು ಸಹ ಪಾಲನೆಯಾಗುತ್ತಿಲ್ಲ' ಎಂದೂ ಅವರು ತಿಳಿಸಿದರು.

'ವಾಹನಗಳ ದಾಖಲೆಗಳನ್ನು ಹಾಜರುಪಡಿಸಲು 15 ದಿನಗಳ ಕಾಲಾವಧಿ ಇರುತ್ತದೆ. ತಪ್ಪು ಮಾಡದಿದ್ದರೂ ದಂಡ ಹಾಕಿದ್ದರೆ, ಆ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತ ವಕೀಲರ ಸಲಹೆ ಸಹ ಸಿಗಲಿದೆ' ಎಂದು ಹೇಳಿದರು.

ಎಸಿಬಿಗೆ ದೂರು ನೀಡಲು ಅವಕಾಶ: 'ಸಂಚಾರ ಪೊಲೀಸರು ಲಂಚ ಪಡೆದರೆ, ಅದರ ಫೋಟೊ ಅಥವಾ ವಿಡಿಯೊ ಚಿತ್ರೀಕರಣ ಮಾಡಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಲು ಅವಕಾಶವಿದೆ' ಎಂದು ವಕೀಲ ಎಸ್. ಸುಧನ್ವ ಹೇಳಿದರು.

'ಹೆಚ್ಚು ದಂಡ ವಸೂಲಿ ಮಾಡಬೇಕೆಂಬ ಗುರಿ ಇಟ್ಟುಕೊಂಡು ರಸ್ತೆಗೆ ಇಳಿಯುವ ಪೊಲೀಸರು, ವಿನಾಕಾರಣ ಜನರ ವಾಹನಗಳನ್ನು ನಡುರಸ್ತೆಯಲ್ಲೇ ಅಡ್ಡಗಟ್ಟುತ್ತಿದ್ದಾರೆ. ಇದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಇದಕ್ಕೆ ಪೊಲೀಸರೇ ನೇರ ಹೊಣೆ' ಎಂದೂ ತಿಳಿಸಿದರು.

'ಸಣ್ಣ ಮೊತ್ತವೆಂಬ ಕಾರಣಕ್ಕೆ ಸಾರ್ವಜನಿಕರು ಪೊಲೀಸರ ಜೊತೆ ವಾದ ಮಾಡದೇ ದಂಡ ಕಟ್ಟಿ ಹೋಗುತ್ತಿದ್ದಾರೆ. ಇದನ್ನೇ ದುರುಪಯೋಗಪಡಿಸಿಕೊಂಡು ಪೊಲೀಸರು, ಜನರಿಗೆ ಕಿರಿಕಿರಿ ನೀಡಿ ದಂಡ ಸಂಗ್ರಹಿಸುತ್ತಿದ್ದಾರೆ. ಇದನ್ನು ಕಾನೂನಿನಡಿ ಪ್ರಶ್ನಿಸಬೇಕಾದ ಸಂದರ್ಭ ಬಂದಿದೆ' ಎಂದೂ ಹೇಳಿದರು.

'ಪ್ರಕರಣಗಳ ಇತ್ಯರ್ಥಕ್ಕೆ 5 ಎಂಎಂಟಿಸಿ ನ್ಯಾಯಾಲಯ'

'ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಇತ್ಯರ್ಥಕ್ಕಾಗಿ ನಗರದಲ್ಲಿ 5 ಎಂಎಂಟಿಸಿ (ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಟ್ರಾಫಿಕ್ ಕೋರ್ಟ್)' ಕಾರ್ಯನಿರ್ವಹಿಸುತ್ತಿವೆ. ಅಲ್ಲಿ ಪ್ರಕರಣಗಳ ಒತ್ತಡ ಹೆಚ್ಚಿದ್ದು, ಮತ್ತಷ್ಟು ಶಾಶ್ವತ ನ್ಯಾಯಾಲಯಗಳ ಅಗತ್ಯವಿದೆ' ಎಂದು ವಿನಯ್ ವೇಣುಗೋಪಾಲ್ ಹೇಳಿದರು.

'ಅಪಘಾತ, ಅದರಿಂದಾದ ಸಾವು–ನೋವು ಪ್ರಕರಣಗಳೂ ಎಂಎಂಟಿಸಿಯಲ್ಲಿ ವಿಚಾರಣೆ ನಡೆಸಲಾಗುತ್ತದೆ. ಅದರ ಜೊತೆಯಲ್ಲೇ ಎನ್‌ಡಿಪಿಎಸ್ ಹಾಗೂ ವಿಶೇಷ ಪ್ರಕರಣಗಳ ವಿಚಾರಣೆಯೂ ಆಗುತ್ತದೆ. ಇದರ ಜೊತೆಯಲ್ಲೇ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನೂ ನ್ಯಾಯಾಲಯ ಪರಿಗಣಿಸುತ್ತಿದೆ. ಆದರೆ, ಅಂಥ ಪ್ರಕರಣಗಳ ಬಗ್ಗೆ ವಾದ–ಪ್ರತಿವಾದ ನಡೆಯುವುದು ತೀರಾ ಕಡಿಮೆ. ಇದು ಸಹ ಪೊಲೀಸರಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಿದೆ' ಎಂದೂ ಅವರು ತಿಳಿಸಿದರು.

'ಹಣ ಕೊಟ್ಟರೆ ಕಾನ್‌ಸ್ಟೆಬಲ್‌ಗಳಿಂದಲೂ ಪ್ರಕರಣ ಇತ್ಯರ್ಥ'

ದಂಡ ಜೊತೆಯಲ್ಲಿ ಕೈ ಬೀಸಿ ಮಾಡಿದರೆ ಕೆಲ ಕಾನ್‌ಸ್ಟೆಬಲ್‌ಗಳೇ ನ್ಯಾಯಾಲಯದಲ್ಲಿ ಓಡಾಡಿ ಪ್ರಕರಣ ಇತ್ಯರ್ಥಪಡಿಸಿಕೊಂಡು ಬರುತ್ತಿರುವ ದೂರುಗಳು ಕೇಳಿಬರುತ್ತಿವೆ.

'ಮದ್ಯ ಕುಡಿದು ವಾಹನ ಚಾಲನೆ ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದೆ. ನನ್ನ ಕಾರು ಹಾಗೂ ಚಾಲನಾ ಪರವಾನಗಿ (ಡಿ.ಎಲ್) ಜಪ್ತಿ ಮಾಡಿ, ನ್ಯಾಯಾಲಯದಲ್ಲಿ ದಂಡ ಪಾವತಿಸುವಂತೆ ರಶೀದಿ ನೀಡಿದ್ದರು. ಮರುದಿನವೂ ನನ್ನನ್ನು ಸಂಪರ್ಕಿಸಿದ್ದ ಕಾನ್‌ಸ್ಟೆಬಲೊಬ್ಬರು, 'ನೀವು ನ್ಯಾಯಾಲಯಕ್ಕೆ ಬರುವುದು ಬೇಡ. ದಂಡದ ಜೊತೆಯಲ್ಲಿ ಸ್ವಲ್ಪ ಹಣ ಕೊಡಿ. ನಾನೇ ಕಾರು ಹಾಗೂ ಡಿ.ಎಲ್ ಬಿಡಿಸಿಕೊಂಡು ಬರುತ್ತೇನೆ' ಎಂದಿದ್ದರು. ಹಣ ಕೊಡುತ್ತಿದ್ದಂತೆ ಅವರೇ ಎಲ್ಲ ಮಾಡಿಸಿಕೊಂಡು ಬಂದರು' ಎಂದು ಹೆಣ್ಣೂರು ನಿವಾಸಿಯೊಬ್ಬರು ಹೇಳಿದರು.

'ಪಿಐಎಲ್ ಸಲ್ಲಿಕೆಗೆ ತಯಾರಿ'

'ಪ್ರಜಾವಾಣಿಯಲ್ಲಿ ಪ್ರಕಟವಾಗುತ್ತಿರುವ 'ನಿತ್ಯ ಸಂಚಾರ– ಸದಾ ಕಿರಿಕಿರಿ' ಸರಣಿ ವರದಿಗಳನ್ನು ನಿತ್ಯವೂ ಓದುತ್ತಿದ್ದೇನೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲು ಇದೊಂದು ಅರ್ಹ ವಿಷಯ. ಹೀಗಾಗಿ, ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಲು ತಯಾರಿ ನಡೆಸಲಾಗುವುದು' ಎಂದು ವಕೀಲ ಉಮಾಶಂಕರ್ ಮೇಗುಂಡಿ ಹೇಳಿದರು.

'ಪೊಲೀಸರಿಂದ ಜನರಿಗೆ ಆಗುತ್ತಿರುವ ಕಿರಿಕಿರಿ ಬಗ್ಗೆ ಫೋಟೊ, ವಿಡಿಯೊ ಹಾಗೂ ಇತರೆ ದಾಖಲೆಗಳನ್ನು ಸಂಗ್ರಹಿಸಲಾಗುವುದು. ಜನರ ಅಭಿಪ್ರಾಯಗಳನ್ನು ಪಡೆದು, ಪಿಐಎಲ್ ಅರ್ಜಿಯಲ್ಲಿ ದಾಖಲಿಸಲಾಗುವುದು' ಎಂದೂ ತಿಳಿಸಿದರು.

'ದಂಡ' ಸಂಗ್ರಹ ತಾತ್ಕಾಲಿಕ ಸ್ಥಗಿತ ಉಪಕರಣ ಹಿಂಪಡೆದ ಟಿಎಂಸಿ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ನಗರದಲ್ಲಿ ವಾಹನ ಚಾಲಕರನ್ನು ಅಡ್ಡಗಟ್ಟಿ ದಂಡ ಸಂಗ್ರಹಿಸಲು ಪೊಲೀಸರು ಬಳಸುತ್ತಿದ್ದ ಉಪಕರಣಗಳನ್ನು ಸಂಚಾರ ನಿರ್ವಹಣಾ ಕೇಂದ್ರದ (ಟಿಎಂಸಿ) ಅಧಿಕಾರಿಗಳು ಸೋಮವಾರ ದಿಢೀರ್ ಹಿಂಪಡೆದಿದ್ದು, ದಂಡ ಸಂಗ್ರಹ ಕೆಲಸವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಸಂಚಾರ ಪೊಲೀಸರ ಶಿಸ್ತಿಲ್ಲದ ದಂಡ ಸಂಗ್ರಹದಿಂದ ಸಾರ್ವಜನಿಕರಿಗೆ ಆಗುತ್ತಿರುವ ಕಿರಿಕಿರಿ ಬಗ್ಗೆ 'ಪ್ರಜಾವಾಣಿ'ಯಲ್ಲಿ 'ನಿತ್ಯ ಸಂಚಾರ – ಸದಾ ಕಿರಿಕಿರಿ' ಸರಣಿ ವರದಿಗಳನ್ನು ಪ್ರಕಟಿಸಲಾಗುತ್ತಿದೆ. ವರದಿಗಳಿಂದ ಎಚ್ಚೆತ್ತ ಪೊಲೀಸ್ ಹಿರಿಯ ಅಧಿಕಾರಿಗಳು, ಏಕಾಏಕಿ ಮೌಖಿಕ ಆದೇಶ ಹೊರಡಿಸಿ ದಂಡ ಸಂಗ್ರಹ ಉಪಕರಣಗಳನ್ನು ವಾಪಸು ಪಡೆದಿದ್ದಾರೆ. ಮುಂದಿನ ಆದೇಶದವರೆಗೂ ದಂಡ ಸಂಗ್ರಹ ಮಾಡಲು ರಸ್ತೆಗೆ ಇಳಿಯದಂತೆಯೂ ಸೂಚಿಸಿದ್ದಾರೆಂದು ಗೊತ್ತಾಗಿದೆ.

'ಸೋಮವಾರ ಬೆಳಿಗ್ಗೆ ಎಂದಿನಂತೆ ದಂಡ ಸಂಗ್ರಹ ಕೆಲಸಕ್ಕೆ ಬಂದಿದ್ದೆವು. 'ದಂಡ ಸಂಗ್ರಹ ಸ್ಥಗಿತಗೊಳಿಸಿ, ಉಪಕರಣಗಳನ್ನು ಟಿಎಂಸಿಗೆ ತಂದುಕೊಡಿ' ಎಂಬುದಾಗಿ ನಿಯಂತ್ರಣ ಕೊಠಡಿಯಿಂದ ಸಂದೇಶ ಬಂದಿತ್ತು. ಉಪಕರಣಗಳನ್ನು ವಾಪಸು ಕೊಟ್ಟಿದ್ದೇವೆ. ಆದರೆ, ಕಾರಣ ಗೊತ್ತಾಗಿಲ್ಲ' ಎಂದು ಸಂಚಾರ ಪೊಲೀಸ್ ಸಿಬ್ಬಂದಿಯೊಬ್ಬರು ಹೇಳಿದರು.

'ನಗರದಲ್ಲಿ ಸೋಮವಾರ ಯಾವುದೇ ದಂಡ ಸಂಗ್ರಹ ಮಾಡಿಲ್ಲ. ಬಹುತೇಕ ಸಿಬ್ಬಂದಿಯನ್ನು ವಾಹನಗಳ ಸುಗಮ ಸಂಚಾರ ಕೆಲಸಕ್ಕೆ ನಿಯೋಜಿಸಲಾಗಿತ್ತು. ದಂಡ ಸಂಗ್ರಹ ಬಗ್ಗೆ ಹಿರಿಯ ಅಧಿಕಾರಿಗಳ ಮುಂದಿನ ಆದೇಶಕ್ಕೆ ಕಾಯುತ್ತಿದ್ದೇವೆ' ಎಂದೂ ತಿಳಿಸಿದರು.

ನಗರದ ಬಹುತೇಕ ರಸ್ತೆಗಳಲ್ಲಿ ಪೊಲೀಸರು ವಾಹನಗಳನ್ನು ಅಡ್ಡಗಟ್ಟುವ ಯಾವುದೇ ದೃಶ್ಯಗಳು ಕಂಡುಬರಲಿಲ್ಲ. ಬಹುತೇಕ ಸಿಬ್ಬಂದಿ, ವಾಹನಗಳ ದಟ್ಟಣೆ ನಿಯಂತ್ರಣದಲ್ಲಿ ತೊಡಗಿದ್ದು ಕಂಡುಬಂತು.

ಉಪಕರಣ ಹಿಂಪಡೆದ ಬಗ್ಗೆ ಪ್ರತಿಕ್ರಿಯಿಸಿದ ಸಂಚಾರ ಠಾಣೆಯೊಂದರ ಇನ್‌ಸ್ಪೆಕ್ಟರ್ ಒಬ್ಬರು, 'ಉಪಕರಣದಲ್ಲಿರುವ ತಂತ್ರಜ್ಞಾನವನ್ನು ನವೀಕರಣ ಮಾಡಬೇಕಿದೆ. ಹೀಗಾಗಿ, ಉಪಕರಣಗಳನ್ನು ವಾಪಸು ಪಡೆದಿರುವುದಾಗಿ ಗೊತ್ತಾಗಿದೆ' ಎಂದರು.



ಹೆಗ್ಗನಹಳ್ಳಿಯಲ್ಲಿ ಹಸಿರು ಪ್ರತಿಷ್ಠಾನದ ವತಿಯಿಂದ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಸಂಘಟನೆಗಳ ಮುಖಂಡರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ತಮಿಳುನಾಡಿನ ರಾಜಕೀಯ ಪ್ರೇರಿತ ಅಡೆತಡೆಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಣಿಯಬಾರದು. ಮೇಕೆದಾಟು ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು' ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಆಗ್ರಹಿಸಿದರು.

ಹೆಗ್ಗನಹಳ್ಳಿಯಲ್ಲಿ ಹಸಿರು ಪ್ರತಿಷ್ಠಾನದ ವತಿಯಿಂದ ಶನಿವಾರ ಆಯೋಜಿಸಿದ್ದ ಮೇಕೆದಾಟು ಯೋಜನೆ ಅನುಷ್ಠಾನ ಕುರಿತ ಸಮಾಲೋಚನೆ ಸಭೆಯಲ್ಲಿ ಅವರು ಮಾತನಾಡಿದರು.

'ಮುಂದಿನ 10 ವರ್ಷದಲ್ಲಿ ಬೆಂಗಳೂರಿನ ಜನಸಂಖ್ಯೆ ಎರಡು ಕೋಟಿ ಮೀರಲಿದೆ. ಇವರಿಗೆ ನೀರಿನ ಅಭಾವ ಎದುರಾಗಲಿದ್ದು, ಮುಂಜಾಗ್ರತಾ ಕ್ರಮವಾಗಿ ಮೇಕೆದಾಟು ಯೋಜನೆ ಜಾರಿಯಾಗುವುದರಿಂದ ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ನೀರಿನ ಬವಣೆ ನೀಗಲಿದೆ' ಎಂದು ಸಲಹೆ ನೀಡಿದರು.

ಹಸಿರು ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ.ಕುಮಾರ್ ಮಾತನಾಡಿ, 'ತಮಿಳುನಾಡಿನ ರಾಜಕೀಯ ವನ್ನು ಎಲ್ಲ ಕನ್ನಡಿಗರು ಹಿಮ್ಮೆಟ್ಟಿಸಬೇಕು. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು, ಯೋಜನೆಯನ್ನು ಪೂರ್ಣಗೊಳಿಸಬೇಕು' ಎಂದು ಒತ್ತಾಯಿಸಿದರು.

ಜಯ ಕರ್ನಾಟಕ ಸಂಘಟನೆಯ ಬಿ.ಎನ್.ಜಗದೀಶ್ ಮಾತನಾಡಿ 'ರಾಜ್ಯದ ಎಲ್ಲ ಸಂಸದರು ಮೇಕೆದಾಟು ಯೋಜನೆ ಅನುಷ್ಠಾನದ ಬಗ್ಗೆ ಕೇಂದ್ರಕ್ಕೆ ಏಕೆ ಒತ್ತಾಯಿಸುತ್ತಿಲ್ಲ, ಸಂಘಟನೆಗಳು ಮಾತ್ರ ಹೋರಾಟ ಮಾಡಬೇಕೆ?' ಎಂದು ಪ್ರಶ್ನಿಸಿದರು.

ಸಭೆಯಲ್ಲಿ ಕನ್ನಡಪರ ಚಿಂತಕ ವ.ಚ.ಚನ್ನೇಗೌಡ, ಎಂ.ಪ್ರಕಾಶ್ ಮೂರ್ತಿ, ಡಾ ಆಂಜನಪ್ಪ, ಯುವರಾಜ, ನಾಗರತ್ನ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಬಿಜೆಪಿ ಕಾರ್ಯಕರ್ತರ ವಿರುದ್ಧದ ಪ್ರಕರಣ ಹಿಂಪಡೆಯಲು ಮನವಿ

ಬೆಂಗಳೂರು: ರಾಜ್ಯದ ವಿವಿಧೆಡೆ ಬಿಜೆಪಿ ಮತ್ತು ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ದುರುದ್ದೇಶಪೂರ್ವಕವಾಗಿ ದಾಖಲಿಸಲಾಗಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸೋಮವಾರ ವಿಕಾಸಸೌಧದಲ್ಲಿ ಗೃಹ ಸಚಿವರನ್ನು ಭೇಟಿಮಾಡಿ ಈ ಸಂಬಂಧ ಅಧಿಕೃತವಾಗಿ ಮನವಿ ಪತ್ರವೊಂದನ್ನು ಸಲ್ಲಿಸಿದರು.

'ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳೂ ಸೇರಿದಂತೆ ರಾಜ್ಯದ ವಿವಿಧೆಡೆ ಬಿಜೆಪಿ ಹಾಗೂ ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ದುರುದ್ದೇಶ ಪೂರ್ವಕವಾಗಿ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿದೆ. ಅಂಥ ಪ್ರಕರಣಗಳನ್ನು ಹಿಂಪಡೆಯುವಂತೆ ಕಾರ್ಯಕರ್ತರು ಮನವಿ ಸಲ್ಲಿಸಿರುತ್ತಾರೆ. ಈ ಕಾರಣದಿಂದ ರಾಜ್ಯದ ವಿವಿಧೆಡೆ ಬಿಜೆಪಿ, ಸಂಘ ಪರಿವಾರದ ಕಾರ್ಯಕರ್ತರವಿರುದ್ಧ ದಾಖಲಾಗಿರುವ ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

ಗೃಹ ಇಲಾಖೆ ಬಲವರ್ಧನೆಗೆ ಪ್ರಯತ್ನ: ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬ್ಬಂದಿ ಕೊರತೆಯನ್ನು ಪರಿಹರಿಸಿ, ಆಧುನೀಕರಣಕ್ಕೆ ಒತ್ತು ನೀಡುವ ಮೂಲಕ ಗೃಹ ಇಲಾಖೆಯ ಬಲವರ್ಧನೆಗೆ ಪ್ರಯತ್ನಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಗೃಹ ಸಚಿವರಾದ ಬಳಿಕ ಸೋಮವಾರ ವಿಕಾಸಸೌಧದಲ್ಲಿ ಮೊದಲ ಬಾರಿಗೆ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಐಪಿಎಸ್ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಮೊದಲ ಬಾರಿಗೆ ಇಲಾಖೆಯ ಅಧಿಕಾರಿಗಳ ಜತೆ ಸಭೆ ನಡೆಸಿದ್ದೇನೆ. ಪೊಲೀಸರನ್ನು ನಂಬಿ ಜನರು ನೆಮ್ಮದಿಯಿಂದ ನಿದ್ರೆ ಮಾಡುತ್ತಾರೆ. ಜನರು ಇನ್ನಷ್ಟು ನೆಮ್ಮದಿಯಿಂದ ಬದುಕುವ ವಾತಾವರಣ ಪೊಲೀಸ್ ಇಲಾಖೆಯಿಂದ ಆಗಬೇಕಿದೆ' ಎಂದರು.

ಹಂತಹಂತವಾಗಿ ಸಿಬ್ಬಂದಿ ನೇಮಕ: ಪೊಲೀಸ್ ಇಲಾಖೆಯಲ್ಲಿ 16,000ದಷ್ಟು ಸಿಬ್ಬಂದಿ ಕೊರತೆ ಇದೆ. ಹಂತಹಂತವಾಗಿ ಸಿಬ್ಬಂದಿ ನೇಮಿಸಲಾಗುವುದು. ಅತ್ಯಾಧುನಿಕ ಯಂತ್ರೋಪಕರಣಗಳನ್ನು ಒದಗಿಸುವ ಮೂಲಕ ಇಲಾಖೆಯನ್ನು ಆಧುನೀಕರಣ ಮಾಡಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

ಡ್ರಗ್ ಮಾಫಿಯಾದ ವಿರುದ್ಧದ ಕಾರ್ಯಾಚರಣೆ ಮುಂದುವರಿಯಲಿದೆ. ಪೊಲೀಸರು ವಶಪಡಿಸಿಕೊಂಡಿರುವ ಟನ್‌ಗಟ್ಟಲೆ ಮಾದಕವಸ್ತುಗಳನ್ನು ಶೀಘ್ರದಲ್ಲಿ ನಾಶಪಡಿಸಲಾಗುವುದು. ಬೆಂಗಳೂರಿನಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ಪುಂಡಾಟ ನಿಯಂತ್ರಣಕ್ಕೆ ಬಿಗಿ ಕ್ರಮ ಕೈಗೊಳ್ಳಲಾಗುವುದು ಎಂದು ಆರಗ ಜ್ಞಾನೇಂದ್ರ ತಿಳಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿದ್ದರು.



ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಸೋಮವಾರ ವಿಕಾಸಸೌಧದಲ್ಲಿ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ತುರ್ತು ಸಂದರ್ಭದಲ್ಲಷ್ಟೆ 'ಝೀರೋ ಟ್ರಾಫಿಕ್'

ಸಾಮಾನ್ಯ ಸಂದರ್ಭಗಳಲ್ಲಿ ತಮಗೆ ಹೆಚ್ಚಿನ ಬೆಂಗಾವಲು ಮತ್ತು ಪೈಲಟ್ ವಾಹನಗಳೊಂದಿಗೆ 'ಝೀರೋ ಟ್ರಾಫಿಕ್' ಸೌಲಭ್ಯ ಕಲ್ಪಿಸುವುದು ಬೇಡ. ತುರ್ತು ಸಂದರ್ಭ ಮತ್ತು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ಈ ಸೌಲಭ್ಯ ಒದಗಿಸಿದರೆ ಸಾಕು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ನನಗೆ ಎಲ್ಲ ಸಂದರ್ಭದಲ್ಲೂ ಝೀರೋ ಟ್ರಾಫಿಕ್ ವ್ಯವಸ್ಥೆ ಬೇಡ. ಅದರಿಂದ ಜನರಿಗೆ ತೊಂದರೆ ಆಗುತ್ತದೆ. ನನಗೂ ಮುಜುಗರ ಆಗುತ್ತದೆ' ಎಂದು ಗೃಹ ಸಚಿವರು ಅಧಿಕಾರಿಗಳಿಗೆ ಹೇಳಿದ್ದಾರೆ.

ಪೊಲೀಸರು ಸಮಾಜಘಾತುಕ ಶಕ್ತಿಗಳು, ಅಪರಾಧ ಪ್ರವೃತ್ತಿಯವರ ಜತೆ ಸಂಪರ್ಕ ಇರಿಸಿಕೊಳ್ಳುವುದನ್ನು ಸಹಿಸುವುದಿಲ್ಲ. ಯಾವುದೇ ಅಧಿಕಾರಿ ಅಂತಹ ತಪ್ಪು ಮಾಡಿದರೆ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು ಎಂಬ ಎಚ್ಚರಿಕೆಯನ್ನೂ ಗೃಹ ಸಚಿವರು ಅಧಿಕಾರಿಗಳಿಗೆ ನೀಡಿದ್ದಾರೆ.

'ಈಶ್ವರಪ್ಪ ಜತೆ ಚರ್ಚಿಸುವೆ'

'ಬಿಜೆಪಿ ಕಾರ್ಯಕರ್ತರನ್ನು ಮುಟ್ಟಿದರೆ ಒಂದಕ್ಕೆ ಎರಡು ತೆಗೆದು ಬಿಡಿ ಎನ್ನುವಷ್ಟರ ಮಟ್ಟಿಗೆ ನಾವು ಬೆಳೆದಿದ್ದೇವೆ' ಎಂಬುದಾಗಿ ಪ್ರಚೋದನಕಾರಿ ಹೇಳಿಕೆ ನೀಡಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಪೊಲೀಸ್ ಇಲಾಖೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸುವುದೇ ಎಂಬ ಪ್ರಶ್ನೆಗೆ ಗೃಹ ಸಚಿವರು ನೇರ ಉತ್ತರ ನೀಡಲಿಲ್ಲ.

'ಈಶ್ವರಪ್ಪ ಅವರು ಯಾವ ಅರ್ಥದಲ್ಲಿ ಮಾತನಾಡಿದ್ದಾರೋ ಗೊತ್ತಿಲ್ಲ. ಅವರ ಜತೆ ಚರ್ಚಿಸುವೆ. ಅವರು ನಿಮಗೂ ಗೊತ್ತಲ್ಲವೆ? ಅವರನ್ನೇ ಕೇಳಿ' ಎಂದು ಜ್ಞಾನೇಂದ್ರ ಹೇಳಿದರು.

ಗಸ್ತು ತಿರುಗದ ಪೊಲೀಸರು: 'ಸಿಬಿಡಿ'ಯಲ್ಲಿ ಸುಲಿಗೆಕೋರರ ಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಸುತ್ತಮುತ್ತಲಿನ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಇತ್ತೀಚಿನ ದಿನಗಳಲ್ಲಿ ಸುಲಿಗೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ನಸುಕಿನಲ್ಲಿ ಓಡಾಡಲು ಜನ ಭಯ ಪಡುತ್ತಿದ್ದಾರೆ. ಪೊಲೀಸರು ಗಸ್ತು ತಿರುಗುವುದನ್ನೇ ಕಡಿಮೆ ಮಾಡಿದ್ದು, ಇದು ಸುಲಿಗೆಕೋರರಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಿದೆ.

ನಿತ್ಯವೂ ನಸುಕಿನಲ್ಲಿ ಬೈಕ್, ಆಟೊ ಹಾಗೂ ಕಾರಿನಲ್ಲಿ ಸುತ್ತಾಡುತ್ತಿರುವ ದುಷ್ಕರ್ಮಿಗಳು, ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದಾರೆ. ಚಾಕು ತೋರಿಸಿ ಕೊಲೆ ಬೆದರಿಕೆ ಹಾಕುತ್ತಿದ್ದಾರೆ. ಈ ಬಗ್ಗೆ ಹಲವರು ಪೊಲೀಸರಿಗೆ ದೂರು ನೀಡಿದ್ದು, ಸುಲಿಗೆಕೋರರ ಬಂಧನ ಮಾತ್ರ ಆಗಿಲ್ಲ.

'ಸಿಬಿಡಿಯಲ್ಲಿ ಇತ್ತೀಚೆಗೆ 7 ಸುಲಿಗೆ ಪ್ರಕರಣಗಳು ವರದಿಯಾಗಿದ್ದು, ನಸುಕಿನಲ್ಲಿ ಓಡಾಡಲು ಭಯವಾಗುತ್ತಿದೆ. ಪೊಲೀಸರು ಸಿಬಿಡಿಯಲ್ಲಿ ಗಸ್ತು ಹೆಚ್ಚಿಸಿ, ಸುಲಿಗೆಕೋರರನ್ನು ಬಂಧಿಸಬೇಕು' ಎಂದು ಸ್ಥಳೀಯರು ಆಗ್ರಹಿಸುತ್ತಿದ್ದಾರೆ.

ಆಟೊ ಅಡ್ಡಗಟ್ಟಿ ಸುಲಿಗೆ: ಸುಲಿಗೆ ಪ್ರಕರಣ ಸಂಬಂಧ ಪತ್ರಿಕಾ ವಿತರಕ ಎಸ್‌.ಟಿ. ತಿಮ್ಮಪ್ಪ ಎಂಬುವರು ಅಶೋಕ ನಗರ ಠಾಣೆಗೆ ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಾಗಿದೆ.

'ಸೋಮವಾರ ನಸುಕಿನ 4.15ರ ಸುಮಾರಿಗೆ ಆಟೊದಲ್ಲಿ ಪತ್ರಿಕೆಗಳ ಬಂಡಲ್ ಹಾಕಿಕೊಂಡು ಹೊರಟಿದ್ದೆ. ಬ್ರಿಗೇಡ್ ರಸ್ತೆಯಲ್ಲಿರುವ ಔಷಧಿ ಮಳಿಗೆಯೊಂದರ ಎದುರು ಪಲ್ಸರ್ ಬೈಕ್‌ನಲ್ಲಿ ಬಂದಿದ್ದ ಮೂವರು ಆಟೊ ಅಡ್ಡಗಟ್ಟಿದ್ದರು. ಸ್ಟೇರಿಂಗ್‌ಗೆ ಕಟ್ಟಿದ್ದ ಮೊಬೈಲ್ ಕಿತ್ತುಕೊಳ್ಳಲು ಯತ್ನಿಸಿದ್ದರು. ಅಕ್ಕ–ಪಕ್ಕದಲ್ಲೇ ಕುಳಿತು ಹೊರಗೆ ಹೋಗದಂತೆ ತಡೆದರು' ಎಂದೂ ದೂರಿನಲ್ಲಿ ತಿಮ್ಮಪ್ಪ ಹೇಳಿದ್ದಾರೆ.

'ಆಯುಧ ತೋರಿಸಿದ್ದ ಆರೋಪಿ ಗಳು, ಕೊಲೆ ಮಾಡುವ ಬೆದರಿಕೆಯೊಡ್ಡಿ ದ್ದರು. ಜೇಬಿಗೆ ಕೈ ಹಾಕಿ ₹ 2,000 ನಗದು ಕಿತ್ತುಕೊಂಡರು. ಸಹಾಯಕ್ಕಾಗಿ ಕಿರುಚಾಡುತ್ತಿದ್ದಂತೆ ಆರೋಪಿಗಳು ಸ್ಥಳದಿಂದ ಪರಾರಿಯಾದರು. ದುಷ್ಕರ್ಮಿಗಳು ನನ್ನ ತಲೆಗೆ ಚಾಕುವಿನಿಂದ ಚುಚ್ಚಿದ್ದಾರೆ. ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ.'

'ಅದೇ ರಸ್ತೆಯಲ್ಲೇ ಹೊರಟಿದ್ದ ಹಾಲು ಮಾರಾಟಗಾರ ಅಶ್ವಿನ್‌ಕುಮಾರ್ ಶರ್ಮ ಎಂಬುವರ ಬಳಿಯೂ ₹ 15 ಸಾವಿರ ಮೌಲ್ಯದ ಮೊಬೈಲ್‌ನ್ನು ಆರೋಪಿಗಳು ಸುಲಿಗೆ ಮಾಡಿರುವುದು ಗೊತ್ತಾಯಿತು. ಆರೋಪಿಗಳು 20–22 ವರ್ಷದವರಾಗಿದ್ದು, ಅವರನ್ನು ಪತ್ತೆ ಮಾಡಿ' ಎಂದೂ ತಿಮ್ಮಪ್ಪ ದೂರಿನಲ್ಲಿ ಕೋರಿದ್ದಾರೆ.

ಸುಲಿಗೆ ಪ್ರಕರಣಗಳ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, 'ಸಿಬಿಡಿ ಪ್ರದೇಶದಲ್ಲಿ ಗಸ್ತು ಹೆಚ್ಚಿಸಲಾಗುವುದು. ಆರೋಪಿಗಳ ಪತ್ತೆಗೂ ತನಿಖೆ ಮುಂದುವರಿದಿದೆ' ಎಂದರು.

ಡ್ರಗ್ಸ್ ನಶೆಯಲ್ಲಿ ಕೃತ್ಯ

'ಅಪರಾಧ ಹಿನ್ನೆಲೆಯುಳ್ಳವರು ಡ್ರಗ್ಸ್ ನಶೆಯಲ್ಲಿ ಕೃತ್ಯ ಎಸಗುತ್ತಿರುವ ಮಾಹಿತಿ ಇದೆ. ಸದ್ಯದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

'ಗ್ರಾಮ ಸಂಪರ್ಕ ಅಭಿಯಾನ'ಕ್ಕೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮರ ಆಧಾರಿತ ಕೃಷಿಗೆ ಉತ್ತೇಜಿಸುವ ಸಲುವಾಗಿ ಜಗ್ಗಿ ವಾಸುದೇವ್ (ಸದ್ಗುರು) ನೇತೃತ್ವದ ಈಶ ಪ್ರತಿಷ್ಠಾನ ಆರಂಭಿಸಿರುವ 'ಗ್ರಾಮ ಸಂಪರ್ಕ ಅಭಿಯಾನ'ಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ' ಎಂದು ಪ್ರತಿಷ್ಠಾನದ ಸ್ವಯಂಸೇವಕ ಸ್ವಾಮಿ ತವಿಸಾ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಭಿಯಾನವು ಆಗಸ್ಟ್ 2 ರಿಂದ ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಾಮರಾಜನಗರ, ಹಾಸನ, ಕೊಡಗು, ಮೈಸೂರು, ಮಂಡ್ಯ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಆರಂಭಗೊಂಡಿದ್ದು, 24 ತಾಲ್ಲೂಕುಗಳಲ್ಲಿ 189 ಕಾರ್ಯಕ್ರಮಗಳು ನಡೆದಿವೆ' ಎಂದು ವಿವರಿಸಿದರು.

'ಗ್ರಾಮ ಪಂಚಾಯಿತಿಗಳಲ್ಲಿ ಈ ಅಭಿಯಾನವನ್ನು ಸ್ವಯಂಸೇವಕರಾದ 'ಮರ ಮಿತ್ರ'ರ ಮೂಲಕ ನಡೆಸಲಾಗುತ್ತಿದೆ. ಮರ ಆಧಾರಿತ ಕೃಷಿಯನ್ನು ಅಳವಡಿಸಿಕೊಳ್ಳಲು ಮತ್ತು ರೈತ ಸಮುದಾಯವನ್ನು ಬೆಂಬಲಿಸಲು ಸಮುದಾಯದ ಅನೇಕರನ್ನು ಇವರು ಒಗ್ಗೂಡಿಸಿದ್ದಾರೆ' ಎಂದರು.

'ಅಭಿಯಾನಕ್ಕಾಗಿ 'ಸ್ಟೇಟ್ ಆಫ್ ದಿ ಆರ್ಟ್' ಎಂಬ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಇದರಲ್ಲಿ ಹೆಸರು ನೋಂದಾಯಿಸಿಕೊಳ್ಳುವ ರೈತರ ಮನೆ ಬಾಗಿಲಿಗೆ 'ಮರ ಮಿತ್ರ'ರು ಸಸಿಗಳನ್ನು ತಲುಪಿಸುತ್ತಿದ್ದಾರೆ. ಅರಣ್ಯ, ರೇಷ್ಮೆ, ತೋಟಗಾರಿಕೆ, ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಸಹಯೋಗದಲ್ಲಿ ನಡೆಯುತ್ತಿರುವ ಈ ಅಭಿಯಾನ ಮುಂದಿನ ವಾರಗಳಲ್ಲಿ ಬೇರೆ ಜಿಲ್ಲೆಗಳಲ್ಲೂ ಮುಂದುವರಿಯಲಿದೆ' ಎಂದು ಹೇಳಿದರು.



ಈಶ ಪ್ರತಿಷ್ಠಾನದ ಸ್ವಾಮಿ ತವಿಸಾ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರವೀಣಾ ಶ್ರೀಧರ್ ಇದ್ದಾರೆ —ಪ್ರಜಾವಾಣಿ ಚಿತ್ರ

ತೋಟಗಾರಿಕೆ ಸಚಿವ ಮುನಿರತ್ನ ಹೇಳಿಕೆ

'ಕ್ಷೇತ್ರದ ಅಭಿವೃದ್ಧಿಗೆ ಕ್ರಮ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಉತ್ತರಹಳ್ಳಿ ಕ್ಷೇತ್ರ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದಾಗ ಯಾವುದೇ ಮೂಲಸೌಲಭ್ಯಗಳಿರಲಿಲ್ಲ. ಅಭಿವೃದ್ಧಿಯಿಂದ ವಂಚಿತವಾಗಿತ್ತು. ಈಗ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿದ್ದು, ಮಾದರಿ ಕ್ಷೇತ್ರವನ್ನಾಗಿ ರೂಪಿಸಲಾಗುವುದು' ಎಂದು ತೋಟಗಾರಿಕೆ ಸಚಿವ, ಕ್ಷೇತ್ರದ ಶಾಸಕ ಮುನಿರತ್ನ ಹೇಳಿದರು.

ಯಶವಂತಪುರದಲ್ಲಿ ಬಿಜೆಪಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಮೊದಲ ಬಾರಿ ಶಾಸಕನಾಗಿ ಅಭಿವೃದ್ಧಿ ಕೆಲಸಮಾಡಲು ನೂರಾರು ಕೋಟಿ ರೂಪಾಯಿ ಅನುದಾನ ನೀಡಿದ್ದರಿಂದ ಜನಪ್ರಿಯತೆ ಸಿಗಲು ಸಾಧ್ಯವಾಯಿತು' ಎಂದರು.

ಬಿಜೆಪಿ ಮುಖಂಡ ಜಿ.ಕೆ. ವೆಂಕಟೇಶ್, 'ಮುನಿರತ್ನ ಅವರು ಅಭಿವೃದ್ಧಿ ಕೆಲಸದ ಜೊತೆಗೆ ಬಡವರು, ಶೋಷಿತ ಜನಾಂಗದ ಪರವಾಗಿ ನಿಂತಿರುವುದರಿಂದ ನಾಯಕತ್ವ ಬೆಳೆಸಿಕೊಂಡು ಅಭಿವೃದ್ಧಿ ಕೆಲಸಮಾಡಲು ಸಾಧ್ಯವಾಯಿತು' ಎಂದರು.

ಬಿಜೆಪಿ ಮುಖಂಡ ವೇಲುನಾಯ್ಕರ್, 'ಮುನಿರತ್ನ ಅವರು ನೂರಾರು ಜನರಿಗೆ ವಸತಿ ಕಲ್ಪಿಸಿಕೊಟ್ಟದರಿಂದ ನಾಗರಿಕರು ಅವರ ನಾಯಕತ್ವ ಗುರುತಿಸಿ ಅತ್ಯಧಿಕ ಮತಗಳಿಂದ ಶಾಸಕರಾಗಿ ಪುನರಾಯ್ಕೆ ಮಾಡಿದ್ದಾರೆ' ಎಂದು ಪ್ರಶಂಸಿಸಿದರು.

ನೂರಾರು ಜನ ಕಾರ್ಯಕ್ರಮದಲ್ಲಿ ಸೇರಿದ್ದರು. ಅಂತರ ಕಾಯ್ದುಕೊಂಡಿರಲಿಲ್ಲ.



ಯಶವಂತಪುರದ ಬಿಜೆಪಿ ಕಾರ್ಯಕರ್ತರು ತೋಟಗಾರಿಕೆ ಸಚಿವ ಮುನಿರತ್ನ ಅವರಿಗೆ ಅಭಿನಂದಿಸಿದರು. ಕೋವಿಡ್ ಸೋಂಕು ಹರಡುವ ಅಪಾಯವಿದ್ದರೂ ಯಾರೂ ಅಂತರ ಕಾಯ್ದುಕೊಂಡಿರಲಿಲ್ಲ

₹ 2 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ: ಇಬ್ಬರು ಸೆರೆ

ಬೆಂಗಳೂರು: ಮಾದಕ ವಸ್ತು ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಟಿ ಮಾರ್ಕೆಟ್ ಪೊಲೀಸರು ಬಂಧಿಸಿದ್ದು, ಅವರಿಂದ ₹ 2 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ರಾಜಸ್ಥಾನದ ಪಪ್ಪುರಾಮ್ ಅಲಿಯಾಸ್ ಪಪ್ಪು (20) ಹಾಗೂ ಚುನ್ನಿಲಾಲ್ (20) ಬಂಧಿತರು. ಅವರಿಂದ 1 ಕೆ.ಜಿ 820 ಗ್ರಾಂ ಬ್ರೌನ್ ಶುಗರ್, 859 ಗ್ರಾಂ ಎಂಡಿಎಂಎ, 1 ಕೆ.ಜಿ 700 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿ.ಎ ವ್ಯಾಸಂಗ ಮಾಡುತ್ತಿದ್ದ ಆರೋಪಿ ಪಪ್ಪು, ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸಿದ್ದ. ಚುನ್ನಿಲಾಲ್ ಜೊತೆ ಸೇರಿ ಮಾದಕ ವಸ್ತು ಮಾರಲು ಆರಂಭಿಸಿದ್ದ. ರಾಜಸ್ಥಾನದಿಂದ ರೈಲಿನಲ್ಲಿ ಬೆಂಗಳೂರಿಗೆ ಮಾದಕ ವಸ್ತು ತರುತ್ತಿದ್ದ ಆರೋಪಿಗಳು, ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು. ಕೆಲ ಸಾಫ್ಟ್‌ವೇರ್ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಕಾಲೇಜು ವಿದ್ಯಾರ್ಥಿಗಳು ಗ್ರಾಹಕರಿದ್ದರು' ಎಂದೂ ಪೊಲೀಸರು ತಿಳಿಸಿದರು.

'ಗೋಡೌನ್ ಸ್ಟ್ರೀಟ್‌ನಲ್ಲಿ ಭಾನುವಾರ ಸಂಜೆ ಓಡಾಡುತ್ತಿದ್ದ ಆರೋಪಿಗಳು ಡ್ರಗ್ಸ್ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು. ಆರೋಪಿಗಳ ಮನೆ ಮೇಲೂ ದಾಳಿ ಮಾಡಿ ಡ್ರಗ್ಸ್ ಪತ್ತೆ ಮಾಡಲಾಗಿದೆ' ಎಂದೂ ವಿವರಿಸಿದರು.

'ನಗರದ ಹೊರವಲಯದ ಚಂದಾಪುರ, ಆನೇಕಲ್ ಹಾಗೂ ಸುತ್ತಮುತ್ತ ಬಾಡಿಗೆ ಮನೆಯಲ್ಲಿ ಆರೋಪಿಗಳು ವಾಸವಿರುತ್ತಿದ್ದರು. ಪೊಲೀಸರಿಗೆ ಸುಳಿವು ಸಿಗಬಾರದೆಂದು ಮೂರು ತಿಂಗಳಿಗೊಮ್ಮೆ ಮನೆ ಹಾಗೂ ಸಿಮ್‌ಕಾರ್ಡ್ ಬದಲಾಯಿಸುತ್ತಿದ್ದರು' ಎಂದೂ ಹೇಳಿದರು.

ವೇಶ್ಯಾವಾಟಿಕೆ ಆರೋಪ: ಬಂಧನ

ಹೊರರಾಜ್ಯದಿಂದ ಮಹಿಳೆಯರನ್ನು ಕಳ್ಳಸಾಗಣೆ ಮೂಲಕ ನಗರಕ್ಕೆ ಕರೆತಂದು ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪಿ ನವೀನ್ ಅಲಿಯಾಸ್ ಶರತ್‌ನನ್ನು (28) ಗೂಂಡಾ ಕಾಯ್ದೆಯಡಿ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಮಂಡ್ಯದ ನವೀನ್, ತನ್ನ ಸಹಚರರ ಜೊತೆ ಸೇರಿ ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿದ್ದ. ಹಲವು ಬಾರಿ ಪೊಲೀಸರಿಗೂ ಸಿಕ್ಕಿಬಿದ್ದು, ಜೈಲಿಗೆ ಹೋಗಿ ಬಂದಿದ್ದ. ನಗರದ ಕೆಲ ಹೋಟೆಲ್, ವಸತಿಗೃಹಗಳಲ್ಲಿ ಕೊಠಡಿ ಕಾಯ್ದಿರಿಸುತ್ತಿದ್ದ ಆರೋಪಿ, ಅಲ್ಲಿಯೇ ಯುವತಿಯರನ್ನು ಅಕ್ರಮ ಬಂಧನದಲ್ಲಿಡುತ್ತಿದ್ದ. ಗ್ರಾಹಕರನ್ನು ಕರೆಸಿ ವೇಶ್ಯಾವಾಟಿಕೆ ನಡೆಸುತ್ತಿದ್ದ ನವೀನ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಜೈಲಿನಿಂದ ಜಾಮೀನು ಮೇಲೆ ಹೊರಬಂದಿದ್ದ ಆತ, ಪುನಃ ಕೃತ್ಯದಲ್ಲಿ ತೊಡಗಿಸಿಕೊಂಡಿದ್ದ. ಹೀಗಾಗಿ, ಆತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಮೇಸ್ತ್ರಿ ಹತ್ಯೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ ತಿರುನಾಕರನ್ (32) ಎಂಬುವರನ್ನು ಮಾರಕಾಸ್ತ್ರಗಳಿಂದ ಹೊಡೆದು ಭಾನುವಾರ ರಾತ್ರಿ ಹತ್ಯೆ ಮಾಡಲಾಗಿದೆ.

'ತಮಿಳುನಾಡಿನ ತಿರುನಾಕರನ್, ಕಟ್ಟಡ ನಿರ್ಮಾಣದ ಮೇಸ್ತ್ರಿ ಆಗಿದ್ದರು. ಅವರ ಹತ್ಯೆಗೆ ಕಾರಣ ಗೊತ್ತಾಗಿಲ್ಲ. ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಿಪ್ಪಸಂದ್ರದಲ್ಲಿ ನಡೆಯುತ್ತಿದ್ದ ಕಟ್ಟಡ ನಿರ್ಮಾಣ ಜವಾಬ್ದಾರಿ ಹೊತ್ತಿದ್ದ ತಿರುನಾಕರನ್, ಕಟ್ಟಡದ ಬಳಿಯೇ ಶೆಡ್‌ನಲ್ಲಿ ವಾಸವಿದ್ದರು. ಅಲ್ಲಿಗೆ ನುಗ್ಗಿದ್ದ ದುಷ್ಕರ್ಮಿಗಳು, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ತೀವ್ರ ಗಾಯಗೊಂಡ ತಿರುನಾಕರನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದೂ ತಿಳಿಸಿವೆ.

₹ 1.44 ಕೋಟಿ ಮುಟ್ಟುಗೋಲು ಹಾಕಿದ ಜಾರಿ ನಿರ್ದೇಶನಾಲಯ


ಬೆಂಗಳೂರು: ರಾಜ್ಯ ಸರ್ಕಾರದ ಇ–ಆಡಳಿತ ಇಲಾಖೆಯ ಪೋರ್ಟಲ್ ಹ್ಯಾಕ್ ಮಾಡಿ ಸರ್ಕಾರಿ ಕಾಮಗಾರಿಗಳ ಕನಿಷ್ಠ ಭದ್ರತಾ ಠೇವಣಿಯ(ಇಎಂಡಿ) ₹11.55 ಕೋಟಿಯನ್ನು ಬೇರೆ ಖಾತೆಗಳಿಗೆ ವರ್ಗಾಯಿಸಿಕೊಂಡು ವಂಚಿಸಿದ್ದ ಹ್ಯಾಕರ್ ಶ್ರೀಕೃಷ್ಣನಿಗೆ ಸೇರಿದ 14 ಬ್ಯಾಂಕ್ ಖಾತೆಗಳಿಂದ ₹ 1.44 ಕೋಟಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಸರ್ಕಾರದ ವೆಬ್ ಪೋರ್ಟಲ್ ಹ್ಯಾಕ್ ಮಾಡಿದ್ದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ಗುತ್ತಿಗೆದಾರರು ಇಎಂಡಿ ರೂಪದಲ್ಲಿ ಪಾವತಿಸಿದ್ದ ₹ 11.55 ಕೋಟಿಯನ್ನು ನಾಗಪುರದ ಉದಯ ಗ್ರಾಮ ವಿಕಾಸ್ ಸಂಸ್ಥಾ ಎಂಬ ಸರ್ಕಾರೇತರ ಸಂಸ್ಥೆ ಹಾಗೂ ಉತ್ತರಪ್ರದೇಶದ ಬುಲಂದ್‌ಶಹರ್‌ನ ನಿಮ್ಮಿ ಎಂಟರ್ ಪ್ರೈಸಸ್ ಎಂಬ ಉದ್ದಿಮೆಯ ಖಾತೆಗಳಿಗೆ ವರ್ಗಾಯಿಸಿದ್ದ. ಬಳಿಕ ಬೇರೆ ಖಾತೆಗಳಿಗೆ ಆ ಮೊತ್ತವನ್ನು ವರ್ಗಾವಣೆ ಮಾಡಲಾಗಿತ್ತು.

ತನಿಖೆ ನಡೆಸಿದ್ದ ಸಿಐಡಿ ಪೊಲೀಸರು, ಶ್ರೀಕೃಷ್ಣನನ್ನು ಬಂಧಿಸಿದ್ದರು. ಇಎಂಡಿ ಮೊತ್ತವನ್ನು ವರ್ಗಾವಣೆ ಮಾಡಿಕೊಂಡು ವಂಚಿಸಿರುವ ಸಂಬಂಧ ಆರೋಪ ಪಟ್ಟಿಯನ್ನೂ ಸಲ್ಲಿಸಿದ್ದರು. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿರುವ ಇ.ಡಿ, ಉದಯ ಗ್ರಾಮ ವಿಕಾಸ ಸಂಸ್ಥಾ ಹಾಗೂ ನಿಮ್ಮಿ ಎಂಟರ್‌ಪ್ರೈಸಸ್ ಜತೆ ನಂಟು ಹೊಂದಿರುವ ಬ್ಯಾಂಕ್ ಖಾತೆಗಳಲ್ಲಿರುವ ₹ 1.44 ಕೋಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿದೆ.

ನಿಧನ ವಾರ್ತೆ

ಎಸ್.ಚಂದ್ರಶೇಖರ್ ರಾವ್



ಬೆಂಗಳೂರು: ಹಿರಿಯ ಪತ್ರಕರ್ತ ಎಸ್.ಚಂದ್ರಶೇಖರ್ ರಾವ್ (74) ಅವರು ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ರಾಜಾಜಿನಗರದ ಮಂಜುನಾಥ ನಗರದಲ್ಲಿ ವಾಸವಿದ್ದ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಹರಿಶ್ಚಂದ್ರ ಘಾಟ್‌ನಲ್ಲಿ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರು 'ಮುಂಜಾನೆ', 'ಸಂಜೆ ನುಡಿ', 'ಪ್ರಿಯಾಂಕ', 'ಸಂಜೆವಾಣಿ' ಹಾಗೂ 'ರಾಜಧಾನಿ' ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.46	19,740	5,496
ಹಾರಂಗಿ	2,859	2,855.24	8,304	4,747
ಕಬಿನಿ	2284.00	2,282.2	9,768	9,000
ಹೇಮಾವತಿ	2,922	2,920.34	7,491	5,980
ಲಿಂಗನಮಕ್ಕಿ	1,819	1,811.50	14,645	-
ಸೂಪಾ (ಮೀ)	564	554.33	8,272	2,728
ಮಾಣಿ	594	584.50	2400	-
ತುಂಗಭದ್ರಾ	1,633	1,631.96	72,369	294
ಮಲಪ್ರಭಾ	2079.5	2,076.80	4,572	1,544
ಘಟಪ್ರಭಾ	2175	2,173.00	6,842	1,799
ಭದ್ರಾ	186	184.4	12,411	13,604
ಆಲಮಟ್ಟಿ (ಮೀ)	519.6	519.27	82,828	76,960
ನಾರಾಯಣಪುರ (ಮೀ)	492.25	491.83	80,000	80,230

* ನೆಲಮಟ್ಟದಿಂದ

120 ಅಡಿ ದಾಟಿದ ಕೆಆರ್‌ಎಸ್

ಮಂಡ್ಯ: ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚುತ್ತಿದೆ. ಸೋಮವಾರ ಸಂಜೆಯ ವೇಳೆಗೆ ಜಲಾಶಯದ ನೀರಿನ ಮಟ್ಟ 120.46 ಅಡಿಗೆ ತಲುಪಿತ್ತು.

ಜಲಾಶಯದ ಭರ್ತಿಗೆ ಕೇವಲ 4.34 ಅಡಿಯಷ್ಟೇ ಬಾಕಿ ಉಳಿದಿದೆ. ಸದ್ಯ 19,740 ಕ್ಯುಸೆಕ್ ಒಳಹರಿವು ಇದ್ದು, 5,496 ಹೊರಹರಿವು ಇತ್ತು. ಕಳೆದೊಂದು ವಾರದಲ್ಲಿ ಜಲಾಶಯಕ್ಕೆ 5 ಅಡಿ ನೀರು ಹರಿದುಬಂದಿದೆ.

ತಗ್ಗಿದ ಒಳಹರಿವು (ಶಿವಮೊಗ್ಗ ವರದಿ): ಜಿಲ್ಲೆಯಾದ್ಯಂತ ಮಳೆ ಬಿಡುವು ನೀಡಿದ್ದು, ಭದ್ರಾ ಜಲಾಶಯಗಳ ಒಳಹರಿವಿನ ಪ್ರಮಾಣದಲ್ಲೂ ಗಣನೀಯವಾಗಿ ಇಳಿಕೆಯಾಗಿದೆ.

ರಾಜ್ಯದ ಆರ್ಥಿಕ ಸ್ಥಿತಿ–ಗತಿ ಎತ್ತ ಸಾಗುತ್ತಿದೆ? –ಆರ್ಥಿಕ ನೀತಿ ಕುರಿತು ಚರ್ಚೆ

‘ಸಾಲ ಮಾಡಿ ತುಪ್ಪ ತಿನ್ನುವ ಆರ್ಥಿಕ ನೀತಿ’

ಬೆಂಗಳೂರು: ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅಧಿಕಾರ ವಹಿಸಿಕೊಂಡಿರುವ ಸಂದರ್ಭದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿದೆ. ಸಾಲದ ಹೊರೆ ಎಷ್ಟಿದೆ, ತೆರಿಗೆ ಸಂಗ್ರಹ ಹೇಗಿದೆ, ಮಾಡುತ್ತಿರುವ ವೆಚ್ಚ ಎಷ್ಟು?

‘ಪ್ರಜಾವಾಣಿ’ ಸೋಮವಾರ ಹಮ್ಮಿಕೊಂಡಿದ್ದ ‘ರಾಜ್ಯದ ಆರ್ಥಿಕ ಸ್ಥಿತಿ–ಗತಿ ಎತ್ತ ಸಾಗುತ್ತಿದೆ’ ಸಂವಾದದಲ್ಲಿ ಐಸೆಕ್ ನಿವೃತ್ತ ನಿರ್ದೇಶಕ ಆರ್. ಎಸ್. ದೇಶಪಾಂಡೆ, ಸಾರ್ವಜನಿಕ ನೀತಿ ವಿಶ್ಲೇಷಕ ಕೆ.ಸಿ.ರಘು, ಹಿರಿಯ ಪತ್ರಕರ್ತ ಪಿ.ಎಂ.ರಘುನಂದನ್ ಅವರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ಪ್ರಜಾವಾಣಿ ಸಂವಾದ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos

ಆರೋಗ್ಯ, ಶಿಕ್ಷಣ ಕ್ಷೇತ್ರದ ನಿರ್ಲಕ್ಷ್ಯ



ಸರ್ಕಾರಕ್ಕೆ ಬರುತ್ತಿರುವ ವರಮಾನದಲ್ಲಿ ಸಂಬಳ ಬಡ್ಡಿಗೆ ಸರಿ ಹೊಂದುತ್ತಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ಸಾಲ ಮಾಡುವುದೊಂದೇ ದಾರಿ ಎಂಬಂತಾಗಿದೆ. ಬಂಡವಾಳ ಹೂಡದೆ ಯಾವುದೇ ದೇಶ ಅಥವಾ ರಾಜ್ಯ ಅಭಿವೃದ್ಧಿ ಆಗುವುದಿಲ್ಲ. ತಲಾ ಆದಾಯ, ಸಂಪನ್ಮೂಲ, ತೆರಿಗೆ ಸಂಗ್ರಹ ನೋಡಿದರೆ ಕರ್ನಾಟಕ ಸಂಪದ್ಭರಿತ ರಾಜ್ಯ. ಆದರೂ, ಆರ್ಥಿಕ ಸ್ಥಿತಿ ತೀರಾ ಕೆಟ್ಟದಾಗಿರುವುದು ವಿರೋಧಾಭಾಸ. ಕೋವಿಡ್ ಕಾಣಿಸಿಕೊಂಡ ವರಮಾನ ಅಷ್ಟೇನೂ ಕಡಿಮೆ ಆಗಲಿಲ್ಲ. ಆದರೆ, ಅಗತ್ಯ ಇರುವಲ್ಲಿಗೆ ಖರ್ಚು ಮಾಡದೆ ಇರುವುದು ಪ್ರಾದೇಶಿಕ ಅಸಮತೋಲನಕ್ಕೂ ಕಾರಣವಾಗಿದೆ. ಉದಾಹರಣೆಗೆ ಯಾದಗಿರಿಯಲ್ಲಿ 5 ಸಾವಿರ ಜನರಿಗೆ ಒಬ್ಬರಂತೆ ವೈದ್ಯ ಇದ್ದರೆ, ಬೆಂಗಳೂರಿನಲ್ಲಿ 600 ಜನರಿಗೆ ಒಬ್ಬರಂತೆ ವೈದ್ಯರಿದ್ದಾರೆ. ತಲಾ ಆದಾಯದಲ್ಲೂ ಸಾಕಷ್ಟು ವ್ಯತ್ಯಾಸ ಇದೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರವನ್ನು ಸರ್ಕಾರಗಳು ನಿರ್ಲಕ್ಷ್ಯ ಮಾಡಿಕೊಂಡೇ ಬಂದಿವೆ. ಕೋವಿಡ್ ನಂತರವಾದರೂ ಎಚ್ಚೆತ್ತುಕೊಳ್ಳಬೇಕಾಗುತ್ತದೆ.

ಕೆ.ಸಿ. ರಘು, ಸಾರ್ವಜನಿಕ ನೀತಿ ವಿಶ್ಲೇಷಕ

ಹೆಚ್ಚುತ್ತಿರುವ ಅನುತ್ಪಾದಕ ವೆಚ್ಚ



ಆರ್ಥಿಕ ಶಿಸ್ತನ್ನು ಸರ್ಕಾರ ಕಾಪಾಡಿಕೊಂಡು ಬಂದಿತ್ತು. ಅನುತ್ಪಾದಕ ವೆಚ್ಚ ಶೇ 85 ರಷ್ಟು ಇರುತ್ತಿತ್ತು. 2021ರ ಬಜೆಟ್‌ನ ನೋಡಿದರೆ ಅನುತ್ಪಾದಕ ವೆಚ್ಚ ಶೇ 102ಕ್ಕೆ ಏರಿದೆ. ಇದರಿಂದ ಪ್ರಗತಿ ತೀರಾ ಕೆಳಮಟ್ಟಕ್ಕೆ ಹೋಗಲಿದೆ. ಆಡಳಿತ ನಡೆಸಲು ಹಣ ಇಲ್ಲದ ಸ್ಥಿತಿ ಬರುತ್ತದೆ. ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಬಜೆಟ್ ಪೂರ್ವದಲ್ಲಿ ಪ್ರತಿ ವರ್ಷ ಸಭೆ ನಡೆಸುತ್ತದೆ. ಆದರೆ, ಸರ್ಕಾರಕ್ಕೆ ಯಾವುದೇ ಸ್ಪಷ್ಟ ಮಾರ್ಗದರ್ಶನವನ್ನು ಈ ಸಮಿತಿ ಮಾಡುವುದಿಲ್ಲ. ವರ್ಷಕ್ಕೆ ₹63 ಸಾವಿರ ಕೋಟಿಯನ್ನು ಸಂಬಳ ಮತ್ತು ನಿವೃತ್ತ ವೇತನಕ್ಕೆ ಖರ್ಚು ಮಾಡಲಾಗುತ್ತಿದೆ. 2023ಕ್ಕೆ ನೌಕರರಿಗೆ 7ನೇ ವೇತನ ಆಯೋಗ ಜಾರಿ ಮಾಡಬೇಕಾಗುತ್ತದೆ. ಸುಮಾರು ₹15 ಸಾವಿರ ಕೋಟಿ ಹೆಚ್ಚುವರಿಯಾಗಿ ಬೇಕಾಗುತ್ತದೆ. ಇವೆಲ್ಲವನ್ನೂ ನಿಭಾಯಿಸಲು ಸರಿಯಾದ ತಂತ್ರಗಾರಿಕೆ ಬೇಕಾಗುತ್ತದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರಿಯಾದ ಮುನ್ನೋಟ ಇಟ್ಟುಕೊಂಡೇ ಮುನ್ನಡೆಯಬೇಕಿದೆ.

ಪಿ.ಎಂ. ರಘುನಂದನ್, ಹಿರಿಯ ಪತ್ರಕರ್ತ

ಆಡಳಿತ ವೆಚ್ಚ ಕಡಿಮೆಯಾಗಬೇಕು



ರಾಜ್ಯದ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ನಿರೀಕ್ಷಿತ ವರಮಾನ ಬರುತ್ತಿಲ್ಲ. 2011 ರಿಂದ 2021 ತನಕ ನೋಡಿದರೆ ಸ್ವಂತ ವರಮಾನ ಕಡಿಮೆಯಾಗುತ್ತಿದೆ. ವರಮಾನ ಸಂಗ್ರಹಿಸುವ ಶ್ರಮ ಕಡಿಮೆಯಾಗುತ್ತಿದೆ. ವಿತ್ತೀಯ ಕೊರತೆ ಹೆಚ್ಚಾಗುತ್ತಿದೆ. ಸಾಲ ಮಾಡಿಯಾದರೂ ತುಪ್ಪ ತಿನ್ನಿ ಎಂಬ ನೀತಿಯನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆ. ಅಭಿವೃದ್ಧಿ ಬದಲಿಗೆ ಜನರನ್ನು ಮರಳು ಮಾಡುವ ಯೋಜನೆಗಳಿಗೇ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. 30 ವರ್ಷಗಳಲ್ಲಿ ತೆರೆದಿರುವ ಸರ್ಕಾರಿ ಮತ್ತು ಖಾಸಗಿ ಶಾಲೆ, ಕಾಲೇಜು, ಆಸ್ಪತ್ರೆಗಳ ಸಂಖ್ಯೆಯನ್ನು ಗಮನಿಸಿದರೆ ಸರ್ಕಾರ ಯಾವ ಕ್ಷೇತ್ರಕ್ಕೆ ಹೆಚ್ಚು ವೆಚ್ಚ ಮಾಡುತ್ತಿದೆ ಎಂಬುದು ಅರ್ಥವಾಗುತ್ತದೆ. ಅನುತ್ಪಾದಕ ವೆಚ್ಚ ಹೆಚ್ಚಿದೆ. 2011ರಲ್ಲಿ ₹91 ಸಾವಿರ ಕೋಟಿಗಳಷ್ಟಿದ್ದ ಸಾಲ ಈಗ ಮೂರು ಪಟ್ಟು ಏರಿದೆ. ಆರ್ಥಿಕ ಶಿಸ್ತು ಕಾಪಾಡಬೇಕು. ಆಡಳಿತಾತ್ಮಕ ವೆಚ್ಚ ಕುಗ್ಗಿಸಬೇಕು.

ಆರ್.ಎಸ್.ದೇಶಪಾಂಡೆ, ನಿವೃತ್ತ ನಿರ್ದೇಶಕ ಐಸೆಕ್

‘ಮೇಕೆದಾಟು: ರಾಜಕಾರಣ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೇಕೆದಾಟು ಯೋಜನೆ ವಿಚಾರದಲ್ಲಿ ತಮಿಳುನಾಡು ರಾಜಕಾರಣ ಮಾಡುತ್ತಿರುವುದು ಸರಿಯಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಕಿಡಿಕಾರಿದರು.

‘ತಮಿಳುನಾಡಿನಲ್ಲಿ ಕಾವೇರಿ ನದಿ ನೀರಿನ ವಿಚಾರವನ್ನು ರಾಜಕಾರಣಕ್ಕೆ ಬಳಸಿ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಏರಿವೆ. ಸದಾಕಾಲ ಇಂತಹ ರಾಜಕಾರಣ ಮಾಡುತ್ತಾರೆ. ರಾಜಕಾರಣಕ್ಕಿಂತ ಜನರ ಕಲ್ಯಾಣ ಮುಖ್ಯ’ ಎಂದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಯೋಜನೆಯ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದೆ. ಕೇಂದ್ರ ಸಚಿವರಿಗೆ ವಸ್ತುಸ್ಥಿತಿಯನ್ನು ಹಾಗೂ ಸುಪ್ರೀಂಕೋರ್ಟ್ ತೀರ್ಪುಗಳನ್ನು ಕುರಿತು ಮನವರಿಕೆ ಮಾಡಿಕೊಡಲು ಮತ್ತೊಮ್ಮೆ ದೆಹಲಿಗೆ ತೆರಳುವೆ’ ಎಂದರು.

ನೂತನ ಶಿಕ್ಷಣ ನೀತಿಯಿಂದ ಕನ್ನಡಕ್ಕೆ ಧಕ್ಕೆ ಇಲ್ಲ– ಸಚಿವ ಅಶ್ವತ್ಥನಾರಾಯಣ

23ರಿಂದ ಪದವಿ ಪ್ರವೇಶ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪದವಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆಯನ್ನು ಇದೇ 23 ರಿಂದ ಆರಂಭಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಸೋಮವಾರ ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಕುರಿತು ವಿವಿಧ ಕುಲಪತಿಗಳ ಜತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ನೂತನ ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯಲ್ಲಿ ದಾಖಲಾತಿ ಪ್ರಕ್ರಿಯೆ ಆರಂಭಿಸಲಾಗುವುದು’ ಎಂದರು.

‘ಶಿಕ್ಷಣ ನೀತಿ ಜಾರಿಗೆ ಕೇಂದ್ರ ಸರ್ಕಾರ 15 ವರ್ಷ ಕಾಲಾವಕಾಶ ನೀಡಿದೆ. ಆದರೆ, ರಾಜ್ಯ ಸರಕಾರ ಹತ್ತೇ ವರ್ಷಗಳಲ್ಲಿ ಅನುಷ್ಠಾನಕ್ಕೆ ತರಲು ನಿರ್ಧರಿಸಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿ ಮಾಡುವುದಕ್ಕೆ ಆಗಸ್ಟ್ 7ರಂದೇ ಆದೇಶ ಹೊರಡಿಸಿ, ಮಾರ್ಗಸೂಚಿ ಪ್ರಕಟಿಸಲಾಗಿದೆ’ ಎಂದರು.

‘ಈ ನೀತಿಯಲ್ಲಿ ಮಾತೃಭಾಷೆಗೆ ಹೆಚ್ಚು ಒತ್ತು ನೀಡಲಾಗಿದೆ. ಮೊದಲಿಗಿಂತ ಹೆಚ್ಚು ವಿಸ್ತೃತವಾಗಿ ಕನ್ನಡವನ್ನು ಕಲಿಯುವ ಅವಕಾಶ ಕಲ್ಪಿಸಲಾಗಿದೆ. ಯಾವುದೇ ಕಾರಣಕ್ಕೂ ಕನ್ನಡವನ್ನು ಉಪೇಕ್ಷೆ ಮಾಡಿಲ್ಲ. ಎರಡು ವರ್ಷಗಳ ಕನ್ನಡ ಕಲಿಕೆ ಇತ್ತು. ಹಾಗೆ, ನೋಡಿದರೆ ಮೊದಲು ಕಡ್ಡಾಯ ಇರಲಿಲ್ಲ. ಈಗ ಕಡ್ಡಾಯ ಮಾಡಲಾಗಿದೆ’ ಎಂದೂ ಹೇಳಿದರು.

‘ಈ ನೀತಿಗೆ ಪೂರಕವಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳ ವಿಷಯವಾರು ಮಾದರಿ ಪಠ್ಯಕ್ರಮ ಸಿದ್ಧಪಡಿಸಲು ವಿಷಯ ತಜ್ಞರ 32 ಸಮಿತಿ ರಚಿಸಲಾಗಿದೆ. ಸಮಿತಿಗಳ ವರದಿ ಆಧರಿಸಿ 31 ರೊಳಗೆ ಪಠ್ಯ ಸಿದ್ಧಪಡಿಸಲು ಸೂಚಿಸಲಾಗಿದೆ’ ಎಂದರು.

ಅನುದಾನಕ್ಕೆ ಬೇಡಿಕೆ: ‘ನೀತಿ ಜಾರಿ ಕಾರಣ ಇನ್ನಷ್ಟು ಅನುದಾನ ನೀಡುವಂತೆ ಮುಖ್ಯಮಂತ್ರಿಗೆ ಬೇಡಿಕೆ ಇಡುತ್ತೇವೆ. ಉನ್ನತ ಶಿಕ್ಷಣ ಸುಧಾರಣೆಗೆ ಕನಿಷ್ಠ 3 ಸಾವಿರ ಕೋಟಿ ಬೇಕು. ವರ್ಷಕ್ಕೊಂದು ಸಾವಿರ ಕೋಟಿ ಕೊಟ್ಟರೆ ಒಳ್ಳೆಯದು’ ಎಂದರು.



ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ಜತೆ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್ ಅಶ್ವತ್ಥನಾರಾಯಣ ಸಭೆ ನಡೆಸಿದರು. ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪಿ.ಪ್ರದೀಪ್ ಇದ್ದರು.

‘ಅನುಮಾನ, ಗೊಂದಲ ಬೇಡ’

‘ನೂತನ ಶಿಕ್ಷಣ ನೀತಿ ಬಗ್ಗೆ ಕೆಲವರು ಕೆಲವು ಅನುಮಾನ, ಪ್ರಶ್ನೆಗಳನ್ನು ಎತ್ತುತ್ತಿದ್ದು, ಎಲ್ಲಕ್ಕೂ ಈಗಾಗಲೇ ಉತ್ತರಿಸಲಾಗಿದೆ. ಕೇಂದ್ರವು ಶಿಕ್ಷಣ ನೀತಿಯನ್ನು ಪ್ರಕಟಿಸಿದ ಕೂಡಲೇ ರಾಜ್ಯ ಸರ್ಕಾರ ಅಂಗೀಕರಿಸಿದ್ದು, ಸಂಪುಟದ ಒಪ್ಪಿಗೆ ಸಿಕ್ಕ ಕೂಡಲೇ ಸದನದ ಒಳಗೆ ಹೊರಗೆ ಚರ್ಚೆ ನಡೆಸಲಾಗಿದೆ’ ಎಂದು ಸಚಿವರು ಹೇಳಿದರು. ‘ಡಿಜಿಟಲ್ ಕಲಿಕೆ ಅನ್ನುವುದು ಕಡ್ಡಾಯವಲ್ಲ. ಅಗತ್ಯ ಇದ್ದವರು ಪಡೆಯಬಹುದು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಎತ್ತಿರುವ ಎಲ್ಲ ಪ್ರಶ್ನೆಗಳಿಗೆ ಈಗಾಗಲೇ ಉತ್ತರಿಸಿದ್ದೇವೆ. ಕನ್ನಡದ ಕಲಿಕೆಯ ಬಗ್ಗೆ ಅವರ ಮಾತು ಸತ್ಯಕ್ಕೆ ದೂರವಾದದ್ದು. ಅಗತ್ಯಬಿದ್ದರೆ, ಮತ್ತಷ್ಟು ವಿವರ ನೀಡಲಾಗುವುದು’ ಎಂದರು.

‘ಶಾಲೆ ಆರಂಭ: ಶೀಘ್ರವೇ ವಿಸ್ತೃತ ಎಸ್‌ಒಪಿ’

ಬೆಂಗಳೂರು: ‘ಪ್ರೌಢಶಾಲೆ ಮತ್ತು ಪಿಯುಸಿಗೆ ನೇರ ತರಗತಿಗಳು23ರಿಂದಆರಂಭವಾಗಲಿದ್ದು,ಮಕ್ಕಳಸುರಕ್ಷತೆಗೆ ಸಂಬಂಧಿಸಿ ವಿಸ್ತೃತ ಎಸ್‌ಒಪಿಯನ್ನು (ಪ್ರಮಾಣಿತ ಕಾರ್ಯಚರಣಾ ವಿಧಾನ) ಶೀಘ್ರವೇ ಬಿಡುಗಡೆ ಮಾಡಲಾಗುವುದು’ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಿಸಿ ಸೋಮವಾರ ಮಾತನಾಡಿದ ಅವರು, ‘ಶಾಲೆ ಆರಂಭಿಸುವ ಕುರಿತ ತಜ್ಞರ ವರದಿ ಬಂದಿದೆ. ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ವಿದ್ಯಾಗಮ ಆರಂಭ ಕುರಿತು ಮಾಸಾಂತ್ಯದೊಳಗೆ ತೀರ್ಮಾನಿಸುತ್ತೇವೆ’ ಎಂದರು.

ದಾಖಲಾತಿ ಹೆಚ್ಚಳಕ್ಕೆ ಕ್ರಮ: ‘ರಾಜ್ಯದಲ್ಲಿ 5,600 ಪದವಿಪೂರ್ವ ಕಾಲೇಜುಗಳಿದ್ದು, 12 ಲಕ್ಷ ವಿದ್ಯಾರ್ಥಿಗಳಿಗೆ ಅವಕಾಶವಿದೆ. ಜೊತೆಗೆ, ಈ ವರ್ಷ ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸುವ ಕಾರ್ಯವೂ ನಡೆಯುತ್ತಿದೆ.ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೂ ಪ್ರವೇಶ ಸಿಗಲಿದೆ’ ಎಂದರು.

‘ಶೇ 84ರಷ್ಟು ಶಿಕ್ಷಕರು ಈಗಾಗಲೇ ಕೋವಿಡ್ ಲಸಿಕೆ ಪಡೆದಿದ್ದಾರೆ. ಶೇ 19ರಷ್ಟು ಶಿಕ್ಷಕರು ಎರಡೂ ಡೋಸ್ ಪಡೆದಿದ್ದಾರೆ. ಉಳಿದ ಶಿಕ್ಷಕರಿಗೆ ಆ.23ರ ಒಳಗೆ ಲಸಿಕೆ ನೀಡುವ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳ ಚರ್ಚಿಸಿದ್ದೇವೆ’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾಶಂಕರ್ ತಿಳಿಸಿದರು.

ಅರ್ಜಿ ಹಿಂದಕ್ಕೆ ಪಡೆದ ಯಡಿಯೂರಪ್ಪ

ಬೆಂಗಳೂರು: ಗುರುಮಿಠಕಲ್ ಕ್ಷೇತ್ರದ ಜೆಡಿಎಸ್ ಶಾಸಕ ನಾಗನಗೌಡ ಕಂದಕೂರ ಅವರನ್ನು ಬಿಜೆಪಿಗೆ ಸೆಳೆಯಲು ₹10 ಕೋಟಿ ಲಂಚದ ಆಮಿಷವೊಡ್ಡಿದ್ದ ಆರೋಪದಲ್ಲಿ ದಾಖಲಾಗಿದ್ದ ದೂರು ರದ್ದುಪಡಿಸುವಂತೆ ಕೋರಿ ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಶಿವನಗೌಡ ಪಾಟೀಲ, ಪ್ರೀತಂಗೌಡ ಅವರು ಹೈಕೋರ್ಟ್‌ಗೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳನ್ನು ಹಿಂಪಡೆದಿದ್ದಾರೆ.

ಅರ್ಜಿ ಹಿಂಪಡೆಯುವುದಾಗಿ ಅವರ ಪರ ವಕೀಲರು ಮೆಮೊ ಸಲ್ಲಿಸಿದ್ದರು. ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ಪೀಠ, ಹಿಂಪಡೆಯಲು ಅನುಮತಿ ನೀಡಿತು.

ಖಾತೆ ಹಂಚಿಕೆ ಕುರಿತು ಬಸವರಾಜ ಬೊಮ್ಮಾಯಿ ಹೇಳಿಕೆ

ಅಸಮಾಧಾನ ಬಗೆಹರಿಸುವೆ: ಸಿ.ಎಂ

ಮೈಸೂರು: ‘ಸಂಪುಟ ವಿಸ್ತರಣೆ ಕುರಿತು ಪಕ್ಷದಲ್ಲಿ ಯಾವುದೇ ಅಸಮಾಧಾನ ಇಲ್ಲ. ಇರುವ ಸಣ್ಣಪುಟ್ಟ ಅಸಮಾಧಾನಗಳನ್ನು ಬಗೆಹರಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಸೋಮವಾರ ಜಿಲ್ಲೆಗೆ ಭೇಟಿ ನೀಡಿದ್ದ ಅವರು ಸುದ್ದಿಗಾರರ ಜೊತೆಗೆ ಮಾತನಾಡುತ್ತಿದ್ದರು.

‘ಅಸಮಾಧಾನ ವ್ಯಕ್ತಪಡಿಸಿದ್ದ ಆನಂದ್ ಸಿಂಗ್ ಅವರೊಂದಿಗೆ ಒಮ್ಮೆ ಮಾತುಕತೆ ನಡೆಸಿದ್ದು, ಮತ್ತೆ ಮಾತನಾಡುವೆ. ಶಾಸಕ ರಾಮದಾಸ್ ಆತ್ಮೀಯ ಸ್ನೇಹಿತರಾಗಿದ್ದು, ಅವರೊಂದಿಗೂ ಮಾತನಾಡುವೆ’ ಎಂದು ತಿಳಿಸಿದರು.

‘ಬಿ.ಎಸ್.ಯಡಿಯೂರಪ್ಪ ತಮಗೆ ಸಂಪುಟ ದರ್ಜೆ ಸ್ಥಾನಮಾನ ಬೇಡ ಎಂದಿರುವುದರಿಂದ ನಿಕಟಪೂರ್ವ ಮುಖ್ಯಮಂತ್ರಿಯ ಸೌಲಭ್ಯವನ್ನಷ್ಟೇ ನೀಡಲಾಗುವುದು’ ಎಂದರು.


‘ಸಮಾಧಾನವೂ ಇಲ್ಲ, ಅಸಮಾಧಾನವೂ ಇಲ್ಲ’

ಚಿತ್ರದುರ್ಗ: ‘ಖಾತೆ ಹಂಚಿಕೆ ಕುರಿತು ಸಮಾಧಾನವೂ ಇಲ್ಲ, ಅಸಮಾಧಾನವೂ ಇಲ್ಲ. ಅಸಮಾಧಾನ ಇದ್ದರೂ ಸಮಾಧಾನದಿಂದ ಇರುವ ವ್ಯಕ್ತಿತ್ವ ನನ್ನದು’ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಸೋಮವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರಮಾಣವಚನ ಸ್ವೀಕರಿಸಿ ತಿರುಪತಿಗೆ ತೆರಳಿದ್ದೆ. ರಾಜಕೀಯ ಬೆಳವಣಿಗೆಗಳ ಬಗ್ಗೆ ಮೌನವಹಿಸಿಲ್ಲ. ಯಾರು ಯಾವ ಖಾತೆ ನಿರ್ವಹಿಸಬೇಕು ಎಂಬುದು ಪಕ್ಷದ ಹಿರಿಯ ನಾಯಕರ ತೀರ್ಮಾನ’ ಎಂದರು.

‘ಸತ್ಯ ಹರಿಶ್ಚಂದ್ರ ಅರಮನೆ ಹಾಗೂ ಸ್ಮಶಾನ ಎರಡನ್ನೂ ಸಮರ್ಥವಾಗಿ ನಿರ್ವಹಿಸಿದರು. ಅದೇ ರೀತಿ ನಾನೂ ಕೆಲಸ ಮಾಡಿಕೊಂಡು ಬಂದಿದ್ದೇನೆ. ಸ್ಮಶಾನದಲ್ಲಿ ಕೂಡ ಸೈ ಅನಿಸಿಕೊಳ್ಳುತ್ತೇನೆ. ಮೂವತ್ತು ವರ್ಷಗಳಿಂದ ರಾಜಕೀಯದಲ್ಲಿದ್ದೇನೆ. ರಾಜಕೀಯ ಪ್ರವೇಶಿಸಿದ್ದು, ಸಚಿವನಾಗಿದ್ದು ಎಲ್ಲವೂ ಸವಾಲುಗಳೇ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ‘ನಷ್ಟದಲ್ಲಿರುವ ಸಾರಿಗೆ ಸಂಸ್ಥೆಗಳನ್ನು ಲಾಭದತ್ತ ಒಯ್ಯುವ ಸವಾಲು ನನ್ನ ಮುಂದಿದೆ. ಆ ಕೆಲಸ ಮಾಡುತ್ತೇನೆ. ಜನರಿಗೆ ಹೊರೆ ಆಗದಂತೆ ಬಿಎಂಟಿಸಿ ಪ್ರಯಾಣ ದರ ಏರಿಕೆಗೆ ಸಂಬಂಧಿಸಿ ಅಧಿಕಾರಿಗಳ ಜೊತೆ ಚರ್ಚಿಸುತ್ತೇನೆ’ ಎಂದರು.

‘ಸಿ.ಎಂಗೆ ಮುಜುಗರ ತರುವುದಿಲ್ಲ’



ಹೊಸಪೇಟೆ (ವಿಜಯನಗರ): ‘ಖಾತೆ ಹಂಚಿಕೆಗೆ ಸಂಬಂಧಿಸಿ ಮುಖ್ಯಮಂತ್ರಿಯವರಿಗೆ ಮುಜುಗರ ಆಗುವ ರೀತಿಯಲ್ಲಿ ಪದೇ ಪದೇ ಮಾಧ್ಯಮಗಳಿಗೆ ಹೇಳಿಕೆ ಕೊಡಲಾರೆ’ ಎಂದು ಸಚಿವ ಆನಂದ್ ಸಿಂಗ್ ಪ್ರತಿಕ್ರಿಯಿಸಿದರು.

ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಹೇಳಬೇಕಿರುವುದನ್ನು ನಿನ್ನೆಯೇ ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ. ಅವರ ತೀರ್ಮಾನಕ್ಕೆ ಬದ್ಧನಿದ್ದೇನೆ’ ಎಂದು ತಿಳಿಸಿದರು.

ಸಚಿವ ಸ್ಥಾನ: ಪಕ್ಷದ ವರಿಷ್ಠರಿಗೆ ಯೋಗೇಶ್ವರ, ಜಾರಕಿಹೊಳಿ ಮನವಿ?

ನವದೆಹಲಿ: ಸಚಿವ ಸ್ಥಾನದಿಂದ ವಂಚಿತರಾಗಿರುವ ಶಾಸಕರಾದ ಸಿ.ಪಿ.ಯೋಗೇಶ್ವರ ಹಾಗೂ ರಮೇಶ ಜಾರಕಿಹೊಳಿ ಸೋಮವಾರ ದೆಹಲಿಗೆ ದೌಡಾಯಿಸಿದ್ದಾರೆ.

ಬೆಳಿಗ್ಗೆ ಬೆಂಗಳೂರಿನಿಂದ ಹೊರಟಿದ್ದ ಯೋಗೇಶ್ವರ ಅವರು ಮಧ್ಯಾಹ್ನ ದೆಹಲಿಯ ಕರ್ನಾಟಕ ಭವನಕ್ಕೆ ಭೇಟಿ ನೀಡಿದರು. ‘ವಕೀಲರನ್ನು ಕಾಣಲು ಬಂದಿರುವೆ’ ಎಂದು ಈ ಸಂದರ್ಭ ತಿಳಿಸಿದರು. ಆದರೆ, ರಾತ್ರಿ ಬೆಂಗಳೂರಿಗೆ ವಾಪಸಾಗುವ ಸಂದರ್ಭ ಅವರು ಸುದ್ದಿಗಾರರಿಗೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಲಿಲ್ಲ.

ಸಂಜೆ 4.30ಕ್ಕೆ ದೆಹಲಿಗೆ ಬಂದಿರುವ ಜಾರಕಿಹೊಳಿ, ಖಾಸಗಿ ಹೋಟೆಲ್‌ನಲ್ಲಿ ತಂಗಿದ್ದಾರೆ. ಈ ಇಬ್ಬರೂ ಮುಖಂಡರು ಬಿಜೆಪಿ ವರಿಷ್ಠರನ್ನು ಭೇಟಿಯಾಗಿದ್ದಾರೆ ಎನ್ನಲಾಗಿದೆ.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ನಮಗೆ ಸ್ಥಾನ ನೀಡಲಾಗಿಲ್ಲ. ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಸಚಿವ ಸ್ಥಾನ ನೀಡಬೇಕು’ ಎಂದು ಇಬ್ಬರೂ ಶಾಸಕರು ವರಿಷ್ಠರಿಗೆ ಮನವಿ ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ.

‘ಸಚಿವ ಸ್ಥಾನ ತಪ್ಪಿಸಿದರು’

ಮೈಸೂರು: ‘ಒಬ್ಬ ವ್ಯಕ್ತಿ ಫೋನ್ ಕರೆಯಿಂದಾಗಿ ನನಗೆ ಸಚಿವ ಸ್ಥಾನ ತಪ್ಪಿತು. ಅವರಿಗೆ ಕರೆ ಮಾಡಿ ಏಕೆ ಹೀಗೆ ಮಾಡಿದಿರಿ ಎಂದು ಕೇಳಿದೆ. ಆ ವ್ಯಕ್ತಿಯ ಹೆಸರು ಹೇಳಲಾರೆ’ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಭೇಟಿಯ ವೇಳೆ ಏಕೆ ಹೋಗಿರಲಿಲ್ಲ ಎಂದು ಖುದ್ದಾಗಿ ಅವರಿಗೆ ಪತ್ರದ ಮೂಲಕ ತಿಳಿಸುತ್ತೇನೆ’ ಎಂದರು.

ಸಾಹಿತಿ ಈಶ್ವರಚಂದ್ರ ಚಿಂತಾಮಣಿ ನಿಧನ



ವಿಜಯಪುರ: ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ ಈಶ್ವರಚಂದ್ರ ಚಿಂತಾಮಣಿ (96) ಅವರು ವಯೋಸಹಜ ಕಾಯಿಲೆಯಿಂದ ನಗರದ ತಮ್ಮ ಮನೆಯಲ್ಲಿಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಡೀನ್ ಡಾ.ಮಹೇಶ ಚಿಂತಾಮಣಿ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ.

ಚಿಂತಾಮಣಿ ಅವರು ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ವೈದ್ಯಕೀಯ ಸಂಶೋಧನಾ ಕಾಲೇಜಿಗೆ ತಮ್ಮ ದೇಹದಾನದ ವಾಗ್ದಾನ ಮಾಡಿದ್ದರು. ಅದರಂತೆ ದೇಹವನ್ನು ಕಾಲೇಜಿಗೆ ಕುಟುಂಬದವರು ಹಸ್ತಾಂತರಿಸಿದರು.

ಜಿಲ್ಲೆಯ ಬಿಜ್ಜರಗಿ ಗ್ರಾಮದವರಾದ ಅವರು 1942ರಲ್ಲಿ ವಿದ್ಯಾರ್ಥಿಯಾಗಿರುವಾಗಲೇ ಚಲೇಜಾವ್ ಚಳವಳಿಯಲ್ಲಿ ಪಾಲ್ಗೊಂಡು, ಜೈಲುವಾಸ ಅನುಭವಿಸಿದ್ದರು.

ಹಲಸಂಗಿ ಗೆಳೆಯರ ಬಳಗದ ಸದಸ್ಯರಾಗಿದ್ದ ಅವರು, ‘ಗರತಿಯರ ಮನೆಯಿಂದ’ ಎಂಬ ಜಾನಪದ ಕೃತಿ ಪ್ರಕಟಿಸಿದ್ದರು. ಯುಗಪುರುಷ ಗಾಂಧೀಜಿ, ಬಸವಣ್ಣನವರು, ಮಾದರಿ ಮಲ್ಲಣ್ಣ, ಜನಪ್ರಿಯ ರಾಮಾಯಣ, ಬಾಳಿನ ಬೆಳಕು, ಮಹಾಭಾರತ ದರ್ಶನ, ಕರ್ನಾಟಕದ ಕಥೆಗಳು ಸೇರಿದಂತೆ ಪೌರಾಣಿಕ ಕೃತಿಗಳನ್ನು ಪ್ರಕಟಿಸಿದ್ದರು.

ನವ ಸಾಕ್ಷರರಿಗಾಗಿ ಇವರು ರಚಿಸಿದ್ದ ಕಥೆಗಳು, ನಾಟಕಗಳು ಪಠ್ಯವಾಗಿದ್ದವು. ಆದರ್ಶ ಶಿಕ್ಷಕ ರಾಷ್ಟ್ರ ಪ್ರಶಸ್ತಿ (1974), ಜಾನಪದ ಅಕಾಡೆಮಿ ಪ್ರಶಸ್ತಿ (1980), ಕೇಂದ್ರ ಸರ್ಕಾರದ ಫೆಲೋಶಿಪ್ (1999), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದರು.



ಕುಳಿತು ಕುಳಿತು ರೋಗ...

ಈಗ ನಾವೆಲ್ಲರೂ ಮನೆಯಲ್ಲೇ ಬಂಧಿಗಳು. ಹೀಗಾಗಿ ಹೆಚ್ಚಿನ ಸಮಯ ಕುಳಿತೇ ಇರುವುದು ಅನಿವಾರ್ಯ ಎದುರಾಗಿದೆ. ಆದರೆ ಇದು ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ...

ಡಾ. ವಿನಯ ಶ್ರೀನಿವಾಸ್

ಕೋವಿಡ್ ಕಾರಣದಿಂದಾಗಿ ಮನೆಯಿಂದಲೇ ನೌಕರಿ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಶಾಲೆಗಳು ಇನ್ನು ಪೂರ್ಣಪ್ರಮಾಣದಲ್ಲಿ ಆರಂಭವಾಗದೆ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳ ಮೂಲಕವೇ ಪಾಠಗಳನ್ನು ಕೇಳುವಂತಾಗಿದೆ. ಹೆಚ್ಚು ಜನರು ಒಂದೆಡೆ ಸೇರುವುದು ಸುರಕ್ಷಿತವಲ್ಲ ಎಂಬುದನ್ನು ಅರಿತಿರುವ ಎಲ್ಲ ಕ್ಷೇತ್ರದವರು ತಮ್ಮ ಹಲವಾರು ಕಾರ್ಯಕ್ರಮಗಳನ್ನು ಈಗ ಆನ್‌ಲೈನ್ ಮೂಲಕವೇ ನಡೆಸುತ್ತಿದ್ದಾರೆ. ವೆಬಿನಾರ್‌ಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮನೆಯಿಂದಲೇ ವೀಕ್ಷಣೆ ಮಾಡುವುದು ಅಭ್ಯಾಸವಾಗಿ ಹೋಗಿದೆ ಮನೆಯಲ್ಲಿ ಎಲ್ಲರೂ ಈಗ ಲ್ಯಾಪ್‌ಟಾಪ್ ಮುಂದೆ ಕುಳಿತಿರುವಂಥ ಸನ್ನಿವೇಶ ಬಂದೊದಗಿದೆ!

ಇದರ ಜೊತೆಯಲ್ಲಿಯೇ ಸಾಮಾಜಿಕ ಮಾಧ್ಯಮಗಳಾದ ವಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮೊದಲಾದವುಗಳು ಜೀವನದ ಅವಿಭಾಜ್ಯ ಅಂಗಗಳಾಗಿವೆ. ಇವುಗಳ ಬಳಕೆಯನ್ನೂ ನಾವೆಲ್ಲರೂ ಒಂದೆಡೆ ಕುಳಿತೇ ಬಳಸುವುದಾಗುತ್ತಿದೆ. ಅಗತ್ಯ ವಸ್ತುಗಳನ್ನು, ತಿಂಡಿ–ತಿನಿಸುಗಳನ್ನು ಕುಳಿತಲ್ಲಿಗೇ ತರಿಸಿಕೊಳ್ಳುವ ಎಲ್ಲ ವ್ಯವಸ್ಥೆಗಳು ಇದೀಗ ಚಾಲನೆಯಲ್ಲಿವೆ. ಮೊದಲಿನಂತೆ ಬ್ಯಾಂಕ್‌ಗಳಿಗೆ ಖುದ್ದಾಗಿ ಹೋಗಬೇಕೆನ್ನುವುದಾಗಲಿ, ವಿದ್ಯುತ್ ಶುಲ್ಕವನ್ನು ಪಾವತಿಸಲು ಕಚೇರಿಗೆ ಹೋಗಲೇಬೇಕೆಂದೇನಿಲ್ಲ; ಅದೂ ಕೂಡ ಮನೆಯಲ್ಲಿ ಕುಳಿತೇ ಸಾಧ್ಯವಾಗಿದೆ. ಇದರ ಒಟ್ಟು ತಾತ್ಪರ್ಯ, ನಾವೆಲ್ಲರೂ ಹೆಚ್ಚಿನ ಸಮಯ ಒಂದೆಡೆಯೇ ಕುಳಿತುಕೊಂಡಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ತಂತ್ರಜ್ಞಾನದ ನೆರವಿನಿಂದ ಎಲ್ಲ ಕೆಲಸಗಳನ್ನೂ ಮನೆಯಲ್ಲಿ ಕುಳಿತುಕೊಂಡೇ ಮಾಡುತ್ತಿದ್ದೇವೆ ಎಂದು ಖುಷಿ ಪಡುತ್ತಿದ್ದೀರೇನು? ಆದರೆ ಅಧ್ಯಯನಗಳು ಈ ರೀತಿ ದೀರ್ಘಕಾಲದವರೆಗೆ ಕುಳಿತೇ ಇರುವುದು ಆರೋಗ್ಯದ ದೃಷ್ಟಿಯಿಂದ ಖಂಡಿತ ಅಪಾಯವೆಂದೂ, ಸುಮಾರು ಮೂವತ್ತಕ್ಕೂ ಹೆಚ್ಚು ಬಗೆಯ ಸಮಸ್ಯೆಗಳಿಗೆ ಇದು ಕಾರಣವಾಗಬಹುದೆಂದೂ ತಿಳಿಸುತ್ತವೆ. ಈ ಎಲ್ಲ ಸಮಸ್ಯೆಗಳನ್ನು ಒಟ್ಟಾಗಿ ತಜ್ಞರು 'ಸಿಟ್ಟಿಂಗ್ ಡಿಸೀಸ್' ಎಂದು ಕರೆದಿದ್ದಾರೆ. ಅನೇಕ ವರ್ಷಗಳ ನಂತರ ಒಂದೊಂದೇ ಸಮಸ್ಯೆಗಳು ಕಾಣಿಸಿಕೊಳ್ಳಬಹುದಾದ ಇದು ಧೂಮಪಾನದಷ್ಟೇ ಅಪಾಯಕರ ಎಂದೂ ಕೆಲವರು ತಜ್ಞರು ಹೇಳುತ್ತಿದ್ದಾರೆ.

ಎಂತಹ ಸಮಸ್ಯೆಗಳು?

ನಿಂತಿರುವ ಅಥವಾ ಯಾವುದಾದರೊಂದು ಬಗೆಯ ಚಲನೆಯಲ್ಲಿರುವ ವ್ಯಕ್ತಿಗೆ ಹೋಲಿಸಿದರೆ, ನಿರಂತರವಾಗಿ ಎರಡು ತಾಸುಗಳವರೆಗೆ ಕುಳಿತುಕೊಂಡಾಗ ಪ್ರತಿ ಬಾರಿ ಸುಮಾರು 352 ಕ್ಯಾಲೋರಿಗಳಷ್ಟು ಶಕ್ತಿಯು ಶೇಖರಿಸಲ್ಪಡುತ್ತದೆ. ಹಾಗಾಗಿಯೇ ದಿನವೊಂದರಲ್ಲಿ ಹೆಚ್ಚು ಸಮಯ ಕುಳಿತೇ ಇರುವ ವ್ಯಕ್ತಿಯು ದೀರ್ಘಕಾಲಿಕ ಕಾಯಿಲೆಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಬೊಜ್ಜು, ಅಧಿಕ ದೇಹತೂಕ, ಹೃದಯಸಂಬಂಧಿ ಕಾಯಿಲೆಗಳು, ಕ್ಯಾನ್ಸರ್ ಮೊದಲಾದ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಎಲ್ಲ ಸಾಧ್ಯತೆಗಳೂ ಹೆಚ್ಚು. ಕುಳಿತೇ ಇರುವಾಗ ದೇಹದಲ್ಲಿ ಮನಸ್ಸನ್ನು ಪ್ರಫುಲ್ಲಗೊಳಿಸುವ ನರವಾಹಕಗಳ ಉತ್ಪಾದನೆಯೂ ಕ್ಷೀಣಿಸುವುದರಿಂದ ವ್ಯಕ್ತಿಯನ್ನು ಒಂದು ಬಗೆಯ ನಿರುತ್ಸಾಹ ಕೂಡ ಕಾಡಬಹುದು. ಕುಳಿತೇ ಇರುವುದರಿಂದ ವ್ಯಕ್ತಿಯ ಮಾನಸಿಕ ಕಾರ್ಯಕ್ಷಮತೆಯೂ ಕಡಿಮೆಯಾಗಬಹುದು. ಹೆಚ್ಚು ಸಮಯದವರೆಗೆ ಮೊಬೈಲ್, ಕಂಪ್ಯೂಟರ್ ಜೊತೆಯಲ್ಲಿ ಕೆಲಸ ಮಾಡುವವರು ಕುತ್ತಿಗೆ ನೋವು, ಬೆನ್ನುನೋವು, ತಲೆನೋವು ಮತ್ತು ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳಿಂದಲೂ ಬಳಲಬಹುದು. ಕೆಲವೊಮ್ಮೆ ವ್ಯಕ್ತಿಯ ನಿಲುವಿನಲ್ಲಿ, ಭಂಗಿಯಲ್ಲಿ ದೋಷಗಳು ಕಂಡುಬರಬಹುದು. ಗೂನುಬೆನ್ನು, ಭುಜಗಳ ನೋವು, ಕೈಬೆರಳುಗಳಲ್ಲಿ ಜೋಮು ಹಿಡಿದಂತಾಗುವುದು – ಮೊದಲಾದ ಸಮಸ್ಯೆಗಳೂ ಕುಳಿತೇ ಕೆಲಸ ಮಾಡುವವರಲ್ಲಿ ಸಾಮಾನ್ಯ.

ನೆನಪಿಡಿ: ದಿನವೊಂದರಲ್ಲಿ ಮೂರು ತಾಸುಗಳಿಗೂ ಕಡಿಮೆ ಕುಳಿತುಕೊಳ್ಳುವುದನ್ನು ರೂಢಿಸಿಕೊಂಡರೆ, ವ್ಯಕ್ತಿಯ ಜೀವಿತಾವಧಿಯನ್ನು ಎರಡು ವರ್ಷದವರೆಗೆ ಹೆಚ್ಚಿಸಿಕೊಳ್ಳಬಹುದು ಎನ್ನುತ್ತಾರೆ ತಜ್ಞರು.

(ಲೇಖಕಿ: ವೈದ್ಯೆ)

ಹೀಗೆ ಮಾಡಿ

- ಪ್ರತಿ ಮೂವತ್ತು ನಿಮಿಷಗಳಿಗೊಮ್ಮೆ ಕುರ್ಚಿ ಬಿಟ್ಟು ಏಳಿ. ಕನಿಷ್ಠ ಐದು ನಿಮಿಷಗಳ ಕಾಲ ಮನೆಯಲ್ಲಿಯೇ ಅತ್ತಿಂದಿತ್ತ ಅಡ್ಡಾಡಿರಿ. ಅತ್ತಿಂದಲಿತ್ತ ಚಲಿಸುತ್ತಾ ಮಾಡಬಹುದಾದ ಕೆಲಸಗಳನ್ನು ಮಧ್ಯೆ ಮಧ್ಯೆ ಮಾಡುತ್ತಿರಿ.
- ಒಂದೇ ಸಮನೆ ದೂರದರ್ಶನದ ಕಾರ್ಯಕ್ರಮಗಳನ್ನು ನೋಡದಿರಿ. ಒಂದು ಕಾರ್ಯಕ್ರಮ ಮುಗಿಯುತ್ತಲೂ ಎದ್ದು ಬೇರಾವುದಾದರೂ ನಿಂತು ಮಾಡುವ ಕೆಲಸದಲ್ಲಿ ತೊಡಗಿರಿ.
- ನೀವು ಇತರ ಕೆಲಸಗಳಿಗಾಗಿ ಬಹಳ ಸಮಯ ಕುಳಿತೇ ಇರುತ್ತೀರಾದರೆ ದೂರದರ್ಶನ ವೀಕ್ಷಣೆಯನ್ನು ನಿಂತು ಅಥವಾ ನಿಧಾನವಾಗಿ ಅತ್ತಿಂದಿತ್ತ ಓಡಾಡುತ್ತಾ ಮಾಡಬಹುದು.
- ಕುಳಿತು ಕೆಲಸ ಮಾಡುವಾಗ ಕಡ್ಡಾಯವಾಗಿ ಪ್ರತಿ ಒಂದು ತಾಸಿಗೊಮ್ಮೆ ಎದ್ದು ಹತ್ತು ನಿಮಿಷಗಳ ಕಾಲ ಬಿಡುವು ತೆಗೆದುಕೊಳ್ಳಬೇಕು. ಈ ಹತ್ತು ನಿಮಿಷಗಳ ಸಮಯದಲ್ಲಿ ನೀವು ಮನೆಯಲ್ಲಿಯೇ ಓಡಾಡುವುದು ಅಥವಾ ಮೆಟ್ಟಿಲುಗಳಿದ್ದರೆ ಹತ್ತಿ ಇಳಿಯುವುದು ಅಥವಾ ಕೈ ಕಾಲುಗಳ ಸ್ನಾಯುಗಳನ್ನು ಹಿಗ್ಗಿಸುವಂತಹ (ಸ್ಟ್ರೆಚಿಂಗ್) ವ್ಯಾಯಾಮಗಳನ್ನು ಮಾಡುವುದು ಸೂಕ್ತ. ಮನೆಯಲ್ಲಿ ಹೂದೋಟವಿದ್ದರೆ ಅಲ್ಲಿಯೂ ಒಂದು ಸುತ್ತು ಹಾಕಿ ಬರಬಹುದು.
- ಮೊಬೈಲ್ ಫೋನ್‌ನಲ್ಲಿ ಮಾತನಾಡುವಾಗ ಮನೆಯಲ್ಲಿಯೇ ಅತ್ತಿಂದಿತ್ತ ಓಡಾಡಿ.
- ವೆಬಿನಾರ್‌ಗಳು, ಆನ್‌ಲೈನ್ ಸಭೆಗಳನ್ನು ಆಲಿಸುವಾಗಲೂ ನೀವು ನಿಲ್ಲಬಹುದು ಅಥವಾ ಓಡಾಡಬಹುದು.
- ಇದೀಗ ಕೆಲವು ಪುಸ್ತಕಗಳು ಧ್ವನಿಯ ರೂಪದಲ್ಲಿಯೂ ಲಭ್ಯವಿವೆ. ಪುಸ್ತಕ ಓದುವ ಆಸಕ್ತಿಯಿರುವವರು ಓಡಾಡುತ್ತಲೇ ಅದನ್ನು ಆಲಿಸಬಹುದು.





ಮರೆವು. ಇದು ನಮಗೆ ಶಾಪವೂ ಆಗಬಹುದು, ವರವೂ ಆಗಬಹುದು. ಮರೆವಿಗೆ ಕಾರಣವಾದರೂ ಏನು? ಮರೆವಿನಿಂದ ಬಿಡುಗಡೆ ಸಾಧ್ಯವೇ?

ಮರೆವಿನ ನೂತನ ಸಂಹಿತೆ!

ಡಾ. ಕಿರಣ್ ವಿ. ಎಸ್.

ಬದುಕು ಎಂದರೆ ಲಕ್ಷಾಂತರ ಅನುಭವಗಳ ಗ್ರಹಿಕೆ. ಅದರಲ್ಲಿ ಕೆಲವು ನೆನಪುಗಳಾಗಿ ಉಳಿದರೆ, ಬಹುತೇಕ ಸಂಗತಿಗಳು ಚಿತ್ತದಿಂದ ಮರೆಯಾಗುತ್ತವೆ. 'ಬದುಕಿಗೆ ಅಗತ್ಯವಾದ ವಿಷಯಗಳನ್ನು ಮಾತ್ರ ನಮ್ಮ ಮೆದುಳು ನೆನಪುಗಳ ರೂಪದಲ್ಲಿ ಉಳಿಸಿಕೊಳ್ಳುತ್ತದೆ; ಅನಗತ್ಯ ಸಂಗತಿಗಳು ನೆನಪುಗಳ ಹಂತಕ್ಕೆ ಏರದೇ ತಾನಾಗಿಯೇ ಮರೆಯಾಗುತ್ತವೆ' ಎಂದೇ ಬಹುಕಾಲ ನಂಬಲಾಗಿತ್ತು. ಅಂದರೆ, ನೆನಪು ಎನ್ನುವುದು ಪ್ರಜ್ಞಾಪೂರ್ವಕ ಪ್ರಕ್ರಿಯೆ; ಮರೆವು ಎನ್ನುವುದು ಅದಕ್ಕೆ ವಿರುದ್ಧವಾದ, ಯಾವುದೇ ಪ್ರಯತ್ನ ಬೇಡದ ಸಹಜ ಕೆಲಸ ಎನ್ನುವ ಭಾವನೆಯಿತ್ತು.

ಕಳೆದ ಒಂದು ದಶಕದಲ್ಲಿ ನಡೆದ ಹಲವಾರು ಪ್ರಯೋಗಗಳು ಮರೆವಿನ ಕುರಿತಾದ ಹೊಸ ಒಳನೋಟಗಳನ್ನು ತೆರೆದಿಟ್ಟಿವೆ. ಈ ಮುನ್ನ ಎಣಿಸಿದಂತೆ ಮರೆವು ಎನ್ನುವುದು ನೆನಪಿಗೆ ವ್ಯತಿರಿಕ್ತವಾದ ನಿಷ್ಕ್ರಿಯ ಪ್ರಕ್ರಿಯೆ ಅಲ್ಲ. ಬದಲಿಗೆ, ಮೆದುಳು ಪ್ರಯತ್ನಪೂರ್ವಕವಾಗಿ ಸಂಗತಿಗಳನ್ನು ಮರೆಯಿಸುತ್ತದೆ! ನಮ್ಮ ಮೆದುಳು ಸುಖಾಸುಮ್ಮನೆ ಏನನ್ನೂ ಮರೆಯುವುದಿಲ್ಲ; ಅದರ ಹಿಂದೆ ಯಾವುದೋ ಉದ್ದೇಶ ಇರುತ್ತದೆ ಎಂದಾಯಿತು.

ಮೆದುಳಿನ ಎಲ್ಲಾ ಭಾಗಗಳನ್ನೂ ಒಟ್ಟುಗೂಡಿಸಿದರೆ, ಅದರಲ್ಲಿ ಸುಮಾರು ಹತ್ತುಸಾವಿರ ಕೋಟಿ (ಒಂದರ ಮುಂದೆ ಹನ್ನೊಂದು ಸೊನ್ನೆಗಳು) ನರಕೋಶಗಳಿವೆ ಎಂದು ಅಂದಾಜು. ಈ ಬೃಹತ್ ಸಂಖ್ಯೆಯ ನರಕೋಶಗಳು ತಂತಮ್ಮ ನಡುವೆ ಸುಮಾರು ಎರಡು ಕೋಟಿ ಕೋಟಿ (ಎರಡರ ಮುಂದೆ ಹದಿನಾಲ್ಕು ಸೊನ್ನೆಗಳು) ಸಂಪರ್ಕಗಳನ್ನು ಸಾಧಿಸುತ್ತವೆ ಎಂಬ ಊಹೆಯಿದೆ. ನಮ್ಮ ಅನುಭವಕ್ಕೆ ಬಂದ ಪ್ರತಿಯೊಂದು ಘಟನೆಯೂ ಈ ನರವ್ಯೂಹದಲ್ಲಿ ಒಂದು ಹೊಸ ಸಂಪರ್ಕಜಾಲವನ್ನು ಸೃಜಿಸುತ್ತದೆ. ಈ ಜಾಲ ಕೆಲ ಸೆಕೆಂಡುಗಳ ಕಾಲದಿಂದ ಹಿಡಿದು, ಹಲವಾರು ವರ್ಷಗಳವರೆಗೆ ಸಕ್ರಿಯವಾಗಿ ಇರಬಹುದು. ಆಯಾ ಅನುಭವಕ್ಕೆ ಸಂಬಂಧಿಸಿದ ನರಗಳ ಸಕ್ರಿಯ ಜಾಲವನ್ನು 'ಆಯಾ ಘಟನೆಯ ನೆನಪು' ಎಂದು ಕರೆಯಬಹುದು. ಯಾವುದೇ ಅನುಭವವನ್ನು ನಾವು ಪುನಃ ಚಿತ್ತದಲ್ಲಿ ತರಲು ಇಚ್ಛಿಸಿದಾಗ ಆ ವಿಶಿಷ್ಟ ಸಂಪರ್ಕಜಾಲ ಉದ್ದೀಪನಗೊಳ್ಳುತ್ತಾ ನೆನಪಿನ ರೂಪದಲ್ಲಿ ಗ್ರಹಿಕೆಗೆ ಬರುತ್ತದೆ. ಇಂತಹ ಕೋಟ್ಯಂತರ ನೆನಪುಗಳನ್ನು ಶೇಖರಿಸಿ ಇಟ್ಟುಕೊಳ್ಳಬಲ್ಲ ಸಾಮರ್ಥ್ಯ ನಮ್ಮ ಮೆದುಳಿಗೆ ಇದೆ.

ನೆನಪುಗಳ ರಚನೆಯ ಹಿನ್ನೆಲೆಯಲ್ಲಿ ಮರೆಯುವಿಕೆಯನ್ನು ವಿಶ್ಲೇಷಿಸಬಹುದು. ನೆನಪಿನ ಕುರಿತಾದ ಸಂಪರ್ಕಜಾಲ ಮೆದುಳಿನಲ್ಲಿ ರೂಪುಗೊಂಡಿದ್ದರೂ, ಅದು ಸಮಯಕ್ಕೆ ಸರಿಯಾಗಿ ಉದ್ದೀಪನಗೊಳ್ಳದಿದ್ದರೆ ಗ್ರಹಿಕೆಗೆ ಬರುವುದಿಲ್ಲ. 'ತಲೆಯಲ್ಲಿದೆ; ಆದರೆ ಈ ಕ್ಷಣಕ್ಕೆ ನೆನಪಾಗುತ್ತಿಲ್ಲ' ಎನ್ನುವ ಹಳಹಳಿಕೆ ಇಂತಹದ್ದೇ. ಮರೆವಿನ ಮತ್ತೊಂದು ವಿಧಾನದಲ್ಲಿ ನೆನಪು ಶೇಖರವಾಗಿರುವ ಎಡೆಯನ್ನು ತಲುಪಲು ಅಗತ್ಯವಾದ ಪ್ರಕ್ರಿಯೆ ಅಶಕ್ತವಾಗಿರಬಹುದು. ಇದರಲ್ಲಿ ಯಾವುದೋ ಒಂದು ನೆನಪು ಮಾತ್ರ ಮಸುಕಾಗುವುದಿಲ್ಲ. ಬದಲಿಗೆ, ನೆನಪುಗಳನ್ನು ಮರುಕಳಿಸುವ ಇಡೀ ಪ್ರಕ್ರಿಯೆ ವಿಫಲವಾಗುತ್ತದೆ. ಮೂರನೆಯ ವಿಧಾನದಲ್ಲಿ ಮೆದುಳಿನ ಒಂದು ಭಾಗದಲ್ಲಿ ಶೇಖರವಾಗಿರುವ ನೆನಪುಗಳನ್ನು ಗ್ರಹಿಕೆಗೆ ಬಾರದಂತೆ ಮೆದುಳಿನ ಮತ್ತೊಂದು ಬಲಶಾಲಿ ಭಾಗ ವ್ಯವಸ್ಥಿತವಾಗಿ ನಿಗ್ರಹಿಸಬಲ್ಲದು. ಅಂದರೆ, ನೆನಪುಗಳು ಇದ್ದರೂ, ಅವುಗಳನ್ನು ತಲುಪಬಲ್ಲ ವ್ಯವಸ್ಥೆ ಇದ್ದರೂ, ಆ ಪ್ರಕ್ರಿಯೆ ಸಾಕಾರವಾಗದಂತೆ ಮತ್ತೊಂದು ಭಾಗದಿಂದ ಒತ್ತಡ ಬಂದರೆ, ಒಟ್ಟಾರೆ ಮರೆವಿನ ಸಂದರ್ಭವೇ ಆಗುತ್ತದೆ. ಈ ರೀತಿ ಮೆದುಳಿನ ಒಂದು ಭಾಗ ಮತ್ತೊಂದು ಭಾಗವನ್ನು ನಿಗ್ರಹಿಸುತ್ತಾ, ಪ್ರಯತ್ನಪೂರ್ವಕವಾಗಿ ಮರೆವು ಮೂಡುವಂತೆ ಮಾಡುತ್ತದೆ.

ಇಷ್ಟೊಂದು ವ್ಯವಸ್ಥಿತವಾದ ಮರೆವಿನ ಅಗತ್ಯವಾದರೂ ಏನು? ಲಕ್ಷಾಂತರ ಪ್ರಭೇದಗಳ ಜೀವಿಗಳನ್ನು ನಿರ್ವಹಿಸುವ ಪ್ರಕೃತಿ, ಇದಕ್ಕಾಗಿ ಒಂದು ವಿನ್ಯಾಸವನ್ನು ಅಂತರ್ಗತಗೊಳಿಸಿರುತ್ತದೆ. ಜೀವಿಗಳು ಆ ವಿನ್ಯಾಸದ ಭಾಗ. ಈ ಪ್ರಕ್ರಿಯೆಯಲ್ಲಿ ಆಯಾ ಜೀವಿಯ ಪಾತ್ರನಿರ್ವಹಣೆಗೆ ಪೂರಕವಾದ ನೆನಪುಗಳು ಉಳಿದುಕೊಳ್ಳುತ್ತವೆ; ಪೂರಕವಲ್ಲದ ನೆನಪುಗಳನ್ನು ಜೀವಿಯ ಮೆದುಳು ನಿಗ್ರಹಿಸುತ್ತದೆ ಎಂದು ತಜ್ಞರ ಅಭಿಮತ. ಇದಕ್ಕಾಗಿ, ನೆನಪುಗಳನ್ನು ಉಳಿಸಿಡಲು ಮಾಡುವಷ್ಟೇ ಪ್ರಯತ್ನವನ್ನು ಮರೆವು ಮೂಡಿಸಲೂ ಮಾಡಬೇಕು ಎನ್ನುವುದು ಸೋಜಿಗ. ಕಾಯಿಲೆಯಿಂದ ಬಳಲುವಾಗ ಅನುಭವಿಸಿದ ತೀವ್ರ ನೋವು ಕೆಲದಿನಗಳಲ್ಲಿ ತನ್ನ ತೀವ್ರತೆಯನ್ನು ಕಳೆದುಕೊಳ್ಳುತ್ತದೆ. ಕೆಲವರಿಗೆ ಆ ಸಂದರ್ಭದ ಹಲವಾರು ಪ್ರಸಂಗಗಳ ನೆನಪು ಇರುವುದೇ ಇಲ್ಲ. ಇದರ ಹಿಂದೆ ಇರುವ ರಾಸಾಯನಿಕ ಪ್ರಕ್ರಿಯೆಗಳನ್ನು ವಿಜ್ಞಾನಿಗಳು ಅಧ್ಯಯನ ಮಾಡುತ್ತಿದ್ದಾರೆ.

ಇದನ್ನು ಅರಿಯುವುದರ ಪ್ರಯೋಜನವೇನು? ಮರೆವಿಗೆ ಸಂಬಂಧಿಸಿದ ಅನೇಕ ವ್ಯಾಧಿಗಳಿಗೆ, ಮಾನಸಿಕ ಸ್ಥಿತಿಗಳಿಗೆ ಉತ್ತರ ದೊರೆಯಬಹುದು. ಮೆದುಳಿನ ಒಂದು ಭಾಗದ ಮೇಲೆ ಮತ್ತೊಂದು ಭಾಗದ ನಿಯಂತ್ರಣವನ್ನು ಹತ್ತಿಕ್ಕುವ ಮೂಲಕ, ಮರೆವಿನ ಕಾರಣದಿಂದ ಭಾವನೆಗಳ ಮೇಲೆ ಆಗುವ ಪರಿಣಾಮಗಳನ್ನು ಅರಿಯಬಹುದು. ಮರೆಯುವಿಕೆಯ ಪ್ರಕ್ರಿಯೆ ನಮ್ಮ ಮೆದುಳಿನ ಕಾರ್ಯವನ್ನು, ನಮ್ಮ ಒಟ್ಟಾರೆ ಜೀವನವನ್ನು ಯಾವ ರೀತಿ ಪ್ರಭಾವಿಸುತ್ತದೆ ಎಂಬುದನ್ನು ಬಲ್ಲೆವು. ಇದನ್ನು ಉತ್ತಮಗೊಳಿಸುವ ವಿಧಾನಗಳನ್ನು ಪತ್ತೆ ಮಾಡಬಹುದು.


ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿರುವ ಓರ್ವ ವಿಜ್ಞಾನಿ ಹೇಳುವಂತೆ, 'ಜೀವವಿಕಾಸ ನೆನಪು ಮತ್ತು ಮರೆವಿನ ನಡುವೆ ಒಂದು ಚಂದದ ಸಮತೋಲನ ಸಾಧಿಸಿದೆ. ಬೇಕಿದ್ದನ್ನು ಬಲವಾಗಿ ಉಳಿಸಿಕೊಂಡು, ಬೇಡದ್ದನ್ನು ನಿರ್ಭಾವುಕವಾಗಿ ಮರೆಯುವುದು ಜೀವನದ ಬಗ್ಗೆ ನಮ್ಮ ಆಶಾಭಾವ, ಗಟ್ಟಿತನ, ಛಲಗಳ ಸಂಕೇತ.'

(ಲೇಖಕ: ವೈದ್ಯ)

ಸಿಇಟಿ ದಿಕ್ಸೂಚಿ

Physics – Gravitation

1. Which of the following graphs correctly represents the variation of 'g' on the Earth?



2. A mass 'm' on the surface of the Earth is shifted to a target equal to the radius of the Earth. If 'R' is the radius and 'M' is the mass of the Earth, then work done in this process is

(1) $\frac{mgr}{2}$ (2) mgR (3) 2 mgR (4) $\frac{mgr}{4}$

3. A space station is at a height equal to the radius of the Earth. If 'V_E' is the escape velocity on the surface of the Earth, the same on the space station is ______ times V_E

(1) $\frac{1}{2}$ (2) $\frac{1}{4}$ (3) $\frac{1}{\sqrt{2}}$ (4) $\frac{1}{\sqrt{3}}$

4. The value of acceleration due to gravity at a height of 10 km from the surface of earth is x. At what depth inside the earth is the value of the acceleration due to gravity has the same value x?

(1) 5 km (2) 20 km
(3) 10 km (4) 15 km

5. Two satellites of mass m and 9m are orbiting a planet in orbits of radius R. Their periods of revolution will be in the ratio of [KCET-2011]

1) 9 : 1 2) 3 : 1
3) 1 : 1 4) 1 : 3

6. What is a period of revolution of earth satellite? Ignore the height of satellite above the surface of earth


Given:

(a) The value of gravitational acceleration $g = 10 ms^{-2}$
(b) Radius of earth $R_E = 6400km$.
Take = 3.14

(1) 85 minutes (2) 156 minutes
(3) 83.73 minutes (4) 90 minutes


7. A period of geostationary satellite is
(1) 24 h (2) 12 h (3) 30 h (4) 48 h

8. Earth is moving around the Sun in elliptical orbit as shown. The ratio of OB & OA is R. Then the ratio of speed of Earth at A & B is



(1) R^{-1} (2) $\sqrt{R}$ (3) R (4) $R^{2/3}$

9. Variation of acceleration due to gravity (g) with distance x from the centre of the earth is best represented by (R → Radius of the earth)




10. A satellite is orbiting close to the earth and has a kinetic energy K. The minimum extra kinetic energy required by it to just overcome the gravitation pull of the earth is

(1) 3K (2) K (3) 2 2K (4) 2 K

11. The value of acceleration due to gravity at a depth of 1600 km is equal to
[Radius of earth = 6400 km]
[KCET-2017]

(1) $9.8 ms^{-2}$ (2) $4.9 ms^{-2}$
(3) $19.6 ms^{-2}$ (4) $7.35 ms^{-2}$

12. A planet moving around sun sweeps area A_1 in 2 days, A_2 in 3 days and A_3 in 6 days. Then the relation between A_1, A_2 and A_3 is [KCET-2012]



(1) $3A_1 = 2A_2 = A_3$
(2) $2A_1 = 3A_2 = 6A_3$
(3) $3A_1 = 2A_2 = 6A_3$
(4) $6A_1 = 3A_2 = 2A_3$

13. If the mass of a body is M on the surface of the earth, the mass of the same body on the surface of the moon will be

(1) M/6 (2) M (3) 6M (4) Zero

ANSWERS

1. Answer (2)
Solution: $g \times r$ (inside)
$g \times \frac{1}{r^2}$ (outside)

2. Answer (1)
Solution:
$U_i = -\frac{GMm}{R} ; U_F = -\frac{GMm}{R+h} = -\frac{GMm}{2R}$
$W = U_F - U_i = \frac{MgR}{2}$

3. Answer (3)
Solution: $v_e \times \frac{1}{\sqrt{R+h}}$

4. Answer: (2)
Sol: $x = g\left(1-\frac{2h}{R}\right) = g\left(1-\frac{d}{R}\right)$
$\Rightarrow 2h = d$
$\Rightarrow d = 2h = 20km$

5. Answer: (3)
Sol.: Time period does not depends on mass

6. Answer (3)
Hint: Given, gravitational acceleration, $g = 10 ms^{-1}$ Radius of earth, $R_E = 6400km = 6400 \times 10^3$ We know, period of revolution of earth satellite is given as

$T = 2\pi\sqrt{\frac{R_f}{g}} = 2 \times 3.14 \times \sqrt{\frac{6400 \times 10^3}{10}}$
$= 2 \times 3.14 \times 80 \times 10$
Therefore, $T = 5024\ s = \frac{5024}{60} min = 83.733 min$

Thus, period of revolution of Earth satellite is 83.73 minutes.

7. Answer (1)
Hint: Geostationary satellite orbits around Earth above the equator so that it remains stationary as seen from Earth. A period of geostationary satellite is 24h.

8. Answer: (3)
Sol : Assuming difference of major and minor axis to be very small, conservation of angular momentum about sun
$mv_A \times OA = mv_B \times OB$
$\Rightarrow \frac{v_A}{v_B} = \frac{OB}{OA} = R$

9. Answer (4)
Sol. Acceleration due to gravity at a distance 'x' from earth centre is
$g = g_0 (x / R)$, for x < R
Thus acceleration due to gravity increases linearly with the increase in distance from the centre of the earth.
Acceleration due to gravity at a distance 'x' from earth centre is
$g = g_0 (R / x)^2$, for x > R
So acceleration due to gravity decreases as $(1/x^2)$ with the increase in distance from the centre of earth

10. Answer: (2)
Hint: We know $v_e = \sqrt{2} v_0$
When satellite is in orbit $K = \frac{1}{2}mv_0^2$
For satellite to escape its velocity should be v_e
$\therefore$ K.E. To escape, $K_e = \frac{1}{2}mv_e^2 = \frac{1}{2}m(\sqrt{2}v_0) = 2K$
$\therefore$ Extra K.E. required = 2K – K = K

11. Answer: (4)
Sol: $g' = g\left(1-\frac{d}{R}\right) = 9.8 m/s^2\left(1-\frac{1600km}{6400km}\right)$
$= 7.35 m/s^2$

12. Answer: (1)
Sol:- Solution = A real velocity is constant
$\frac{A_1}{2} = \frac{A_2}{3} = \frac{A_3}{6}$

13. Answer (2)
Hint : Mass is independent of acceleration due to gravity

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -38

501. ಉಪವಿಭಾಗದ ಪೊಲೀಸ್ ಅಧಿಕಾರಿ ಯಾರಾಗಿರುತ್ತಾರೆ?
ಎ) ಪಿ.ಎಸ್.ಐ ಬಿ) ಸಿ.ಪಿ.ಐ
ಸಿ) ಡಿ.ಎಸ್.ಪಿ ಡಿ) ಎ.ಎಸ್.ಐ

502. ಈ ಕೆಳಗಿನವುಗಳಲ್ಲಿ ಯಾವುದು ಕರ್ನಾಟಕ ರಾಜ್ಯ ಪೊಲೀಸ್ ಘಟಕವಲ್ಲ?
ಎ) ಸಿ.ಐ.ಡಿ ಬಿ) ಎ.ಸಿ.ಬಿ
ಸಿ) ರಾಜ್ಯ ಗುಪ್ತಚರ ವಾರ್ತೆ ಡಿ) ಸಿ.ಬಿ.ಐ

503. ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ವಾರದ ಕವಾಯತ್ ಅನ್ನು ಯಾವ ದಿನದಂದು ನಡೆಸಲಾಗುತ್ತದೆ?
ಎ) ಮಂಗಳವಾರ ಬಿ) ಭಾನುವಾರ
ಸಿ) ಶುಕ್ರವಾರ ಡಿ) ಗುರುವಾರ

504. ಈಚೆಗೆ ವಿಶ್ವ ಪಾರಂಪರಿಕ ತಾಣಗಳಿಗೆ ಸೇರ್ಪಡೆಯಾದ ಪ್ರಾಚೀನ ಭಾರತದ ನಗರ ಯಾವುದು?
ಎ) ಧೋಲವೀರಾ ಬಿ) ಹರಪ್ಪ
ಸಿ) ಮೊಹೆಂಜೊದಾರೊ ಡಿ) ಕಾಲಿಂಗ್‌ಬಂಗನ್

505. ಚೋಳರ ರಾಜಧಾನಿ ಯಾವುದು?
ಎ) ವಂಜಿ ಬಿ) ಉರೈಯೂರು
ಸಿ) ಕಂಚಿ ಡಿ) ಮಧುರೈ

506. ಮೊದಲನೇ ಪಾಣಿಪತ್ ಕದನ ಯಾವಾಗ ನಡೆಯಿತು?
ಎ) 1592 ಬಿ) 1562
ಸಿ) 1526 ಡಿ) 1620

507. ಬಕ್ಸಾರ್ ಕದನ ಯಾವಾಗ ನಡೆಯಿತು?
ಎ) 1766 ಬಿ) 1764
ಸಿ) 1757 ಡಿ) 1799

508. ಚಂಪಾರಣ್ಯ ಸತ್ಯಾಗ್ರಹ ನಡೆದ ವರ್ಷ
ಎ) 1915 ಬಿ) 1917
ಸಿ) 1918 ಡಿ) 1920

509. ಇರುಳು ಕುರುಡು ಯಾವ ಜೀವಸತ್ವದ ಕೊರತೆಯಿಂದ ಬರುತ್ತದೆ?
ಎ) ಜೀವಸತ್ವ-ಎ ಬಿ) ಜೀವಸತ್ವ-ಬಿ
ಸಿ) ಜೀವಸತ್ವ-ಡಿ ಡಿ) ಜೀವಸತ್ವ-ಇ

510. ರಕ್ತವನ್ನು 4 ಗುಂಪುಗಳಾಗಿ ವಿಂಗಡಿಸಿದವರು ಯಾರು?
ಎ) ಮೆಂಡಲ್
ಬಿ) ಕಾರ್ಲ್ ಲಾಂಡ್‌ಸ್ಟೈನರ್
ಸಿ) ಮೇಡಂ ಕ್ಯೂರಿ
ಡಿ) ಹರ್ಬರ್ಟ್ ಸ್ಪೆನ್ಸರ್

511. ರ್‍ಯಾಡ್ ಕ್ಲಿಫ್ ರೇಖೆಯು ಯಾವ ದೇಶದೊಂದಿಗೆ ಭಾರತದ ಗಡಿಯನ್ನು ನಿರ್ಧರಿಸುತ್ತದೆ?
ಎ) ಚೀನಾ ಬಿ) ನೇಪಾಳ
ಸಿ) ಪಾಕಿಸ್ತಾನ ಡಿ) ಅಫ್ಘಾನಿಸ್ತಾನ

512. 'ಅಂತರರಾಷ್ಟ್ರೀಯ ಸೌರ ಮೈತ್ರಿ' ವಿಚಾರವನ್ನು ಪ್ರಸ್ತಾಪಿಸಿದ ದೇಶ ಯಾವುದು?
ಎ) ಭಾರತ ಬಿ) ಮಾಲ್ಡೀವ್ಸ್
ಸಿ) ಜಪಾನ್ ಡಿ) ಆಸ್ಟ್ರೇಲಿಯಾ

513. ಭಾರತದ ಸಂವಿಧಾನದಡಿಯಲ್ಲಿ ಶೇಷಾಧಿಕಾರಗಳು ಯಾವ ಪಟ್ಟಿಯಲ್ಲಿವೆ?
ಎ) ಕೇಂದ್ರಪಟ್ಟಿ
ಬಿ) ರಾಜ್ಯಪಟ್ಟಿ
ಸಿ) ಸಮವರ್ತಿಪಟ್ಟಿ
ಡಿ) ಮೇಲಿನ ಯಾವುದೂ ಅಲ್ಲ

514. ಕೆಳಗಿನವರಲ್ಲಿ ಯಾರು ಹಿಂದೂಸ್ತಾನ ಸೋಶಿಯಲಿಸ್ಟ್ ರಿಪಬ್ಲಿಕ್ ಯೂನಿಯನ್ ಸದಸ್ಯರಾಗಿದ್ದರು?
ಎ) ಭಗತ್ ಸಿಂಗ್ ಬಿ) ಬಿಪಿನ್ ಚಂದ್ರಪಾಲ್
ಸಿ) ಸೂರ್ಯಸೇನ್
ಡಿ) ಮೇಲಿನ ಯಾರೂ ಅಲ್ಲ

515. ಮಹಾತ್ಮಗಾಂಧಿಯವರ ಪುಣ್ಯತಿಥಿಯನ್ನು ಏನೆಂದು ಆಚರಿಸಲಾಗುತ್ತದೆ?
ಎ) ಹುತಾತ್ಮರ ದಿನ
ಬಿ) ವಿಶ್ವಶಾಂತಿ ದಿನ
ಸಿ) ಕೋಮು ಸೌಹಾರ್ದ ದಿನ
ಡಿ) ಮೇಲಿನ ಯಾವುದೂ ಅಲ್ಲ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ – 37ರ ಉತ್ತರ: 491. ಎ, 492. ಎ, 493. ಡಿ, 494. ಎ, 495. ಬಿ, 496. ಎ, 497. ಡಿ, 498. ಬಿ, 499. ಬಿ, 500. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಒಂದು ಸಂಗತಿಯಲ್ಲಿ ಸತ್ಯಾಂಶವಿದ್ದರೆ, ಅದನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ವಾದಕ್ಕೆ ಇಳಿಯುವ ಅಗತ್ಯವಿಲ್ಲ.

–ವಿನೋಬಾ ಭಾವೆ

ಸ್ಮಾರಕ ತಾಣಗಳಲ್ಲಿ ಸೌಕರ್ಯ ಕಲ್ಪಿಸಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿ

ನಮ್ಮ ಸಂಸ್ಕೃತಿ, ಪರಂಪರೆ ಕುರಿತು ನಾವು ಬಹಳ ಮಾತನಾಡುತ್ತೇವೆ. ಆದರೆ, ಪಾರಂಪರಿಕ ತಾಣಗಳ ಸಂರಕ್ಷಣೆ ಹಾಗೂ ಅವುಗಳಿಗೆ ಮೂಲ ಸೌಕರ್ಯ ಒದಗಿಸುವಂತಹ ಪ್ರಶ್ನೆ ಬಂದಾಗ ನಿರ್ಲಕ್ಷ್ಯ ತೋರುವ ಪ್ರವೃತ್ತಿಯೇ ನಮ್ಮಲ್ಲಿ ಹೆಚ್ಚು. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್ಐ) ಸುಪರ್ದಿಯಲ್ಲಿರುವ ರಾಜ್ಯದ ಸ್ಮಾರಕಗಳ ನಿರ್ವಹಣೆ ಈ ಮಾತಿಗೊಂದು ಜ್ವಲಂತ ನಿದರ್ಶನ. ದೇಶದಲ್ಲಿ ಉತ್ತರಪ್ರದೇಶ ಹೊರತುಪಡಿಸಿದರೆ ಅತ್ಯಧಿಕ ಸಂರಕ್ಷಿತ ಸ್ಮಾರಕಗಳಿರುವ ರಾಜ್ಯ ಕರ್ನಾಟಕ. ಐತಿಹಾಸಿಕ, ಸಾಂಸ್ಕೃತಿಕ, ಕಲಾತ್ಮಕ ಹೀಗೆ ಬೇರೆ ಬೇರೆ ವಿಭಾಗಗಳಲ್ಲಿ ವರ್ಗೀಕರಿಸಿದ ಒಟ್ಟಾರೆ 506 ಸ್ಮಾರಕಗಳು ನಮ್ಮ ರಾಜ್ಯದಲ್ಲಿ ಎಎಸ್ಐ ವತಿಯಿಂದ ನಿರ್ವಹಣೆ ಆಗುತ್ತಿವೆ. ಈ ಪೈಕಿ ಕುಡಿಯುವ ನೀರು, ಶೌಚಾಲಯದಂತಹ ಅಗತ್ಯ ಸೌಕರ್ಯವನ್ನು ಹೊಂದಿರುವ ಸ್ಮಾರಕಗಳು ಶೇ 15ರಷ್ಟು ಮಾತ್ರ. ಕುಡಿಯುವ ನೀರು, ಶೌಚಾಲಯದ ಸೌಲಭ್ಯಕ್ಕಿಂತ ವೈಫೈನಂತಹ ತಾಂತ್ರಿಕ ಸೌಕರ್ಯ ಒದಗಿಸುವುದೇ ಎಎಸ್ಐ ಪಾಲಿಗೆ 'ಹೆಚ್ಚು ಅಗತ್ಯ' ಎನಿಸಿರುವಂತೆ ಕಂಡಿದೆ. ಏಕೆಂದರೆ, ದೇಶದಲ್ಲಿ ವೈಫೈ ಸೌಲಭ್ಯ ಇರುವ ಅತಿ ಹೆಚ್ಚು ಸ್ಮಾರಕಗಳು ರಾಜ್ಯದಲ್ಲಿವೆ. ಆದರೆ, ಬಹುತೇಕ ಸ್ಮಾರಕ ತಾಣಗಳಲ್ಲಿ ಪ್ರವಾಸಿಗರಿಗೆ ಕುಡಿಯಲು ನೀರಿಲ್ಲ, ಕುಳಿತುಕೊಳ್ಳಲು ಬೆಂಚುಗಳಿಲ್ಲ. 160 ತಾಣಗಳಿಗೆ ತೆರಳಲು ಸಮರ್ಪಕವಾದ ರಸ್ತೆಗಳೇ ಇಲ್ಲ.



ಪ್ರವಾಸಿ ತಾಣಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು ಹೆಚ್ಚಿನ ಮುತುವರ್ಜಿ ವಹಿಸಬೇಕು ಮತ್ತು ಅಗತ್ಯ ಅನುದಾನ ಒದಗಿಸಬೇಕು

ಸ್ಮಾರಕಗಳ ವಸ್ತುಸ್ಥಿತಿ ಅಧ್ಯಯನದಲ್ಲಿ ಇಂತಹ ಹಲವು ಕೊರತೆಗಳು ಎದ್ದುಕಂಡಿವೆ. ಹಾಗಾದರೆ ಇಷ್ಟು ವರ್ಷಗಳ ಕಾಲ ಎಎಸ್ಐ ಮಾಡಿದ್ದೇನು, ಪಾರಂಪರಿಕ ತಾಣಗಳಲ್ಲಿ ಕನಿಷ್ಠ ಸೌಕರ್ಯವನ್ನು ಕಲ್ಪಿಸಲೂ ಆಗದಷ್ಟು ಆ ಇಲಾಖೆಗೆ ಹಣಕಾಸಿನ ಕೊರತೆಯೇ ಎನ್ನುವ ಪ್ರಶ್ನೆಯೂ ಏಳುತ್ತದೆ. ಪ್ರವಾಸೋದ್ಯಮ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ಅಧ್ಯಯನದ ಹೆಸರಿನಲ್ಲಿ ವಿದೇಶ ಪ್ರವಾಸ ಮಾಡಿ ಬರುತ್ತಾರೆ. ಅಲ್ಲಿ ಸ್ಮಾರಕಗಳನ್ನು ಹೇಗೆ ನಿರ್ವಹಣೆ ಮಾಡಿದ್ದಾರೆ, ಪ್ರವಾಸಿಗರಿಗೆ ಯಾವ ರೀತಿ ಸೌಲಭ್ಯ ಒದಗಿಸಿದ್ದಾರೆ ಎಂಬಿತ್ಯಾದಿ ವಿವರಗಳ ಗೋಜಿಗೆ ನಮ್ಮ ಅಧಿಕಾರಸ್ಥರು ಹೋಗುವುದೇ ಇಲ್ಲ ಎಂದು ತೋರುತ್ತದೆ. ಆದ್ದರಿಂದಲೇ ಇಂತಹ 'ಅಧ್ಯಯನ'ದ ಪ್ರಯೋಜನ ನಮ್ಮ ಸ್ಮಾರಕ ತಾಣಗಳಿಗೆ ಸೌಲಭ್ಯ ಕಲ್ಪಿಸುವ ವಿಷಯದಲ್ಲಿ ಆಗುವುದಿಲ್ಲ.

ಹಾಗೆ ನೋಡಿದರೆ, ಪ್ರವಾಸೋದ್ಯಮದಲ್ಲಿ ಮುಂಚೂಣಿಯಲ್ಲಿರುವ ಹಲವು ದೇಶಗಳಲ್ಲಿ ಪಾರಂಪರಿಕ ತಾಣಗಳೇ ಇಲ್ಲ. ಹೀಗಿದ್ದೂ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಅವು ಯಶಸ್ವಿಯಾಗಿವೆ. ಅಂದರೆ ನಮ್ಮಲ್ಲಿನ ಶಕ್ತಿ, ಸಾಧ್ಯತೆಗಳು ನಮಗೇ ಸರಿಯಾಗಿ ಅರ್ಥವಾದಂತಿಲ್ಲ. ನಮ್ಮ ಸಚಿವರಿಗೂ ಅರ್ಥವಾಗಿಲ್ಲ, ಅಧಿಕಾರಿಗಳಿಗೂ ತಿಳಿದಿಲ್ಲ. ಹಾಗಾಗಿಯೇ ನಮ್ಮ ಪ್ರವಾಸೋದ್ಯಮ ಕ್ಷೇತ್ರ ಸಮಸ್ಯೆಯಲ್ಲಿ ಸಿಲುಕಿಕೊಂಡಿದೆ. ಪ್ರವಾಸಿ ತಾಣಗಳು ಸೌಲಭ್ಯವಿಲ್ಲದೆ ಒದ್ದಾಡುತ್ತಿವೆ. ಪ್ರವಾಸಿಗರಿಗೆ ಸೌಲಭ್ಯ ಒದಗಿಸುವ ವಿಷಯದಲ್ಲಿ ಯುರೋಪಿನ ರಾಷ್ಟ್ರಗಳಿಂದ ನಾವು ಕಲಿಯುವುದು ಬಹಳಷ್ಟಿದೆ. ಸ್ಮಾರಕಗಳನ್ನು ಹೇಗೆ ಸಂರಕ್ಷಿಸಿಕೊಳ್ಳಬೇಕು ಹಾಗೂ ಅಲ್ಲಿ ಹೇಗೆ ಸೌಲಭ್ಯ ಕಲ್ಪಿಸಬೇಕು ಎನ್ನುವುದಕ್ಕೆ ಯುರೋಪಿನ ಸಂರಕ್ಷಿತ ಮಧ್ಯಕಾಲೀನ ನಗರ ಬ್ರೂಗ್ಸ್ ತಕ್ಕ ಮಾದರಿ. ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟ ಮಧ್ಯಕಾಲೀನ ವಾಸ್ತುವೈಭವದ ಕಟ್ಟಡಗಳು, ಪಾರಂಪರಿಕ ತಾಣಗಳು, ಹೀಗೆ ಹಲವು ವಿಶೇಷಗಳನ್ನು ಹೊಂದಿರುವ ಬ್ರೂಗ್ಸ್ ಪ್ರವಾಸಿಗರ ಅಚ್ಚುಮೆಚ್ಚಿನ ತಾಣಗಳಲ್ಲಿ ಒಂದೆನಿಸಲು ಅಲ್ಲಿ ಒದಗಿಸಿರುವ ಸೌಲಭ್ಯಗಳೂ ಕಾರಣ. ಯುರೋಪಿನ ಉದಾಹರಣೆಯನ್ನು ಬಿಡಿ, ನಮ್ಮ ದೇಶದ ಕೇರಳದಲ್ಲಿ ಪ್ರವಾಸೋದ್ಯಮ ಸಾಧಿಸಿದ ಅಭಿವೃದ್ಧಿಯನ್ನೇ ನೋಡಿ. ಹಂಪಿಯಂತಹ ವಿಶ್ವ ಪರಂಪರೆಯ ತಾಣ ಕೇರಳದಲ್ಲಿಲ್ಲ. ನಮ್ಮಲ್ಲಿರುವಂತಹ ವೈವಿಧ್ಯ ಕೂಡ ಅಲ್ಲಿಲ್ಲ. ಆದರೆ, ಅಲ್ಲಿರುವ ಸ್ಮಾರಕಗಳು ಸೇರಿದಂತೆ ಎಲ್ಲ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಕಲ್ಪಿಸುವ ವಿಷಯದಲ್ಲಿ ಅಲ್ಲಿನ ರಾಜ್ಯ ಸರ್ಕಾರ ಮುತುವರ್ಜಿ ತೋರಿದೆ. ಪ್ರವಾಸೋದ್ಯಮ ಅಭಿವೃದ್ಧಿಗೆ ಆ ರಾಜ್ಯ ಬಜೆಟ್‌ನಲ್ಲಿ ದೊಡ್ಡಮೊತ್ತದ ಅನುದಾನವನ್ನು ಎತ್ತಿಡುತ್ತದೆ. ಹೀಗಾಗಿ ಅಲ್ಲಿನ ಸ್ಮಾರಕ ತಾಣಗಳಲ್ಲಿ ಮೂಲಸೌಕರ್ಯ ಕಲ್ಪಿಸುವುದು ಸಲೀಸಾಗಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ರಾಜ್ಯ ಸರ್ಕಾರದ ಮಧ್ಯೆ ಸಮನ್ವಯ ಇಲ್ಲದಿರುವುದು ಕೂಡ ಸ್ಮಾರಕ ತಾಣಗಳ ಅಭಿವೃದ್ಧಿಗೆ ಇರುವ ದೊಡ್ಡ ಅಡೆತಡೆ. ಈ ಅಂತರವನ್ನು ತುಂಬಲು ರಾಜ್ಯ ಪ್ರವಾಸೋದ್ಯಮ ಸಚಿವರು ಗಮನಹರಿಸಬೇಕು. ಪ್ರವೇಶ ಶುಲ್ಕದಿಂದ ಬರುವ ಸೀಮಿತ ವರಮಾನದಿಂದ ಸೌಲಭ್ಯ ಒದಗಿಸುವುದು ಎಎಸ್ಐಗೆ ಕಷ್ಟದ ಕೆಲಸ ಎಂದು ಹೇಳಲಾಗುತ್ತಿದೆ. ಕೇರಳ ಸರ್ಕಾರದಂತೆ ರಾಜ್ಯ ಸರ್ಕಾರವೂ ಎಎಸ್ಐ ಜತೆ ಕೈಜೋಡಿಸಿದರೆ ನಮ್ಮ ಸ್ಮಾರಕ ತಾಣಗಳೂ ಬಹುಬೇಗ ಸೌಲಭ್ಯಗಳನ್ನು ಪಡೆಯಲು ಸಾಧ್ಯ. ರಾಜ್ಯದ ಪ್ರಮುಖ ಪ್ರವಾಸಿ ತಾಣಗಳು ಅಭಿವೃದ್ಧಿ ಹೊಂದಿ, ಅಲ್ಲಿಗೆ ಪ್ರವಾಸಿಗರು ದೊಡ್ಡ ಸಂಖ್ಯೆಯಲ್ಲಿ ಬರುವಂತಾದರೆ, ಅಲ್ಲಿನ ಸಮೀಪದ ಚಿಕ್ಕ-ಪುಟ್ಟ ತಾಣಗಳೂ ಅಭಿವೃದ್ಧಿ ಹೊಂದುತ್ತವೆ. ಹೀಗಾಗಿ ಪ್ರವಾಸಿ ತಾಣಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ನೆರವು ನೀಡಬೇಕು. ಪ್ರವಾಸೋದ್ಯಮ ಬೆಳೆದರೆ ಸ್ಥಳೀಯರಿಗೆ ಉದ್ಯೋಗಾವಕಾಶಗಳು ಸಿಗಲಿವೆ ಎಂಬುದನ್ನು ನೆನಪಿಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಸ್ಮಾರಕಗಳ ಮೇಲಿನ ಪ್ರೀತಿಯನ್ನು ಬರೀ ಮಾತಿನಲ್ಲಿ ತೋರದೆ, ಸೌಕರ್ಯ ಕಲ್ಪಿಸುವ ವಿಚಾರದಲ್ಲಿ ತೋರಬೇಕು.

ದಿನದ ಟ್ವೀಟ್


ಈ ಬೇಡಿಕೆಗಳನ್ನೂ ಪರಿಗಣಿಸಿ



ಸಾರ್ವಜನಿಕರ ಬೇಡಿಕೆಗೆ ಮಣಿದು ಖೇಲ್ ರತ್ನ ಪ್ರಶಸ್ತಿಯ ಹೆಸರು ಬದಲಿಸಲಾಗಿದೆ ಎಂಬುದನ್ನು ಕೇಳಲು ಸಂತಸವಾಗುತ್ತದೆ. ಅದೇ ರೀತಿ, ಇಂಧನ ದರ ಕಡಿತಗೊಳಿಸುವಂತೆ, ವಿಮಾ ಕಂತಿನ ದರ ಇಳಿಸುವಂತೆ, ಕೃಷಿ ಕಾಯ್ದೆಗಳನ್ನು ಮರುಪರಿಶೀಲನೆಗೆ ಒಳಪಡಿಸುವಂತೆ... ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ. ಈ ವಿಚಾರಗಳ ಬಗ್ಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಬಿಜೆಪಿ ತನ್ನ ಇಮೇಜ್ ಬದಲಿಸಿಕೊಳ್ಳಲು ಮುಖ್ಯಮಂತ್ರಿಯನ್ನೇನೋ ಬದಲಿಸಿತು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಿಂದಿನ ಸರ್ಕಾರದ ಮಂತ್ರಿಮಂಡಲವನ್ನೇ ನೀಡಿತು. ಅದೇ ಹಳೆಯ ಸಚಿವರು ಹೊಸದಾಗಿ ಪ್ರಮಾಣ ಸ್ವೀಕರಿಸಿ, ತಮ್ಮ ಹಳೆ ಚಾಳಿಯನ್ನು ಮುಂದುವರಿಸಿದ್ದಾರೆ. ಇವರಿಗೆ ಜನರ ಸಂಕಷ್ಟ ಪರಿಹಾರವಾಗಬೇಕಿಲ್ಲ. ವಿಜಯೋತ್ಸವಗಳು, ಸನ್ಮಾನಗಳು ಬೇಕಾಗಿವೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 10-8-1996

- **ವೃತ್ತಿಶಿಕ್ಷಣ ಪ್ರವೇಶ ಶುಲ್ಕ ಬದಲಾವಣೆ ಇಲ್ಲ: ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಆಗಸ್ಟ್ 9– ಕರ್ನಾಟಕ ಸರ್ಕಾರವು ವೃತ್ತಿಶಿಕ್ಷಣದ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ ರೂಪಿಸಿದ್ದ ಕೆಲವು ನಿಯಮಗಳನ್ನು ಕಳೆದ ವರ್ಷದ ಆಗಸ್ಟ್ 11ರಂದು ರದ್ದು ಮಾಡಿ ತಾನು ಮಾಡಿದ ಕೆಲವು ಮಾರ್ಪಾಡನ್ನು ಈಗಲೂ ಮುಂದು-ವರಿಸಬೇಕೆಂದು ಸುಪ್ರೀಂ ಕೋರ್ಟ್ ಇಂದು ಸರ್ಕಾರಕ್ಕೆ ಆಜ್ಞಾಪಿಸಿತು.

ಅನಿವಾಸಿ ಭಾರತೀಯರಿಗೆ ನೀಡುವ ಕೋಟಾವನ್ನು ಹೆಚ್ಚಿಸಬೇಕು. ಈಗಿನ ಪ್ರವೇಶ ಶುಲ್ಕವನ್ನು ಅಧಿಕಗೊಳಿಸಬೇಕು ಮತ್ತು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ನ್ಯಾಯಾಲಯವು ಮಾಡಿರುವ ಪ್ರವೇಶ ಶುಲ್ಕ ನೀತಿಯಲ್ಲಿ ಮಾರ್ಪಾಡು ಮಾಡಬೇಕು ಎಂದು ಟಿಎಂಎ ಫೌಂಡೇಶನ್, ವೆಂಕಟೇಶ್ವರ ಶಿಕ್ಷಣ ಸಂಸ್ಥೆ ಮತ್ತು ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗಗಳ ಸಮಿತಿ ಮುಂತಾದ ಸಂಸ್ಥೆಗಳು, 1995ರ ಆಗಸ್ಟ್ 11ರ ಆಜ್ಞೆಯನ್ನು ಪ್ರಶ್ನಿಸಿದ್ದವು.

- **ಭಾರತ ಕ್ರಿಕೆಟ್ ತಂಡದ ಕ್ಯಾಪ್ಟನ್ ಸಚಿನ್**

ಕಲ್ಕತ್ತ, ಆಗಸ್ಟ್ 9– ಮಹಮದ್ ಅಜರುದ್ದೀನ್ ಅವರ ಬದಲು ಸಚಿನ್ ತೆಂಡೂಲ್ಕರ್ ಈಗ ಭಾರತ ಕ್ರಿಕೆಟ್ ತಂಡದ ಕ್ಯಾಪ್ಟನ್.

50 ವರ್ಷಗಳ ಹಿಂದೆ

ಮಂಗಳವಾರ, 10-8-1971

- **ಆಕ್ರಮಣ ನಿರೋಧಕ್ಕೆ ಭಾರತ– ರಷ್ಯಾ ನಡುವೆ 20 ವರ್ಷಗಳ ಒಪ್ಪಂದ**

ನವದೆಹಲಿ, ಆಗಸ್ಟ್ 9– ಭಾರತ ಮತ್ತು ರಷ್ಯಾ ವಿರುದ್ಧ ಯಾವುದಾದರೂ ಮೂರನೆಯ ದೇಶವೊಂದು ಮುತ್ತಿಗೆ ಎಸಗಿದರೆ ತಮ್ಮ ಭದ್ರತೆಗಾಗಿ ಉಭಯ ರಾಷ್ಟ್ರಗಳೂ 'ಪರಸ್ಪರ ಸಮಾಲೋಚಿಸಿ ಪರಿಣಾಮಕಾರಕ ಕ್ರಮಗಳನ್ನು' ತೆಗೆದುಕೊಳ್ಳುವುದಾಗಿ ಪ್ರತಿಜ್ಞೆ ಮಾಡುವ 20 ವರ್ಷಗಳ ಭಾರತ– ರಷ್ಯಾ ಒಪ್ಪಂದವೊಂದಕ್ಕೆ ಇಂದು ಇಲ್ಲಿ ಸಹಿ ಹಾಕಲಾಯಿತು.

'ಈ ಒಪ್ಪಂದವು ನಮ್ಮ ಪ್ರಾದೇಶಿಕ ಸಮಗ್ರತೆ ಮತ್ತು ಪರಮಾಧಿಕಾರಗಳ ವಿರುದ್ಧ ಆಕ್ರಮಣಕೋರ ಉದ್ದೇಶ ಹೊಂದಿರಬಹುದಾದ ಯಾವುದೇ ಶಕ್ತಿಗೆ ನಿಗ್ರಹಕಾರಕ' ಎಂದು ನಂತರ ವಿದೇಶಾಂಗ ಸಚಿವ ಸ್ವರಣಸಿಂಗರು ವರ್ಣಿಸಿದರು.

ಪರಿಸರ ನಿರ್ವಹಣೆ ಹೊಣೆಗಾರಿಕೆ ತೋರದೆ, ಭೂಕುಸಿತದಂಥ ದುರಂತಕ್ಕೆ ಪರಿಹಾರ ಅಸಾಧ್ಯ

ಇದು ಪರಿಸರ ತುರ್ತುಪರಿಸ್ಥಿತಿ!



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಉತ್ತರ ಕನ್ನಡದ ಕಾಳಿನದಿ ತಪ್ಪಲಿನ ಕಳಚೆ ಕಣಿವೆಯು ಸಹ್ಯಾದ್ರಿಯ ಸೌಂದರ್ಯವೆಲ್ಲ ಮೈವೆತ್ತ ತಾಣವಾಗಿತ್ತು. ಇತ್ತೀಚೆಗೆ ಸುರಿದ ಭಾರಿ ಮಳೆಗೆ ಅದು ಸಂಪೂರ್ಣ ಕೊಚ್ಚಿಹೋಗಿದೆ! ಗುಡ್ಡಗಳು ಬಿರಿದು, ಕಣಿವೆಗಳು ಕುಸಿದು, ನದಿಗಳು ಕಕ್ಷೆ ಬದಲಿಸಿ, ನೂರಾರು ಮನೆ- ಕೊಟ್ಟಿಗೆಗಳು ಮಣ್ಣಿನಡಿ ಹುಗಿದುಹೋಗಿವೆ.

ಪ್ರವಾಹವು ತಂದ ಹೂಳಿನಲ್ಲಿ ತೋಟ- ಗದ್ದೆಗಳು ಮುಚ್ಚಿಹೋಗಿವೆ. ರಸ್ತೆ, ವಿದ್ಯುತ್ ಸಂಪರ್ಕವಿಲ್ಲದಾಗಿದೆ. ಪರ್ವತಮಾಲೆಯ ಅರಣ್ಯಗಳಿಂದ ಸದಾಕಾಲ ಹರಿದು ಬರುತ್ತಿದ್ದ ಝರಿಗಳೆಲ್ಲ ಕುಸಿದ ಗುಡ್ಡಗಳಡಿ ಮಾಯವಾಗಿವೆ. ತಾತ್ಕಾಲಿಕ ಶೆಡ್ಡುಗಳಲ್ಲಿ ನೆಲೆ ನಿಂತಿರುವ ಹಲವಾರು ಕುಟುಂಬಗಳೀಗ, ಕುಡಿಯುವ ಬಿಂದಿಗೆ ನೀರಿಗೂ ಮಳೆಗೆ ಕೊಡ ಹಿಡಿಯಬೇಕಾದ ಸ್ಥಿತಿ! ಮಲೆನಾಡಿನ ಸಮೃದ್ಧ ಹಳ್ಳಿಯೊಂದು ಒಂದೇ ದಿನದ ಭಾರಿ ಮಳೆಗೆ ಸಂಪೂರ್ಣ ನಾಶವಾದ ದುರಂತದ ಚಿತ್ರಣವಿದು.

ಮನೆ- ಹೊಲಗಳನ್ನೆಲ್ಲ ಕಳೆದುಕೊಂಡು ಭವಿಷ್ಯದ ಭರವಸೆಯೇ ಕೊಚ್ಚಿಹೋದಂತಿರುವ ಇಲ್ಲಿನ ಸಮುದಾಯಕ್ಕೆ ಈಗ ಉಳಿದಿರುವುದು, ಅಧಿಕಾರ ವಹಿಸಿಕೊಂಡ ಮರುದಿನವೇ ಭೇಟಿ ನೀಡಿದ ನೂತನ ಮುಖ್ಯಮಂತ್ರಿಯ ಆಡಳಿತವು ಸೂಕ್ತ ಪರಿಹಾರ ಒದಗಿಸೀತೆಂಬ ನಿರೀಕ್ಷೆ ಮಾತ್ರ!

ಕಳೆದೊಂದು ದಶಕದಿಂದ ಕರಾವಳಿ ಹಾಗೂ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಆರಂಭವಾಗಿರುವ ಈ ಬಗೆಯ ಭೂಕುಸಿತವು ಕಳೆದ ಐದು ವರ್ಷಗಳಿಂದ ತೀವ್ರ ಸ್ವರೂಪ ಪಡೆಯುತ್ತಿದೆ. ಕೊಡಗು, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ, ಇದೀಗ ಉತ್ತರ ಕನ್ನಡ! ಪ್ರವಾಹ ಹಾಗೂ ಭೂಕುಸಿತಗಳ ಈ ಸರಣಿಗೆ ಕಾಡು– ಕಣಿವೆ, ಕೆರೆ- ನದಿಮೂಲ, ತೋಟ- ಗದ್ದೆಗಳೆಲ್ಲ ಬಲಿಯಾಗುತ್ತಿವೆ. ಸಂಕಷ್ಟಕ್ಕೆ ಈಡಾದವರ ಪ್ರಾಥಮಿಕ ಅಗತ್ಯಗಳಾದ ಸೂರು- ನೀರನ್ನಾದರೂ ಪೂರೈಸಲು, ಸರ್ಕಾರ ಹಾಗೂ ನಾಗರಿಕ ಸಮಾಜ ಶ್ರಮಿಸಲೇಬೇಕಾದ ತುರ್ತುಪರಿಸ್ಥಿತಿಯಿದು.

'ಜಾಗತಿಕ ಹವಾಮಾನ ಬದಲಾವಣೆ'ಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಮಳೆಚಕ್ರದ ಲಯ ತಪ್ಪುತ್ತಿರುವುದನ್ನು ವಿಜ್ಞಾನವು ಗುರುತಿಸುತ್ತಿರುವುದು ಎಲ್ಲರಿಗೂ ಗೊತ್ತು. ಒಂದೇ ದಿನ ಭಾರಿ ಮಳೆ ಸುರಿಯುವ ಸಂದರ್ಭಗಳು ಹೆಚ್ಚುತ್ತಿದ್ದು, ಮಲೆನಾಡು- ಕರಾವಳಿಯ ಭೂಕುಸಿತಗಳಿಗೆ ಅದುವೇ ಮೊದಲ ಕಾರಣವಾಗುತ್ತಿದೆ. ಆದರೆ, ಇಂಥ ವಿಕೋಪಗಳನ್ನೆಲ್ಲ ತಾಳಿಕೊಳ್ಳುವ ಪ್ರಕೃತಿಯ ಧಾರಣಾ ಸಾಮರ್ಥ್ಯವೇಕೆ ಒಮ್ಮೆಲೇ ನಾಶವಾಗುತ್ತಿದೆ? ಕೇಳಲೇಬೇಕಾದ ಮುಖ್ಯ ಪ್ರಶ್ನೆಯಿದು.

ದಶಕವೊಂದರಿಂದ ನಾಡಿನಲ್ಲಿ ಘಟಿಸುತ್ತಿರುವ ಭೂಕುಸಿತಗಳನ್ನು ವಿವಿಧ ಆಯಾಮಗಳಲ್ಲಿ ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಪ್ರಕಟಿಸಿರುವ ವರದಿಗಳನ್ನೆಲ್ಲ ಕ್ರೋಡೀಕರಿಸಿ, ರಾಜ್ಯ ಜೀವವೈವಿಧ್ಯ ಮಂಡಳಿಯು ಕಳೆದ ಏಪ್ರಿಲ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ವರದಿ ನೋಡಿದರೆ, ಇದಕ್ಕೆ ಉತ್ತರ ದೊರಕಬಲ್ಲದು.

ಸಹ್ಯಾದ್ರಿ ಪರ್ವತಗಳ ಮೇಲ್ಮಣ್ಣೆಂದರೆ, ನೀರು ಬಸಿದುಹೋಗುವ ಸಡಿಲ ಮಣ್ಣಿನ ಒಂದು ತೆಳುಪದರು. ಜಂಬಿಟ್ಟಿಗೆಮಣ್ಣು, ಬೆಸಾಲ್ಟ್, ಬೆಣಚುಕಲ್ಲು ಇತ್ಯಾದಿಗಳ ಮಿಶ್ರಣದ ಕೆಂಪುಮಣ್ಣದು. ಇದನ್ನು ಈವರೆಗೆ ರಕ್ಷಿಸಿರುವುದು ಇಲ್ಲಿನ ಹೊರಮೈ ಕಾಡಿನ ಹೊದಿಕೆ. ಗಗನಚುಂಬಿ ಮರಗಳ ರೆಂಬೆಗಳು, ಪೊದೆ- ಬಳ್ಳಿಗಳು, ಸಾವಯವ ತ್ಯಾಜ್ಯಗಳ ಹ್ಯೂಮಸ್ ನೆಲಹೊದಿಕೆ ಹಾಗೂ ನೆಲದಾಳಕ್ಕೆ ಇಳಿಯುವ ಬೇರಿನ ಜಾಲ- ಕಾಡಿನ ಈ ಎಲ್ಲ ಅಂಶಗಳೂ ಸೇರಿ, ಮಣ್ಣಿನ ಈ ರಕ್ಷಣಾಪೊರೆ ವಿಕಾಸವಾಗಿರುವುದು.

ಇದು ನಾಶವಾದರೆ, ಬಿದ್ದ ಮಳೆನೀರು ಒಮ್ಮೆಲೆ ಜಾಳಾದ ಮೇಲ್ಮಣ್ಣಿನ ಪದರುಗಳಡಿ ಇಳಿಯತೊಡಗುತ್ತದೆ. ಆಳದಲ್ಲಿರುವ ಜೇಡಿಮಣ್ಣು ಅಥವಾ ಗ್ರಾನೈಟ್ ಪದರು ಈ ನೀರನ್ನು ಹೀರಿಕೊಳ್ಳಲಾರದು. ಅಲ್ಲಿ ನಿಲ್ಲಲು ಸ್ಥಳವಿರದಾಗ, ನೀರು ಕಣಿವೆಯ ತಗ್ಗಿನ ಹೊರಮೈ ದಿಕ್ಕಿನಲ್ಲಿ ಗುರುತ್ವಶಕ್ತಿಯಿಂದಾಗಿ ತಳ್ಳಲ್ಪಡತೊಡಗುತ್ತದೆ. ಭಾರಿ ಮಳೆಯಾದಾಗ ಅಪಾರ ಪ್ರಮಾಣದ ನೀರು ಒಮ್ಮೆಲೆ ಹೀಗೆ ನುಗ್ಗುವಾಗ, ತನ್ನ ಜೊತೆ ಮೇಲ್ಭಾಗದ ಮಣ್ಣು-ಕಾಡುಗಳನ್ನೂ ಜಾರಿಸುತ್ತದೆ. ಆಗ ಗುಡ್ಡ ಬಿರಿದು, ಭೂಕುಸಿತ ಸಂಭವಿಸುತ್ತದೆ!

ಇಳಿಜಾರಿನ ಗುಡ್ಡಗಳಿರುವ ಹಾಗೂ ವಾರ್ಷಿಕ ಮೂರು ಸಾವಿರ ಮಿ.ಮೀ.ಗೂ ಹೆಚ್ಚು ಮಳೆಯಾಗುವ ಮಲೆನಾಡು- ಕರಾವಳಿಯ 23ಕ್ಕೂ ಹೆಚ್ಚಿನ ತಾಲ್ಲೂಕುಗಳಲ್ಲಿ ಈ ಪ್ರಕ್ರಿಯೆ ಗಂಭೀರ ಸ್ವರೂಪ ಪಡೆಯುತ್ತಿದೆಯೆಂದು, ರಾಜ್ಯ ಪ್ರಾಕೃತಿಕ ವಿಕೋಪ ಮಾಹಿತಿ ಕೇಂದ್ರದ (KSNDMC) ತಜ್ಞರು ಈಗಾಗಲೇ ಎಚ್ಚರಿಸಿದ್ದಾರೆ.

ಭಾರಿ ಮಳೆಯೆಂಬುದು ಕೈಮೀರಿದ ಪ್ರಾಕೃತಿಕ ವಿದ್ಯಮಾನವಾದರೂ, ಇದನ್ನು ವಿಪತ್ತನ್ನಾಗಿ ಮಾಡಿದ್ದು ಮೇಲ್ಮಣ್ಣು ರಕ್ಷಿಸುವ ಕಾಡನ್ನು ಕಡಿದ ಮಾನವ ಎಂಬುದೀಗ ಸ್ಪಷ್ಟ. ಅರಣ್ಯ ನಾಶ, ಅವೈಜ್ಞಾನಿಕವಾಗಿ ಗುಡ್ಡ ಅಗೆಯುವುದು, ಏಕಸಸ್ಯ ನೆಡುತೋಪು, ನೆಲದ ಸೂಕ್ಷ್ಮತೆಯರಿಯದ ಅಭಿವೃದ್ಧಿ ಯೋಜನೆಗಳು- ಇವೆಲ್ಲವುಗಳಿಂದಾಗಿ ಭೂಪರಿಸರವು ಗಾಸಿಗೊಂಡು ತನ್ನ ಧಾರಣಾ ಸಾಮರ್ಥ್ಯವನ್ನೇ ಕಳೆದುಕೊಳ್ಳುತ್ತಿರುವುದರ ಪರಿಣಾಮವಿದು. ಭೂಕುಸಿತವಾದೆಡೆ ಹೋದರೆ ಅರಿವಿಗೆ ಬರುವ ಸತ್ಯವಿದು.

ಪಶ್ಚಿಮಘಟ್ಟದ ಇಳಿಜಾರಿನ ಅರಣ್ಯಗಳಲ್ಲೂ ಒತ್ತುವರಿ ಹಾಗೂ ಮರಕಡಿತವನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಸೋಲುತ್ತಿದೆ. ಸಹಜ ಕಾಡಿರುವಲ್ಲೂ ಅಕೇಶಿಯಾ ತರಹದ ಏಕಸಸ್ಯ ನೆಡುತೋಪು ಬೆಳೆಸುವ ಹಾಗೂ ಮರ ಕಡಿಯುವ ಯೋಜನೆಗಳನ್ನು ಅದು ಕೈಬಿಡುತ್ತಿಲ್ಲ! ಅರಣ್ಯ ಹಾಗೂ ಗೋಮಾಳಗಳಲ್ಲಿನ ಅಕ್ರಮ ಕ್ವಾರಿಗಳನ್ನು ನಿಯಂತ್ರಿಸಲು ಗಣಿ ಮತ್ತು ಭೂಗರ್ಭಶಾಸ್ತ್ರ ಇಲಾಖೆಗೆ ಸಾಧ್ಯವಾಗುತ್ತಿಲ್ಲ. ಕ್ವಾರಿಗಳಲ್ಲಿ ಭಾರಿ ಪ್ರಮಾಣದ ಮದ್ದುಗುಂಡು ಸಿಡಿಸಿ ಬಂಡೆಗಳನ್ನು ಸ್ಫೋಟ ಮಾಡಿದರೂ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಗೆ ಅದು ಕೇಳಿಸುತ್ತಿಲ್ಲ. ನದಿಯಂಗಳದ ಮರಳನ್ನೆಲ್ಲ ಅವೈಜ್ಞಾನಿಕವಾಗಿ ತೆಗೆಯುವುದು ಸ್ಥಳೀಯ ಆಡಳಿತಗಳಿಗೆ ಗೋಚರಿಸುತ್ತಿಲ್ಲ. ಇತಿಮಿತಿಯಿಲ್ಲದೆ ಜೆಸಿಬಿ ಯಂತ್ರಗಳನ್ನು ಬಳಸಿ ಕಾನೂನುಬಾಹಿರವಾಗಿ ಭೂಸ್ವರೂಪ ಪರಿವರ್ತಿಸುವ ವರ್ತಮಾನ ನಡೆದೇ ಇದೆ. ಹೆದ್ದಾರಿ ಅಥವಾ ಕಟ್ಟಡ ನಿರ್ಮಿಸುವಾಗ, ಗುಡ್ಡಗಳನ್ನು ಲಂಬಕೋನದಲ್ಲಿ ಕತ್ತರಿಸಬಾರದೆಂಬ ಕನಿಷ್ಠ ವಿವೇಕವೂ ಮಾಯವಾಗುತ್ತಿದೆ.



ಬಸಿಗಾಲುವೆಗಳನ್ನು ಕಸ- ಹೂಳು ತುಂಬದಂತೆ ನಿರ್ವಹಿಸಿ, ಕೃತಕ ಪ್ರವಾಹ ತಡೆಯುವ ಪ್ರಾಥಮಿಕ ಕರ್ತವ್ಯ ನಿರ್ವಹಣೆಯೂ ಸ್ಥಳೀಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ದಾಖಲೆಗಳಲ್ಲಿ ಮಾತ್ರ ಎಲ್ಲವೂ ಜರುಗಿ, 'ಎಲ್ಲ ಸರಿಯಾಗಿ ಸಾಗುತ್ತಿದೆ' ಎಂಬಂಥ ವರದಿಗಳು ಸರ್ಕಾರದ ಕೈಸೇರುತ್ತವೆ. ನೆರೆ- ಭೂಕುಸಿತಗಳಂಥ ಅವಘಡ ಸಂಭವಿಸಿದಾಗ, 'ಭಾರಿ ಮಳೆ' ಮಾತ್ರವೇ ಕಾರಣ ಎಂದು ಹೇಳುವುದರೊಂದಿಗೆ, ಆಡಳಿತ ವ್ಯವಸ್ಥೆಯ ಹೊಣೆಗಾರಿಕೆಯೇ ಮುಗಿದುಹೋಗುತ್ತದೆ!

ಸೂಕ್ತ ನೆಲ- ಜಲ ಬಳಕೆಯ ನೀತಿಯೊಂದರ ಆಧಾರದಲ್ಲಿ ಸುಸ್ಥಿರ ಅಭಿವೃದ್ಧಿ ಮಾರ್ಗಗಳನ್ನು ಈಗಲಾದರೂ ರೂಪಿಸಬೇಕಿದೆ. ಮಳೆಯನ್ನು ಸೂಕ್ತವಾಗಿ ನಿರ್ವಹಿಸಿ, ಪ್ರಕೃತಿ ವಿಕೋಪಗಳ ಪರಿಣಾಮ ತಗ್ಗಿಸುವ ಕ್ಷಮತೆಯನ್ನು ಸಾಧಿಸಲು ಆಗ ಸಾಧ್ಯ. ಅರಣ್ಯ ಸಂರಕ್ಷಣೆ, ಜಲಾನಯನ ಅಭಿವೃದ್ಧಿಯಾಧಾರಿತ ಮೇಲ್ಮಣ್ಣು ನಿರ್ವಹಣೆ, ಕೃಷಿಅರಣ್ಯ, ಪರಿಸರದ ಅಂಗಗಳ ಪುನಶ್ಚೇತನ, ನದಿಪಾತ್ರ ನಿರ್ವಹಣೆ- ಈ ತತ್ವಗಳನ್ನೆಲ್ಲ ಜನರು ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಪಾಲ್ಗೊಳ್ಳುವಿಕೆಯೊಂದಿಗೆ ಜಾರಿಗೊಳಿಸಬೇಕಿದೆ. ಪ್ರಾಕೃತಿಕ ವಿಕೋಪ ನಿಯಂತ್ರಣ ನಿಧಿಯೂ ಸೇರಿದಂತೆ ಅನುದಾನಗಳನ್ನೆಲ್ಲ ಕ್ರೋಡೀಕರಿಸಿ, ಈ ಸುಸ್ಥಿರ ಯೋಜನೆಗಳನ್ನು ಅನುಷ್ಠಾನ ಮಾಡುವುದೇ ಈ ಕ್ಷಣದ ಅಗತ್ಯ.

ತೊಂಬತ್ತರ ದಶಕದ ಆರಂಭದಲ್ಲಿ, ಹುಬ್ಬಳ್ಳಿ ನಗರದ ಉಣಕಲ್ ಕೆರೆಯಂಗಳದ ಹೂಳೆತ್ತುವ ಕಾರ್ಯಕ್ಕೆ ಸಾರ್ವಜನಿಕರೆಲ್ಲ ಕೈಜೋಡಿಸಿದ್ದ ಸಂದರ್ಭವೊಂದು ಇಲ್ಲಿ ಉಲ್ಲೇಖನೀಯ. ಪಕ್ಕದ ನೃಪತುಂಗ ಬೆಟ್ಟದಲ್ಲಿ ಹಸಿರೀಕರಣವೂ ಸಾಗಿತ್ತು. ಆ ಕಾರ್ಯದಲ್ಲಿ ತಮ್ಮ ಮಿತ್ರರೊಂದಿಗೆ ಸಕ್ರಿಯವಾಗಿ ಪಾಲ್ಗೊಂಡ ಸುಶಿಕ್ಷಿತ ಹಾಗೂ ಉತ್ಸಾಹಿ ತರುಣ ಬಸವರಾಜ ಬೊಮ್ಮಾಯಿ ಅವರ ನೆನಪಾಗುತ್ತಿದೆ ಈಗ. ಮೂರು ದಶಕಗಳ ನಂತರ, ಜನಸಹಭಾಗಿತ್ವದ ನೆಲ- ಜಲ ರಕ್ಷಣೆಯ ಮಹತ್ವವನ್ನರಿತ ಅವರೇ ಈಗ ಜನಾಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಹೀಗಾಗಿ, ಸುಸ್ಥಿರ ಅಭಿವೃದ್ಧಿ ಮಾರ್ಗಗಳಿಗೆ ಆದ್ಯತೆ ದೊರಕೀತೆಂಬ ನಿರೀಕ್ಷೆ ಇಟ್ಟುಕೊಳ್ಳೋಣವಲ್ಲವೇ?

ಇಲ್ಲವಾದಲ್ಲಿ, ಭಾರಿ ಬಜೆಟ್ಟಿನಲ್ಲಿ ಸಿಮೆಂಟ್-ಗೋಡೆಗಳನ್ನು ನಿರ್ಮಿಸಿ, ಕುಸಿದ ಬೆಟ್ಟಗಳನ್ನೆಲ್ಲ ಹಿಡಿದೆತ್ತಿ ನಿಲ್ಲಿಸುತ್ತೇವೆನ್ನುವ 'ಬೃಹತ್ ಕಾಮಗಾರಿವಾದಿಗಳು' ಸಹ್ಯಾದ್ರಿಯ ತಪ್ಪಲಿಗೆ ಬಂದಿಳಿದಾರು!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಅಧಿಕಾರ ಪ್ರಸಂಗಿಗಳು!

• ಲಿಂಗರಾಜು ಡಿ.ಎಸ್.

'ಒಲಿಂಪಿಕ್ಸಲ್ಲಿ ನೀರಜ್ ಚಿನ್ನ ಗೆದ್ದುದ್ಕೆ ಮೋದಿ ಮಾರ್ಗದರ್ಶನವೇ ಕಾರಣ ಅಂದದೆ ಸೋನೆವಾಲು. ಶಾಸಕರಿಗೂ ಮಾರ್ಗದರ್ಶನ ಕೊಡಬೌದಲ್ಲವ್ರಾ?' ಅಂತ ಕೇಳಿದೆ.

'ಬಡ್ಡೆತ್ತುದೇ, ಒಲಿಂಪಿಕ್ಸಲ್ಲಿ ಆ ಹುಡ್ಲೇನೋ ಮೆಹನತ್ತು ಮಾಡಿ ಗೆದ್ದವೆ. ಇಲ್ಲಿ ನೋಡಿದ್ರೆ ಪಿಂಚಣಿ ತಗಬೇಕಾದವೆಲ್ಲ ಖಾತೆಗೆ ಕ್ಯಾತೆ ಮಾಡ್ತಾವೆ! ಇಂತೋರಿಗೆ ಮೋದಿ ಏನು ಹೇಳಾತು?' ತುರೇಮಣೆ ಹೇಳಿದರು.

'ತ್ಯಾಗಜೀವಿಗಳಿಗೆಲ್ಲಾ ಭಾರೀ ವಜನ್ ಇರೋ 'ಎ' ಗ್ರೇಡ್ ಖಾತೆನೇ ಬೇಕಂತೆ! ಇನ್ನೊಬ್ರು ಖಾತೆ ಬದ್ಲಾಸದಿದ್ರೆ ರಾಜೀನಾಮೆ ಕೊಟ್ಟಾರಂತೆ!' ಅಂತು ಚಂದ್ರು.

'ಸಂಘ ನಿಷ್ಠರು, ವಲಸಿಗರು, ಪಕ್ಷ ನಿಷ್ಠರು, ವ್ಯಕ್ತಿ ನಿಷ್ಠರು, ಶಕ್ತಿ ನಿಷ್ಠರು, ಅಧಿಕಾರ ನಿಷ್ಠರು, ಅನಿಷ್ಟರುಗಳಿಗೆಲ್ಲಾ ವಿತ್ತಭ್ರಮೆಯಾಗ್ಯದೆ! ಕ್ಷೇತ್ರದೇಲಿ ಆಡಳಿತ ದುರಾಡಳಿತವಾಗ್ಯದೆ, ರೋಡೆಲ್ಲ ಕೆಟ್ಟು ಕುಲಾಕರ್ಮಾಗಿದ್ರೂ ಗ್ಯಾನವೇ ಇಲ್ಲ!' ಯಂಟಪ್ಪಣ್ಣ ಬುಸುಗರೀತು.

'ಸಾವ್ಕಾರ್ರು, ಶೆಟ್ರು ಯಾಕೋ ಮುಕ್ಕುರಿತಾವ್ರೆ. ಅತೃಪ್ತರು ಜೊತೆಗೆ ಸೇರಿಕ್ಯಂಡು ಬಸಣ್ಣನಿಗೆ ಮುಳ್ಳು ಮುರಿದಾರಾ ಅಂತ!' ನನ್ನ ಅನುಮಾನ ಹೇಳಿದೆ.

'ನೋಡ್ಲಾ ಹೈವಾನ್, ಇವೆಲ್ಲಾ ರಂಗದ ಕುಣಿತಾ ಇದ್ದುದ್ದೇ. ನಮ್ಮೂರಿಗೆ ನಾಟಕ ಆಡುವಾಗ ದುಡ್ಡಸ್ಥರೆಲ್ಲಾ 'ನಾನು ಜಾಸ್ತಿ ದುಡ್ಡು ಕೊಟ್ಟಿವ್ನಿ, ನನಗೆ ಅರ್ಜುನನ ಪಾತ್ರವೇ ಬೇಕು', 'ನಾನೇನು ಹುಣಸೆ ಬಿತ್ತ ಕೊಟ್ಟಿವ್ನಾ? ನನಗೆ ಕೃಷ್ಣನ ಪಾತ್ರ ಕೊಡಲೇಬೇಕು!', 'ನನಗೆ ಮಂಡ್ಯೇದ ಹೀರೋಯಿನ್ ಜೊತೆಗೆ ಒಂದು ಡ್ಯಾನ್ಸ್ ಬೇಕು. ದುಡ್ಡು ಏಟಾದ್ರೂ ಆಗ್ಲಿ!' ಅಂತ ಯೇಗ-ಯೇಗ್ತೆ ಮೀರಿ ಮಾತಾಡತಿರಲಿಲ್ಲವ್ರಾ?' ತುರೇಮಣೆ ಕೇಳಿದರು.

'ಒಬ್ಬರು ತ್ಯಾಗಜೀವಿ ಮಾತ್ರ 'ನಿಮ್ಮ ತ್ಯಾಗದ ಕತೆಯ ಇನ್ನೂ ಎಷ್ಟು ದಿನ ಹೇಳ್ತೀರಯ್ಯಾ! ಪಕ್ಷಕ್ಕೇನು ಕೊಡುಗೆ ಕೊಟ್ಟೀದೀರ್ರಾ?' ಅಂತ ಸತ್ಯ ಹೇಳ್ಯವರೆ!' ಅಂತಂದೆ.

'ಋಷಿಕೇಶದ ಮೋದಿ ಗುರುಗಳು, 'ವೃತ್ತಿಪರ ನಿರಾಶಾವಾದಿಗಳು ಎಲ್ಲಾ ಕಡೆ ಇರತರೆ' ಅಂತ ಹೇಳಿದ್ರಲ್ಲ! ಅವರೆಲ್ಲ ಕರ್ನಾಟಕದಲ್ಲೇ ಬೇರು ಬುಟ್ಟವರೆ ಕಯ್ಯಾ!'

ಸಂಗತ

'ಮೂಲ ಆದಾಯ' ಪರಿಕಲ್ಪನೆಯ ಸುತ್ತ...

ಮಾನವ ಸಂಪನ್ಮೂಲ ಅಭಿವೃದ್ಧಿಗೆ ಈ ಮೂಲ ಆದಾಯ ವರವಾಗಲಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಮಧ್ಯಪ್ರದೇಶದಲ್ಲಿ 2011ರಲ್ಲಿ ಯುನಿಸೆಫ್ ಸಹಯೋಗದೊಂದಿಗೆ 20 ಹಳ್ಳಿಗಳ ನಾಗರಿಕರಿಗೆ 'ಪಾಕೆಟ್‌ಮನಿ' ಕೊಡುವ ವಿನೂತನ ಪ್ರಯೋಗ ಮಾಡಲಾಯಿತು. ಎಲ್ಲ ನಾಗರಿಕರ ಬ್ಯಾಂಕ್ ಖಾತೆ ತೆರೆದು, ಪ್ರತಿಯೊಬ್ಬರಿಗೆ ತಿಂಗಳಿಗೆ ₹ 2000 ಜಮಾ ಮಾಡಲಾಯಿತು. ಬಡವ– ಬಲ್ಲಿದ ಎಂಬ ಭೇದವಿಲ್ಲದೆ 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಹಣ ನೀಡಲಾಯಿತು.

ಒಂದು ವರ್ಷ ನಡೆದ ಈ ಪ್ರಯೋಗದಿಂದ ಆ ಹಳ್ಳಿಗಳ ಜನರಲ್ಲಿ ದೊಡ್ಡ ಬದಲಾವಣೆ ಕಂಡುಬಂದಿತ್ತು. ಅವರ ಜೀವನಮಟ್ಟ ಸುಧಾರಿಸಿದ್ದಲ್ಲದೆ, ಗ್ರಾಮಸ್ಥರ ಆಹಾರ ಮತ್ತು ಆರೋಗ್ಯ ಕಾಳಜಿ ಅಧಿಕವಾಯಿತು. ಶೇಕಡ 68ರಷ್ಟು ಕುಟುಂಬಗಳ ಮಕ್ಕಳ ಶಾಲಾ ಶಿಕ್ಷಣ ನಿರಂತರವಾಗಿ ಮುಂದುವರಿಯಿತು. ವೈಯಕ್ತಿಕ ಗಳಿಕೆ ಹೆಚ್ಚಾಯಿತು. ಹೊಸ ಹೊಸ ಉದ್ಯೋಗ, ವ್ಯಾಪಾರಗಳನ್ನು ಅವರು ಆರಂಭಿಸಿದರು. ಇನ್ನೂ ಒಂದು ವಿಶೇಷ ಸಂಗತಿಯೆಂದರೆ, ಯೋಜನೆಯ ಕೊನೆ ಕೊನೆಗೆ ಅವರು ಬ್ಯಾಂಕ್, ಎಲ್ಐಸಿ ಉಳಿತಾಯ ಯೋಜನೆಗಳ ಸದಸ್ಯರಾಗತೊಡಗಿದರು. ಹೀಗೆ ಎಲ್ಲ ನಾಗರಿಕರಿಗೆ ನಿಶ್ಚಿತ ಹಣ ಕೊಡುವುದನ್ನು 'ಮೂಲ ಆದಾಯ' (ಯೂನಿವರ್ಸಲ್ ಬೇಸಿಕ್ ಇನ್‌ಕಂ) ಎಂದು ಕರೆಯುತ್ತಾರೆ.

ಕೋವಿಡ್- 19ರಿಂದಾಗಿ ದೇಶದಲ್ಲಿ ಆರ್ಥಿಕ ಸ್ಥಿತಿ ಗಣನೀಯವಾಗಿ ಕುಸಿದಿದೆ. ದೇಶದ ಜನ ಸಮಸ್ಯೆಯಿಂದ ಮೈಕೊಡವಿ ಬೇಗನೆ ಎದ್ದು ನಿಲ್ಲಲು ಬೇಸಿಕ್ ಇನ್‌ಕಂ ವರದಾನವಾಗುವುದು ಎಂಬ ಮಹತ್ವದ ಚಿಂತನೆ ಆರಂಭವಾಗಿದೆ.

ಅವಶ್ಯ ಆಹಾರ ವಸ್ತುಗಳನ್ನು ಪುಕ್ಕಟೆಯಾಗಿ ವಿತರಿಸುವ ಯೋಜನೆಗಳನ್ನು ಬಹಳಷ್ಟು ರಾಜ್ಯ ಸರ್ಕಾರಗಳು ಜಾರಿಗೆ ತಂದಿವೆ. ಅಂಗವಿಕಲ, ವಿಧವಾ, ವೃದ್ಧಾಪ್ಯ ಪಿಂಚಣಿಗಳು, ಹೆರಿಗೆ ಭತ್ಯೆ... ಹೀಗೆ ಸಾಮಾಜಿಕ ಭದ್ರತೆಯ ಹಲವು ಯೋಜನೆಗಳು ಜಾರಿಯಲ್ಲಿವೆ.

ಇವೆಲ್ಲ ಸೌಲಭ್ಯಗಳೊಂದಿಗೆ ಹೆಚ್ಚುವರಿಯಾಗಿ ಭಾರತದ ಪ್ರತಿಯೊಬ್ಬ ನಾಗರಿಕನಿಗೆ ಪ್ರತೀ ತಿಂಗಳು ನಿಶ್ಚಿತ ಹಣ ಆತನ ಬ್ಯಾಂಕ್ ಖಾತೆಗೆ 'ಮೂಲ ಆದಾಯದ' ರೂಪದಲ್ಲಿ ಜಮಾ ಮಾಡಬೇಕು. ಇದನ್ನು ಇನ್ನಷ್ಟು ಸರಳವಾಗಿ ಹೇಳುವುದಾದರೆ, ಪಾಲಕರು ಮಕ್ಕಳಿಗೆ ಪಾಕೆಟ್‌ಮನಿ ಕೊಡುವ ತರಹ ನಾಗರಿಕರಿಗೆ ಸರ್ಕಾರ ಕೈ ಖರ್ಚಿಗೆ ಒಂದಿಷ್ಟು ಗ್ಯಾರಂಟಿ ಹಣ ಪ್ರತೀ ತಿಂಗಳು ಪಾವತಿ ಮಾಡಬೇಕು. ಇದನ್ನು ಸ್ವ ಇಚ್ಛೆ ಅನುಸರಿಸಿ ಖರ್ಚು ಮಾಡುವುದಕ್ಕೆ ಪೂರ್ಣ ಸ್ವಾತಂತ್ರ್ಯ ಇರಬೇಕು ಎನ್ನುವುದು ಈ ಕಲ್ಪನೆಯ ಆಶಯ.

ಪುಕ್ಕಟೆ ಆಹಾರಧಾನ್ಯ ಒದಗಿಸಿದರೆ ಜನರು ಆಲಸಿಗಳಾಗುತ್ತಾರೆ, ದುಡಿಯುವುದಿಲ್ಲ ಎಂಬುದು ಕೆಲವರ ಅಭಿಪ್ರಾಯ. ಹೀಗೆ ಹೇಳುವವರಿಗೆ ಬಡವರ ನೋವು, ಹಸಿವಿನ ಸಂಕಟ, ಸಾಮಾಜಿಕ ನ್ಯಾಯದ ಪರಿಕಲ್ಪನೆ ಗೊತ್ತಿರುವುದಿಲ್ಲ. ನಮ್ಮ ದೇಶದಲ್ಲಿ ಶೂನ್ಯ ಆದಾಯದ ಲಕ್ಷಾಂತರ ಕುಟುಂಬಗಳಿವೆ. ಅವರು ಎರಡು ಹೊತ್ತಿನ ಊಟಕ್ಕೆ ದಿನವಿಡೀ ಪರದಾಡುತ್ತಾರೆ.

ಜನಕ್ಕೆ ಹೊಟ್ಟೆತುಂಬ ಪೌಷ್ಟಿಕ ಆಹಾರ ಸಿಗಬೇಕು. ಆರೋಗ್ಯಪೂರ್ಣ ಜನಸಮುದಾಯ ದೇಶದ ಬಹುದೊಡ್ಡ ಸಂಪತ್ತು. ಆರೋಗ್ಯಪೂರ್ಣ ಮನುಷ್ಯ ದುಡಿಯದೇ ಇರಲಾರ. ಮನುಷ್ಯರ ಒಳ ಹಂಬಲ ಕಾಯಕವನ್ನು ಬಯಸುತ್ತದೆ. ಕ್ರಿಯಾಶೀಲರಾಗಿರುವುದು ಮನುಷ್ಯರ ಮೂಲ ಗುಣ ಕೂಡ.

ಜನಕ್ಕೆ ತಮ್ಮ ವೈಯಕ್ತಿಕ ಬೇಡಿಕೆಗಳ ನಿರ್ವಹಣೆಗೆ ಕನಿಷ್ಠ ಗ್ಯಾರಂಟಿ ಹಣ ಸಹಾಯಕವಾಗಬಲ್ಲದು. ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧ ಕೊಳ್ಳಲು, ಹೋಟೆಲ್‌ಗೆ ಹೋಗಿ ಕಾಫಿ ಕುಡಿಯಲು, ಪತ್ರಿಕೆ ಕೊಳ್ಳಲು... ಹೀಗೆ ನಿತ್ಯದ ಅವಶ್ಯಕತೆಗೆ ಬೇಸಿಕ್ ಇನ್‌ಕಂ ತಕ್ಷಣ ಉಪಯೋಗಕ್ಕೆ ಬರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಆತ್ಮವಿಶ್ವಾಸದ ಮನಃಸ್ಥಿತಿ ಮೂಡುತ್ತದೆ. ಸಹಾಯ ಯಾಚಿಸುವ ಸಂದರ್ಭಗಳು ಕಡಿಮೆಯಾಗುತ್ತವೆ.

ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್, ಇಂಗ್ಲೆಂಡ್‌ನ ಹಾರಡ್, ಅಮೆರಿಕದ ಎಲಿನಾರ್ ಒಸ್ಟ್ರೋ ಮುಂತಾದ ಚಿಂತಕರು ಈ ಯೋಜನೆಯನ್ನು ಬೆಂಬಲಿಸಿದ್ದಾರೆ. ಬ್ರಿಟನ್, ನೆದರ್ಲೆಂಡ್ಸ್, ಬ್ರೆಜಿಲ್, ಮಕಾವ್ಹೋ, ಇರಾನ್ ದೇಶಗಳಲ್ಲಿ ಮೂಲ ಆದಾಯ ಕುರಿತ ಚರ್ಚೆಗಳು ಹಾಗೂ ಪ್ರಯೋಗಗಳು ನಡೆಯುತ್ತಲೇ ಇವೆ. ನೆದರ್ಲೆಂಡ್ಸ್‌ನ ಉಟ್ರೇಟ್ ಎಂಬ ನಗರದಲ್ಲಿ 2017ರಿಂದ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಯಲ್ಲಿದೆ. ಪ್ರತೀ ನಾಗರಿಕನಿಗೆ ತಿಂಗಳಿಗೆ 15 ಪೌಂಡ್ ನೀಡಲಾಗುತ್ತದೆ.



ಜನರ ಜೀವನಮಟ್ಟದಲ್ಲಿ ಗಣನೀಯ ಸುಧಾರಣೆ, ಅನಾರೋಗ್ಯಕ್ಕೆ ತುತ್ತಾಗುವವರ ಸಂಖ್ಯೆಯಲ್ಲಿ ಇಳಿಮುಖ, ಸಂತಸದ ಸೂಚ್ಯಂಕ ವೃದ್ಧಿ ಮೂಲಭೂತ ಆದಾಯದಿಂದ ಆಗುತ್ತದೆ ಎಂದು ಸ್ವಿಟ್ಜರ್ಲೆಂಡ್ ವಿಶ್ವ-ವಿದ್ಯಾಲಯದ ತಜ್ಞರ ವರದಿ ಹೇಳಿದೆ.

ಎಷ್ಟು ಹಣವನ್ನು ಮೂಲ ಆದಾಯವೆಂದು ಸಂದಾಯ ಮಾಡಬೇಕು ಎಂಬುದನ್ನು ತಜ್ಞರು ನಿರ್ಧರಿಸಬೇಕು. ಹಿಂದಿನ ಎಲ್ಲ ಸರ್ಕಾರಗಳು ಬಡತನವನ್ನು ನಿವಾರಣೆ ಮಾಡುವುದಾಗಿ ಹೇಳುತ್ತ ಬಂದಿವೆ. ಮೂಲ ಆದಾಯದ ಪರಿಕಲ್ಪನೆ ಸಾಕಾರಗೊಂಡರೆ ಬಡತನ ಖಂಡಿತವಾಗಿಯೂ ದೂರವಾಗುತ್ತದೆ ಎನ್ನುವುದು ತಜ್ಞರ ಅಭಿಮತವಾಗಿದೆ.

ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಮೂಲ ಆದಾಯದ ವಿಧಾನ ಖಂಡಿತವಾಗಿಯೂ ಹೊಸ ಉತ್ಸಾಹ ಮೂಡಿಸಬಲ್ಲದು. ಆರ್ಥಿಕ ಸಂಕಷ್ಟದಿಂದ ನಡೆಯುವ ಆತ್ಮಹತ್ಯೆಗಳು ನಿಲ್ಲುವುವು. ಜನರ ಕ್ರಿಯಾಶೀಲ ಬದುಕಿನ ಅವಧಿ ವಿಸ್ತಾರಗೊಳ್ಳುವುದು. ಇದು ಭಾರತದ ಅತ್ಯಂತ ಮಹತ್ವದ ಮತ್ತು ದೂರಗಾಮಿ ಆರ್ಥಿಕ ಅನುಕೂಲಕ್ಕೆ ನಾಂದಿಯಾಗುವುದರಲ್ಲಿ ಸಂಶಯವಿಲ್ಲ.

ವಾಚಕರ ವಾಣಿ

ರಾಜಕೀಯ ವ್ಯಕ್ತಿತ್ವದ ಮಾದರಿ ನಡೆ

ಬಿ.ಎಸ್.ಯಡಿಯೂರಪ್ಪ ಅವರು ತಮಗೆ ಮುಖ್ಯಮಂತ್ರಿ ನೀಡಲು ಮುಂದಾದ ಸಂಪುಟ ದರ್ಜೆ ಸ್ಥಾನಮಾನವನ್ನು ನಿರಾಕರಿಸಿರುವುದು (ಪ್ರ.ವಾ., ಆ. 9) ಅವರ ಸುದೀರ್ಘ ಐದು ದಶಕಗಳ ನುರಿತ ರಾಜಕೀಯ ವ್ಯಕ್ತಿತ್ವದ ಒಂದು ಮಾದರಿ ನಡೆಯೇ ಆಗಿದೆ. ಇದು ಕೇವಲ ಅವರ ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗದೆ, ನೂತನ ಮುಖ್ಯಮಂತ್ರಿ ವಿರುದ್ಧ ಏಳಬಹುದಾದ ಅನುಚಿತ ಟೀಕೆಗಳನ್ನು ಹಾಗೂ ಭವಿಷ್ಯದ ರಾಜಕಾರಣದಲ್ಲಿ ಒಂದು ಅನುಚಿತ ಸಂಪ್ರದಾಯಕ್ಕೆ ನಾಂದಿ ಆಗಬಹುದಾದ ಬೆಳವಣಿಗೆಯನ್ನು ತಪ್ಪಿಸಿದೆ. ಇಷ್ಟಲ್ಲದೆ ಇದೊಂದು ಸಕಾಲಿಕವಾದ ಸನ್ನಡತೆಯೂ ಆಗಿದೆ.

ಪ್ರಸಕ್ತ ಕಾಲಮಾನದ ರಾಜಕಾರಣದಲ್ಲಿ ಕೇವಲ ಅಧಿಕಾರ ಗಳಿಕೆ, ಹಣ ಗಳಿಕೆಯೇ ವ್ಯಕ್ತಿಗತ ರಾಜಕಾರಣದ ಗುರಿ ಆಗಿರುವುದನ್ನು ಎಲ್ಲ ಹಂತಗಳಲ್ಲೂ ಕಾಣುತ್ತಿದ್ದೇವೆ. ನಮ್ಮ ಜನನಾಯಕರಲ್ಲಿ ಸಾಮಾಜಿಕ ಏಳಿಗೆಗೆ ಅಗತ್ಯವಾಗಿ ಇರಬೇಕಾದ ಸೇವಾ ಮನೋಭಾವ ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಯಡಿಯೂರಪ್ಪನವರ ಪ್ರಸಕ್ತ ನಿಲುವು ಆದರ್ಶಪ್ರಾಯವೂ ಆಗಿದೆ.

ಗಿ.ಚನ್ನಬಸವ ಸ್ವಾಮಿ, ಬೆಂಗಳೂರು

ಸಂಚಾರ ನಿಯಮ: ಬೇಡ ಅನಗತ್ಯ ಕಿರಿಕಿರಿ

'ಸಾರಿಗೆ ನಿಯಮಗಳ ಉಲ್ಲಂಘನೆಯಾದರೆ ಮಾತ್ರ ವಾಹನಗಳನ್ನು ಅಡ್ಡಗಟ್ಟಿ, ವಿನಾಕಾರಣ ವಾಹನ ನಿಲ್ಲಿಸಿ ಕಿರಿಕಿರಿ ಉಂಟು ಮಾಡಬೇಡಿ' ಎಂದು ಕಮಿಷನರ್ ಪದೇ ಪದೇ ಹೇಳುತ್ತಿದ್ದರೂ ಸಂಚಾರ ಪೊಲೀಸರು ಆ ಮಾತಿಗೆ ಕಿಮ್ಮತ್ತು ನೀಡುತ್ತಿಲ್ಲ. ಕಮಿಷನರ್ ಮಾತನ್ನೇ ಕೇಳದ ಸಂಚಾರ ಪೊಲೀಸರು ಇನ್ನು ಯಾರ ಮಾತು ಕೇಳುತ್ತಾರೆ ಎಂದು ಜನ ಪ್ರಶ್ನಿಸುತ್ತಿದ್ದಾರೆ.

ಅಬ್ದುಲ್ ರಝಾಕ್ ಮರ್ಧಾಳ, ಮಂಗಳೂರು

ನಾವಿರೋದೆ ಹೀಗೆ...

ಬೇಕಾದ ಖಾತೆಗಾಗಿ ಕ್ಯಾತೆ ತೆಗೆಯದೆ
ಕೊಟ್ಟ ಕುದುರೆಯನೇರಿ ವೀರ, ಶೂರ
ಎನಿಸಿಕೊಳ್ಳುವುದಿದ್ದರೆ
ಇದ್ದ ಪಕ್ಷವನ್ನೇಕೆ ಬಿಟ್ಟು
ಬರುತ್ತಿದ್ದೆವು?!
ಬಾಚಿ ಬಗೆಯುವ ನಮ್ಮ ಬಯಕೆಯ
ನಾವೇ ಬಾಯಿ ಬಿಟ್ಟು ಹೇಳಬೇಕೆ?
ಅಳಿಯ ಅಲ್ಲ ಎಂದೊಡನೇ
ತಿಳಿಯಬೇಕು ಮಗಳ ಗಂಡ...
ಈ ಖಾತೆ ಒಲ್ಲೆಯೆಂದೊಡನೆ
ಅರಿಯಬೇಕು, ಅದು
ಜಲ ಬತ್ತಿರುವ ಹೊಂಡ... ಬರೀ
ದಂಡ?!

ಜೆ.ಬಿ.ಮಂಜುನಾಥ, ಪಾಂಡವಪುರ

ಲಾಕ್‌ಡೌನ್: ಪ್ರಬುದ್ಧ ನಿಲುವಿರಲಿ

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ವಾರಾಂತ್ಯದ ಲಾಕ್‌ಡೌನ್ ಜಾರಿಗೊಳಿಸಿರುವುದು ಅನಿವಾರ್ಯವೇನೂ ಆಗಿರಲಿಲ್ಲ. ನೆರೆಯ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡಿನಲ್ಲಿ ಕೋವಿಡ್ ರೋಗಲಕ್ಷಣಗಳು ಹೆಚ್ಚಿರುವುದರಿಂದ ಆ ಭಾಗದ ಗಡಿ ಭದ್ರತೆಯನ್ನು ಅತ್ಯಂತ ಕಠಿಣವಾಗಿ ನಿರ್ವಹಿಸಿದರಷ್ಟೇ ಸಾಕಾಗಿತ್ತು. ವಾರಾಂತ್ಯದ ಎರಡು ದಿನಗಳಲ್ಲಿ, ನೆರೆ ರಾಜ್ಯಗಳೊಂದಿಗಿನ ಗಡಿ ಪ್ರವೇಶ ದ್ವಾರಗಳನ್ನು ಬಂದ್ ಮಾಡಬಹುದಾಗಿತ್ತು. ಅದುಬಿಟ್ಟು ಈ ಜಿಲ್ಲೆಗಳನ್ನು ವಾರಾಂತ್ಯದ ಲಾಕ್‌ಡೌನ್‌ಗೆ ಒಳಪಡಿಸಿರುವುದರಿಂದ, ಇದೀಗ ತಾನೆ ಚೇತರಿಸಿಕೊಳ್ಳುತ್ತಿರುವ ಇಲ್ಲಿನ ವ್ಯಾಪಾರ-ವಹಿವಾಟಿಗೆ, ಜನಜೀವನಕ್ಕೆ ಇನ್ನಷ್ಟು ಹೊಡೆತ ಕೊಟ್ಟಂತಾಗಿದೆ. ಆಡಳಿತವರ್ಗ ಪ್ರಬುದ್ಧತೆ ತೋರಲಿ.

ಹೊರೆಯಾಲ ದೊರೆಸ್ವಾಮಿ, ಮೈಸೂರು

ಪಟ್ನಾಯಕ್ ನಡೆ ಸ್ಫೂರ್ತಿಯಾಗಲಿ

ಒಲಿಂಪಿಕ್ಸ್‌ನಲ್ಲಿ ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಭಾರತವು ಉತ್ತಮ ಪ್ರದರ್ಶನ ತೋರಿದೆ. ಆದರೆ ಅಮೆರಿಕ, ಚೀನಾ, ಜಪಾನ್, ಬ್ರಿಟನ್‌ನಂತಹ ದೇಶಗಳ ಪದಕ ಪಟ್ಟಿಯ ಆಸುಪಾಸಿನಲ್ಲಿ ಸಹ ನಿಲ್ಲಲು, ಅತಿ ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ನಮ್ಮ ದೇಶಕ್ಕೆ ಸಾಧ್ಯವಾಗಿಲ್ಲ.

ಎಲ್ಲ ಕ್ರೀಡೆಗಳಲ್ಲೂ ನಮ್ಮ ಕ್ರೀಡಾಪಟುಗಳನ್ನು ತಯಾರು ಮಾಡಬೇಕು. ಈ ದಿಸೆಯಲ್ಲಿ ಸರ್ಕಾರ ಎಲ್ಲ ಬಗೆಯ ಪ್ರೋತ್ಸಾಹ ನೀಡಬೇಕು. ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಭಾರತ ಹಾಕಿ ತಂಡಕ್ಕೆ ಸಹಕರಿಸಿದ್ದನ್ನು ಸ್ಫೂರ್ತಿಯಾಗಿ ಸ್ವೀಕರಿಸಿ, ಪ್ರತಿಭಾವಂತ ಕ್ರೀಡಾಪಟುಗಳಿಗೆ ನೆರವಾಗಬೇಕು. ಈ ಮೂಲಕ ದೇಶವು ವಿಶ್ವ ಕ್ರೀಡಾ ವೇದಿಕೆಯಲ್ಲಿ ಕೀರ್ತಿಪತಾಕೆ ಹಾರಿಸುವಂತೆ ಮಾಡಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಜಮೀನು ಒಡೆತನದ ಮಾನದಂಡ ಸಲ್ಲ

ರೈತರ ಮಕ್ಕಳಿಗೆ ವಿಶೇಷ ಶಿಷ್ಯವೇತನ ನೀಡುವ ಯೋಜನೆ ಜಾರಿಗೆ ಕೃಷಿ ಇಲಾಖೆ ಆದೇಶ ಹೊರಡಿಸಿದೆ (ಪ್ರ.ವಾ., ಆ. 8). ಪಿ.ಯು., ಐಟಿಐ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಂದ ಪ್ರಾರಂಭಿಸಿ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳವರೆಗೆ ವಿಶೇಷ ಶಿಷ್ಯವೇತನ ಘೋಷಿಸಲಾಗಿದೆ. ಸರ್ಕಾರದ ಈ ಕ್ರಮ ಶ್ಲಾಘನೀಯವಾದುದು. ಆದರೆ, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಹೆಸರಿನಲ್ಲಿ ಇಲ್ಲವೇ ಅವರ ಪೋಷಕರ ಹೆಸರಿನಲ್ಲಿ ಕೃಷಿ ಜಮೀನು ಇರಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ. ನಮ್ಮ ಸಮಾಜದಲ್ಲಿ ಕೃಷಿ ಕೆಲಸವನ್ನೇ ನಂಬಿಕೊಂಡು ಬದುಕುತ್ತಿರುವ ಅನೇಕರಿಗೆ ಕೃಷಿ ಭೂಮಿ ಇರುವುದಿಲ್ಲ. ಜಮೀನ್ದಾರರು ಹೊಲ ಗದ್ದೆಗಳಲ್ಲಿ ದುಡಿಯುವುದಿಲ್ಲ. ಹಾಗಾಗಿ, ವಿಶೇಷ ಶಿಷ್ಯವೇತನಕ್ಕೆ ಅರ್ಹರಾಗಲು ಕೃಷಿ ಜಮೀನು ಹೊಂದಿರಬೇಕೆಂಬ ನಿಬಂಧನೆಯಿಂದ ಜಮೀನು ಹೊಂದಿರುವವರ ಮಕ್ಕಳಿಗೆ ಮಾತ್ರ ಅನುಕೂಲವಾಗುತ್ತದೆಯೇ ವಿನಾ ಜಮೀನು ಇಲ್ಲದ ಕೃಷಿಕರು ಹಾಗೂ ಕೃಷಿ ಕೂಲಿಕಾರ್ಮಿಕರ ಮಕ್ಕಳಿಗೆ ಪ್ರಯೋಜನವಾಗುವುದಿಲ್ಲ. ಕೋವಿಡ್ ಸಂಕಷ್ಟದ ಈ ಸಮಯದಲ್ಲಿ, ಅವರಿಗೆ ಸರ್ಕಾರದ ನೆರವಿನ ಅಗತ್ಯ ತುಂಬಾ ಇದೆ. ಅದರಿಂದ ಸರ್ಕಾರ ತನ್ನ ಆದೇಶದಲ್ಲಿ ಸೂಕ್ತ ಮಾರ್ಪಾಡು ಮಾಡುವ ಮೂಲಕ, ಜಮೀನು ಇಲ್ಲದ ಕೃಷಿಕರು ಮತ್ತು ಕೃಷಿ ಕೂಲಿಕಾರ್ಮಿಕರ ಮಕ್ಕಳಿಗೂ ವಿಶೇಷ ಶಿಷ್ಯವೇತನ ದೊರೆಯುವಂತೆ ಮಾಡಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿದ್ಯುತ್ ವಿತರಣೆ ಆಮೂಲಾಗ್ರ ಬದಲಾವಣೆಗೆ ಸಿದ್ಧತೆ



ಖಾಸಗೀಕರಣ ಮತ್ತು ಸ್ಪರ್ಧಾತ್ಮಕತೆಗೆ ಆದ್ಯತೆ

ಈ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಸರ್ಕಾರಿ ಸ್ವಾಮ್ಯದ ಕಂಪನಿಗಳು ವಿದ್ಯುತ್ ವಿತರಣೆ ಮಾಡುತ್ತವೆ. ಸರ್ಕಾರಿ ಸ್ವಾಮ್ಯದ ಕಂಪನಿಗಳೇ ಆದರೂ ಈ ಸೇವೆ ನೀಡಲು ವಿದ್ಯುಚ್ಛಕ್ತಿ ಆಯೋಗದಿಂದ ಪರವಾನಗಿ ಪಡೆಯಬೇಕು. ಒಂದು ಕಂಪನಿಯ ವಿತರಣಾ ಕ್ಷೇತ್ರದಲ್ಲಿ ಬೇರೊಂದು ಕಂಪನಿ ಸೇವೆ ಒದಗಿಸಲು ಅವಕಾಶವಿಲ್ಲ. ಆದರೆ ಸರ್ಕಾರ ಈಗ ಮಂಡಿಸಲು ಹೊರಟಿರುವ ಮಸೂದೆಯಲ್ಲಿ ಪರವಾನಗಿ ಪದ್ಧತಿ ಮತ್ತು ವಿತರಣಾ ಕ್ಷೇತ್ರ ನಿಗದಿ ಪದ್ಧತಿಯನ್ನು ಕೈಬಿಡಲಾಗಿದೆ. ಈ ಮಸೂದೆಯಲ್ಲಿರುವ ಪ್ರಮುಖ ಬದಲಾವಣೆಗಳು ಈ ಮುಂದಿನಂತಿವೆ.

- ಖಾಸಗಿ ಕಂಪನಿಗಳೂ ವಿದ್ಯುತ್ ಪೂರೈಕೆ ಸೇವೆ ನೀಡಬಹುದು. ಇದಕ್ಕಾಗಿ ವಿದ್ಯುಚ್ಛಕ್ತಿ ಆಯೋಗವು ನಿಗದಿ ಮಾಡುವ ಅರ್ಹತೆಗಳನ್ನು ಪೂರೈಸಿದರೆ ಸಾಕು. ವಿದ್ಯುತ್ ಪೂರೈಕೆ ಕಂಪನಿಯು ಯಾವುದೇ ಪರವಾನಗಿ ಪಡೆಯುವ ಅವಶ್ಯಕತೆ ಇಲ್ಲ. ಆಯೋಗದಲ್ಲಿ ಕಂಪನಿಯನ್ನು ನೋಂದಣಿ ಮಾಡಿಸಿದರೆ ಸಾಕು, ವಿತರಣೆ ಸೇವೆ ಆರಂಭಿಸಬಹುದು
- ಒಂದೇ ಸೇವಾ ಕ್ಷೇತ್ರ/ಪ್ರದೇಶದಲ್ಲಿ ಹಲವು ಕಂಪನಿಗಳು ತಮ್ಮ ಸೇವೆಯನ್ನು ನೀಡಬಹುದು. ಆ ಪ್ರದೇಶದಲ್ಲಿರುವ ಎಲ್ಲಾ ಗ್ರಾಹಕರು ಮತ್ತು ಎಲ್ಲಾ ಸ್ವರೂಪದ ಗ್ರಾಹಕರಿಗೆ ಸೇವೆ ಒದಗಿಸಬೇಕು ಎಂಬ ಷರತ್ತು ಇಲ್ಲ. ಕಂಪನಿಗಳು ತಮ್ಮ ಗ್ರಾಹಕರನ್ನು ಆಯ್ಕೆ ಮಾಡಿಕೊಳ್ಳಬಹುದು. ಒಂದು ಸೇವಾ ಕ್ಷೇತ್ರದಲ್ಲಿ ಪ್ರತಿ ಯುನಿಟ್‌ಗೆ ವಿಧಿಸಬಹುದಾದ ಗರಿಷ್ಠ ದರವನ್ನು ಸಂಬಂಧಿತ ವಿದ್ಯುಚ್ಛಕ್ತಿ ಆಯೋಗವು ನಿಗದಿ ಮಾಡಲಿದೆ
- ಒಂದು ಕ್ಷೇತ್ರ/ಪ್ರದೇಶದಲ್ಲಿ ಈಗಾಗಲೇ ಅಳವಡಿಸಲಾಗಿರುವ ವಿತರಣಾ ಜಾಲವನ್ನು ಕಂಪನಿಗಳು ಬಳಸಿಕೊಳ್ಳಬಹುದು. ತಮ್ಮದೇ ಪ್ರತ್ಯೇಕ ವಿತರಣಾ ಜಾಲವನ್ನು ಅಳವಡಿಸಿಕೊಳ್ಳಲೂ ಅವಕಾಶವಿದೆ. ಈಗಾಗಲೇ ಸೇವೆ ನೀಡುತ್ತಿರುವ ಕಂಪನಿಗಳು, ಬೇರೆ ಕಂಪನಿಗಳಿಗೆ ತಮ್ಮ ವಿತರಣಾ ಜಾಲವನ್ನು ಬಳಸಿಕೊಳ್ಳಲು ಅಡ್ಡಿಪಡಿಸಬಾರದು
- ರಾಷ್ಟ್ರೀಯ ಲೋಡ್ ರವಾನೆ ಕೇಂದ್ರಕ್ಕೆ (ಎನ್‌ಎಲ್‌ಡಿಸಿ) ಹೆಚ್ಚಿನ ಅಧಿಕಾರ ನೀಡಲಾಗಿದೆ. ಖರೀದಿ ಒಪ್ಪಂದಗಳ ಪ್ರಕಾರ ರಾಜ್ಯಗಳ ಮಧ್ಯೆ ವಿದ್ಯುತ್ ಹಂಚಿಕೆಯ ಮೇಲ್ವಿಚಾರಣೆಯನ್ನು ಎನ್‌ಎಲ್‌ಡಿಸಿ ನೋಡಿಕೊಳ್ಳಲಿದೆ. ರಾಷ್ಟ್ರೀಯ ಭದ್ರತೆ ಸಲುವಾಗಿ ವಿದ್ಯುತ್ ಹಂಚಿಕೆ ಮತ್ತು ಪೂರೈಕೆ ಜಾಲದ ಮೇಲ್ವಿಚಾರಣೆಯನ್ನು ಎನ್‌ಎಲ್‌ಡಿಸಿಗೆ ವಹಿಸಲಾಗಿದೆ. ಗ್ರಿಡ್ ನಿರ್ವಹಣೆ, ವಿದ್ಯುತ್ ಹಂಚಿಕೆ ಸಂಬಂಧ ಎನ್‌ಎಲ್‌ಡಿಸಿಯು ಕಾಲಕಾಲಕ್ಕೆ ಪ್ರಾದೇಶಿಕ ಲೋಡ್ ರವಾನೆ ಕೇಂದ್ರಗಳು ಮತ್ತು ರಾಜ್ಯ ಲೋಡ್ ರವಾನೆ ಕೇಂದ್ರಗಳಿಗೆ ನಿರ್ದೇಶನ ನೀಡಲಿದೆ
- ಜಾಗತಿಕ ಮಟ್ಟದಲ್ಲಿ ವಿದ್ಯುತ್ ಖರೀದಿ, ಉತ್ಪಾದನೆ ಮತ್ತು ವಿತರಣೆಗೆ ಅವಕಾಶ ನೀಡಲಾಗಿದೆ. ಖಾಸಗಿ ಕಂಪನಿಗಳೂ ಇದರಲ್ಲಿ ಭಾಗಿಯಾಗಬಹುದು. ಬೇರೆ ದೇಶಗಳಿಂದ ವಿದ್ಯುತ್ ಖರೀದಿಸಿ, ಅದನ್ನು ದೇಶದಲ್ಲಿ ವಿತರಣೆ ಮಾಡಬಹುದು. ಬೇರೊಂದು ದೇಶದಿಂದ ವಿದ್ಯುತ್ ಖರೀದಿಸಿ, ಭಾರತದ ಗ್ರಿಡ್ ಬಳಸಿಕೊಂಡು ಇನ್ನೊಂದು ದೇಶಕ್ಕೆ ವಿದ್ಯುತ್ ರವಾನೆ ಮಾಡಬಹುದು.

ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆಯಲ್ಲಿ ಸಾಕಷ್ಟು ಬದಲಾವಣೆ ತರಲು ಮುಂದಾಗಿರುವ ಕೇಂದ್ರ ಸರ್ಕಾರವು, ಅದಕ್ಕಾಗಿ ವಿದ್ಯುಚ್ಛಕ್ತಿ(ತಿದ್ದುಪಡಿ) ಮಸೂದೆ-2021 ಅನ್ನು ಸಂಸತ್ತಿನಲ್ಲಿ ಮಂಡಿಸಲು ಸಿದ್ಧತೆ ನಡೆಸಿದೆ. ಈ ಹಿಂದೆಯೂ ಇದೇ ಮಸೂದೆಯನ್ನು ಸಂಸತ್ತಿನಲ್ಲಿ ಸರ್ಕಾರವು ಮಂಡಿಸಿತ್ತು. ಆದರೆ ಮಸೂದೆ ಅಂಗೀಕಾರವಾಗಿರಲಿಲ್ಲ. ಹೀಗಾಗಿ ಈಗ ಮತ್ತೆ ಮಂಡನೆಗೆ ಸಿದ್ಧತೆ ನಡೆಸಿದೆ.

'ಈ ತಿದ್ದುಪಡಿ ಮಸೂದೆಯು ದೇಶದ ವಿದ್ಯುತ್ ವಿತರಣೆ ಜಾಲದಲ್ಲಿ ಆಮೂಲಾಗ್ರ ಬದಲಾವಣೆ ತರಲಿದೆ. ಗ್ರಾಹಕರಿಗೆ ಇದರಿಂದ ಲಾಭವಾಗಲಿದೆ. ಖಾಸಗಿ ಕಂಪನಿಗಳು ಈ ಕ್ಷೇತ್ರಕ್ಕೆ ಕಾಲಿಡಲು ಅವಕಾಶ ದೊರೆಯುವುದರಿಂದ ವಿದ್ಯುತ್ ವಿತರಣೆಯಲ್ಲಿ ಸ್ಪರ್ಧಾತ್ಮಕತೆ ಹೆಚ್ಚಲಿದೆ' ಎಂದು ಸರ್ಕಾರವು ಈ ಮಸೂದೆಯನ್ನು ಸಮರ್ಥಿಸಿಕೊಂಡಿದೆ.

ಆದರೆ, ಇದು ಖಾಸಗಿ ಕಂಪನಿಗಳ ಏಕಸ್ವಾಮ್ಯಕ್ಕೆ ದಾರಿಮಾಡಿಕೊಡಲಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು ನಷ್ಟ ಅನುಭವಿಸಬೇಕಾಗುತ್ತದೆ. ಕೃಷಿ, ಉಚಿತ ವಿದ್ಯುತ್ ಯೋಜನೆಯ ಫಲಾನುಭವಿಗಳು ತಮಗೆ ದೊರೆಯುತ್ತಿರುವ ಸಹಾಯಧನವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಆಕ್ಷೇಪ ದೇಶದಾದ್ಯಂತ ವ್ಯಕ್ತವಾಗಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳ ನೌಕರರು ಈ ಮಸೂದೆ ವಿರುದ್ಧ ಈಗಾಗಲೇ ಹಲವು ಬಾರಿ ಪ್ರತಿಭಟನೆ ನಡೆಸಿದ್ದಾರೆ. ಈ ಮಸೂದೆಯ ವಿರುದ್ಧ ದೇಶದ ಹಲವೆಡೆ ರೈತರೂ ಪ್ರತಿಭಟನೆ ನಡೆಸಿದ್ದಾರೆ.

ಆಕ್ಷೇಪಗಳು

- ವಿದ್ಯುತ್ ಕ್ಷೇತ್ರವು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ಈ ವಿಚಾರದಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳ ಜತೆ ಚರ್ಚಿಸಿ ಸಮ್ಮತಿ ಪಡೆಯಬೇಕು. ಆದರೆ ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ ಸಿದ್ಧಪಡಿಸುವಲ್ಲಿ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಏಕಪಕ್ಷೀಯವಾಗಿ ಈ ಮಸೂದೆಯನ್ನು ಸಿದ್ಧಪಡಿಸಿದೆ
- ಕೇಂದ್ರ ಸರ್ಕಾರವು ಈಗ ಮಂಡಿಸಲು ಮುಂದಾಗಿರುವ ಮಸೂದೆಯಲ್ಲಿ ರಾಷ್ಟ್ರೀಯ ಲೋಡ್ ರವಾನೆ ಕೇಂದ್ರಕ್ಕೆ (ಎನ್‌ಎಲ್‌ಡಿಸಿ) ಹೆಚ್ಚಿನ ಅಧಿಕಾರ ಕೊಡಲಾಗಿದೆ. ಪ್ರಮುಖ ನಿರ್ದೇಶನಗಳನ್ನು ಎನ್‌ಎಲ್‌ಡಿಸಿಯು ಪ್ರಾದೇಶಿಕ ಲೋಡ್ ರವಾನೆ ಕೇಂದ್ರಗಳ ಮೂಲಕ ಜಾರಿಗೆ ತರುತ್ತದೆ. ರಾಜ್ಯ ಲೋಡ್ ರವಾನೆ ಕೇಂದ್ರಗಳ ಅಧಿಕಾರವನ್ನು ಮೊಟಕು ಮಾಡಲಾಗಿದೆ. ಈ ಮೂಲಕ ರಾಜ್ಯ ಸರ್ಕಾರಗಳ ಅಧಿಕಾರವನ್ನು ಕಸಿದುಕೊಳ್ಳಲಾಗಿದೆ
- ವಿವಿಧ ಯೋಜನೆಗಳ ಬಳಕೆದಾರರು ಮತ್ತು ಫಲಾನುಭವಿಗಳಿಗೆ ಈಗ ನೀಡಲಾಗುತ್ತಿರುವ ಸಹಾಯಧನ ಮತ್ತು ಉಚಿತ ವಿದ್ಯುತ್ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲ
- ಒಂದು ಸೇವಾ ಕ್ಷೇತ್ರದಲ್ಲಿರುವ ಎಲ್ಲಾ ಗ್ರಾಹಕರಿಗೂ ವಿದ್ಯುತ್ ಪೂರೈಸಬೇಕು ಎಂಬ ಷರತ್ತನ್ನು ತೆಗೆದುಹಾಕಲಾಗಿದೆ. ಖಾಸಗಿ ಕಂಪನಿಗಳು ಕೈಗಾರಿಕೆ ಮತ್ತು ವಾಣಿಜ್ಯ ಬಳಕೆದಾರರಿಗೆ ಮಾತ್ರವೇ ವಿದ್ಯುತ್ ಪೂರೈಸುವ ಸಾಧ್ಯತೆ ಇದ್ದು, ಮನೆ ಬಳಕೆ ಮತ್ತು ಉಚಿತ ವಿದ್ಯುತ್ ಯೋಜನೆಯ ಫಲಾನುಭವಿಗಳನ್ನು ಕಡೆಗಣಿಸುವ ಸಾಧ್ಯತೆ ಇದೆ. ಕೈಗಾರಿಕೆ ಮತ್ತು ವಾಣಿಜ್ಯ ಗ್ರಾಹಕರು ಇಲ್ಲದೆ, ಸೇವೆ ಮುಂದುವರಿಸುವುದು ಸರ್ಕಾರಿ ಸ್ವಾಮ್ಯದ ಕಂಪನಿಗಳಿಗೆ ಹೊರೆಯಾಗಲಿದೆ
- ಸರ್ಕಾರಿ ಸ್ವಾಮ್ಯದ ಕಂಪನಿಗಳ ವಿತರಣಾ ಜಾಲವನ್ನು ಖಾಸಗಿ ಕಂಪನಿಗಳ ಬಳಕೆಗೆ ಕಡ್ಡಾಯವಾಗಿ ಬಿಟ್ಟುಕೊಡಬೇಕು ಎಂದು ಮಸೂದೆಯಲ್ಲಿ ಹೇಳಲಾಗಿದೆ. ಆದರೆ, ವಿತರಣಾ ಜಾಲದ ಬಳಕೆಗೆ ಶುಲ್ಕ, ನಿರ್ವಹಣಾ ಶುಲ್ಕವನ್ನು ನಿಗದಿ ಮಾಡಿಲ್ಲ. ಖಾಸಗಿ ಕಂಪನಿಗಳು ಈ ಶುಲ್ಕವನ್ನು ಪಾವತಿಸಬೇಕು ಎಂಬುದನ್ನೂ ಮಸೂದೆಯಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಸರ್ಕಾರಿ ಸ್ವಾಮ್ಯದ ಕಂಪನಿಗಳು ವಿತರಣಾ ಜಾಲ ಅಳವಡಿಕೆಗೆ ಹೂಡಿರುವ ಬಂಡವಾಳದ ಮೇಲೆ ಆದಾಯ ಪಡೆಯಲು ಅವಕಾಶವಿಲ್ಲ. ಅಲ್ಲದೆ ನಿರ್ವಹಣಾ ವೆಚ್ಚದ ಹೊರೆಯೂ ಹೆಚ್ಚಲಿದೆ
- ವಿತರಣಾ ಜಾಲದ ಅಳವಡಿಕೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಗೆ ಖಾಸಗಿ ಕಂಪನಿಗಳನ್ನೂ ಹೊಣೆಯಾಗಿಸುವ ಯಾವುದೇ ಸ್ಪಷ್ಟ ನಿಯಮಗಳು ಇಲ್ಲದೇ ಇರುವ ಕಾರಣ, ಇದು ಖಾಸಗಿ ಕಂಪನಿಗಳಿಗೆ ಹೆಚ್ಚು ಅನುಕೂಲವನ್ನು ಮಾಡಿಕೊಡುತ್ತದೆ

ರಾಷ್ಟ್ರವ್ಯಾಪಿ ಮುಷ್ಕರ ಮುಂದೂಡಿಕೆ

ಕೇಂದ್ರದ ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ ಖಂಡಿಸಿ, ಸರ್ಕಾರಿ ಸ್ವಾಮ್ಯದ ವಿದ್ಯುತ್ ಪೂರೈಕೆ ಕಂಪನಿಗಳ ನೌಕರರು ಸಂಘಟನೆ ಮಂಗಳವಾರ ಕರೆನೀಡಿದ್ದ ಒಂದು ದಿನದ ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ಮುಂದೂಡಲಾಗಿದೆ.

ಕೇಂದ್ರ ಇಂಧನ ಸಚಿವ ಆರ್.ಕೆ. ಸಿಂಗ್ ಅವರು ನೀಡಿದ ಅಧಿಕೃತ ಹೇಳಿಕೆ ಆಧರಿಸಿ, ನೌಕರರು ಮತ್ತು ಎಂಜಿನಿಯರ್‌ಗಳ ರಾಷ್ಟ್ರೀಯ ಮಟ್ಟದ ಸಮನ್ವಯ ಸಮಿತಿಯು (ಎನ್‌ಸಿಸಿಒಇಇಇ) ಮುಷ್ಕರ ಮುಂದೂಡುವ ನಿರ್ಧಾರ ತೆಗೆದುಕೊಂಡಿದೆ.

ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ–2021 ಅನ್ನು ಸಂಸತ್ತಿನಲ್ಲಿ ಮಂಡಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟವು ಇನ್ನೂ ಅನುಮೋದನೆ ನೀಡಿಲ್ಲ ಎಂದು ಸಚಿವ ಸಿಂಗ್ ತಿಳಿಸಿದ್ದಾರೆ. ‘ಒಂದು ವೇಳೆ ಇದೇ ಅಧಿವೇಶನದಲ್ಲಿ ಸರ್ಕಾರವು ಮಸೂದೆ ಮಂಡನೆಗೆ ಮುಂದಾದರೆ, ಅದೇ ದಿನ ನೌಕರರು ಬೃಹತ್ ಪ್ರತಿಭಟನೆಗೆ ಇಳಿಯಲಿದ್ದಾರೆ’ ಎಂದು ಸಂಘಟನೆ ಎಚ್ಚರಿಕೆ ನೀಡಿದೆ. ಈ ಅಸಾಂವಿಧಾನಿಕ ಮಸೂದೆಯನ್ನು ಮಂಡಿಸುವ ಸರ್ಕಾರದ ಮುಂದಿನ ಪ್ರಯತ್ನದವರೆಗೆ ಮುಷ್ಕರ ಮುಂದೂಡಲಾಗಿದೆ. ಈ ಬಗ್ಗೆ ಇಂಧನ ಸಚಿವಾಲಯಕ್ಕೆ ಮಾಹಿತಿ ನೀಡಲಾಗಿದೆ ಎಂದು ಅಖಿಲ ಭಾರತ ವಿದ್ಯುಚ್ಛಕ್ತಿ ಎಂಜಿನಿಯರ್‌ಗಳ ಒಕ್ಕೂಟದ (ಎಐಪಿಇಎಫ್) ಅಧ್ಯಕ್ಷ ಶೈಲೇಂದ್ರ ದುಬೆ ತಿಳಿಸಿದ್ದಾರೆ.

ಪ್ರತಿಭಟನೆ ಕೈಬಿಟ್ಟ ವಿದ್ಯುತ್ ನೌಕರರು

ಬೆಂಗಳೂರು: ‘ವಿದ್ಯುಚ್ಛಕ್ತಿ ಕಾಯ್ದೆ (ತಿದ್ದುಪಡಿ) ಮಸೂದೆ-2021 ವಿರೋಧಿಸಿ ಆ.10ರಂದು ಹಮ್ಮಿಕೊಂಡಿದ್ದ ವಿದ್ಯುತ್ ನೌಕರರು ಹಾಗೂ ಅಧಿಕಾರಿಗಳಿಂದ ಕರ್ತವ್ಯ ಬಹಿಷ್ಕಾರ ಪ್ರತಿಭಟನೆ ತಾತ್ಕಾಲಿಕವಾಗಿ ಮುಂದೂಡಲಾಗಿದೆ’ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ನೌಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಟಿ.ಆರ್. ರಾಮಕೃಷ್ಣಯ್ಯ ತಿಳಿಸಿದರು.

‘ಸಂಸತ್‌ನಲ್ಲಿ ಮಸೂದೆ ಮಂಡನೆಯಾಗುವ ಸೂಚನೆ ಇದ್ದಿದ್ದರಿಂದ ಪ್ರತಿಭಟಿಸಲು ತೀರ್ಮಾನಿಸಿದ್ದೆವು. ಆದರೆ, ಸದ್ಯ ಮಸೂದೆ ಮಂಡನೆ ಆಗುವುದಿಲ್ಲ ಎಂಬ ಮಾಹಿತಿ ಇದೆ. ರಾಜ್ಯ ಮತ್ತು ಕೇಂದ್ರ ಸಚಿವರೂ ಸ್ಪಷ್ಟಪಡಿಸಿದ್ದಾರೆ’ ಎಂದರು.

ನಿರ್ಣಯ ಅಂಗೀಕರಿಸಿದ ಕೇರಳ

ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯನ್ನು ಕೇರಳ ಸರ್ಕಾರ ತೀವ್ರವಾಗಿ ವಿರೋಧಿಸಿದೆ. ಕೇಂದ್ರ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ.

ವಿದ್ಯುತ್ ಸಚಿವ ಕೆ. ಕೃಷ್ಣನ್ ಕುಟ್ಟಿ ಮಂಡಿಸಿದ ನಿರ್ಣಯಕ್ಕೆ ಆಡಳಿತಾರೂಢ ಎಲ್‌ಡಿಎಫ್ ಮತ್ತು ಪ್ರತಿಪಕ್ಷ ಯುಡಿಎಫ್ ಸದಸ್ಯರು ಸರ್ವಾನುಮತದಿಂದ ಅನುಮೋದನೆ ನೀಡಿದರು. ಪ್ರಸ್ತಾಪಿತ ತಿದ್ದುಪಡಿಗಳು ರೈತರಿಗೆ ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಕೈಗೆಟುಕುವ ಬೆಲೆಯಲ್ಲಿ ವಿದ್ಯುತ್ ಸಿಗದಂತೆ ಮಾಡುತ್ತವೆ ಎಂದು ಸರ್ಕಾರ ಪ್ರತಿಪಾದಿಸಿದೆ.

ಪ್ರಧಾನಿಗೆ ಮಮತಾ ಪತ್ರ

ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯನ್ನು ಸದನದಲ್ಲಿ ಮಂಡಿಸಲು ಮುಂದಾಗಿದ್ದ ಕೇಂದ್ರದ ನಿರ್ಧಾರ ಪ್ರಶ್ನಿಸಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಕಳೆದ ವರ್ಷ ಮಂಡಿಸಲು ಉದ್ದೇಶಿಸಲಾಗಿದ್ದ ಮಸೂದೆಯನ್ನು ತೃಣಮೂಲ ಕಾಂಗ್ರೆಸ್ ಆಕ್ಷೇಪದ ಕಾರಣ ಅಂಗೀಕರಿಸಿರಲಿಲ್ಲ ಎಂದು ಅವರು ತಿಳಿಸಿದ್ದಾರೆ. 2020ರ ಜೂನ್ 12ರಂದು ತಾವು ಪ್ರಧಾನಿ ಅವರಿಗೆ ಬರೆದಿದ್ದ ಪತ್ರವನ್ನು ಮಮತಾ ನೆನಪಿಸಿದ್ದಾರೆ. ಮಸೂದೆಯು ಎಲ್ಲಾ ಪ್ರಮುಖ ಅಪಾಯಗಳನ್ನು ಹೊಂದಿದ್ದು, ಜನವಿರೋಧಿ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಭದ್ರತೆಯ ವಿಷಯದಲ್ಲಿ ಜೊತೆಗೂಡಲು ಸಿದ್ಧ’



ಪ್ರಜಾವಾಣಿ ಸಂದರ್ಶನ

ಅಲೆಕ್ಸಾಂಡರ್ ಎಲಿಸ್

ಬ್ರೆಕ್ಸಿಟ್ ನಂತರದಲ್ಲಿ ಭಾರತಕ್ಕೆ ಬ್ರಿಟನ್ನಿನಲ್ಲಿ ಅವಕಾಶಗಳು ಹೆಚ್ಚಲಿವೆ ಎಂದು ಹೇಳುತ್ತಾರೆ ಭಾರತದಲ್ಲಿ ಬ್ರಿಟನ್ನಿನ ಹೈಕಮಿಷನರ್ ಆಗಿರುವ ಅಲೆಕ್ಸಾಂಡರ್ ಎಲಿಸ್. ಈಚೆಗೆ ಬೆಂಗಳೂರಿಗೆ ಬಂದಿದ್ದ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ, ಚೀನಾದ ಜೊತೆಗಿನ ಸಂಬಂಧಗಳ ಬಗ್ಗೆಯೂ ಮಾತನಾಡಿದರು. ಅವರ ಜೊತೆಗಿನ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

ಪ್ರಶ್ನೆ: ಬ್ರೆಕ್ಸಿಟ್ ನಂತರದಲ್ಲಿ ಭಾರತ–ಬ್ರಿಟನ್ ಸಂಬಂಧ ಹೇಗಿರುತ್ತದೆ?

ಬ್ರೆಕ್ಸಿಟ್‌ನಿಂದಾಗಿ ಭಾರತ ಮತ್ತು ಬ್ರಿಟನ್‌ಗೆ ವಾಣಿಜ್ಯಿಕವಾಗಿ ಸಹಾಯ ಆಗಲಿದೆ. ನಾವು ಭಾರತವನ್ನು ಒಂದು ಅವಕಾಶ ಎಂದು ನೋಡುತ್ತೇವೆ. ಬ್ರೆಕ್ಸಿಟ್‌ನಿಂದಾಗಿ ಎರಡು ಸ್ಪಷ್ಟ ಪರಿಣಾಮಗಳು ಉಂಟಾಗಿವೆ. ಒಂದನೆಯದು, ಪ್ರತ್ಯೇಕ ವಲಸೆ ನೀತಿ; ಇನ್ನೊಂದು, ವಾಣಿಜ್ಯ ವಹಿವಾಟು ಹೆಚ್ಚಳ. ನಮ್ಮ ವಲಸೆ ನೀತಿಯು ಈಗ ಭಾರತದ ಪಾಲಿಗೆ ಹೆಚ್ಚು ಉತ್ತಮವಾಗಿದೆ. ಏಕೆಂದರೆ, ನಾವು ಈಗ ಬ್ರಿಟನ್ನಿಗೆ ವಲಸೆ ಬರಲು ಬಯಸುವವರನ್ನು ಅವರು ಯಾವ ದೇಶದಿಂದ ಬರುತ್ತಾರೆ ಎಂಬ ನೆಲೆಯಲ್ಲಿ ನೋಡುವುದಿಲ್ಲ. ಈಗ ನಾವು ವಲಸೆ ಬರಲು ಬಯಸುವವರ ಕೌಶಲ ಹಾಗೂ ಶೈಕ್ಷಣಿಕ ಅರ್ಹತೆಯನ್ನು ಮಾತ್ರ ಗಮನಿಸುತ್ತೇವೆ. ಇದು ಭಾರತದ ಪಾಲಿಗೆ ದೊಡ್ಡ ಪ್ರಯೋಜನ ತಂದುಕೊಡಲಿದೆ.

ಪ್ರಶ್ನೆ: 2030ರ ಸುಮಾರಿಗೆ ಭಾರತ–ಬ್ರಿಟನ್ ನಡುವೆ ಯಾವ ಬಗೆಯ ವಾಣಿಜ್ಯ ಸಂಬಂಧ ಇರಬೇಕು ಎಂದು ಬಯಸುತ್ತೀರಿ?

ದೀರ್ಘಕಾಲ ಬಾಳುವ, ಎಲ್ಲ ಆಯಾಮಗಳನ್ನು ಒಳಗೊಳ್ಳುವ ಸಂಬಂಧದಲ್ಲಿ ಕೆಲವು ಅಂಶಗಳು ಮುಖ್ಯವಾಗುತ್ತವೆ. ರಕ್ಷಣೆ, ಆರೋಗ್ಯ, ಸುಸ್ಥಿರ ಬೆಳವಣಿಗೆ ಮತ್ತು ಹವಾಮಾನ ಬದಲಾವಣೆ... ಇವು ಅಂತಹ ಕೆಲವು ಅಂಶಗಳು. ಜನ ಅತ್ತಿಂದಿತ್ತ ಹೋಗಿಬರುವುದು, ವಾಣಿಜ್ಯ ವಹಿವಾಟು, ಹೂಡಿಕೆ ಕೂಡ ಜಾಸ್ತಿ ಇರಬೇಕಾಗುತ್ತದೆ. ವಿದ್ಯುತ್ ಚಾಲಿತ ವಾಹನಗಳ ಕ್ಷೇತ್ರದಲ್ಲಿ ಬ್ರಿಟನ್ ಕಡೆಯಿಂದ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಆಗಲಿದೆ. 2030ರೊಳಗೆ ನಮ್ಮ ವಾಣಿಜ್ಯ ವಹಿವಾಟು, ಹೂಡಿಕೆಯನ್ನು ಎರಡು ಪಟ್ಟು ಹೆಚ್ಚಿಸುವ ಗುರಿ ಹೊಂದಿದ್ದೇವೆ.

ಪ್ರಶ್ನೆ: ಚೀನಾವನ್ನು ಎದುರಿಸುವ ಭಾಗವಾಗಿ ಬ್ರಿಟನ್, ಭಾರತದ ಜೊತೆ ಹೆಚ್ಚಿನ ಸಂಬಂಧ ಹೊಂದುತ್ತಿದೆಯೇ?

ಬ್ರೆಕ್ಸಿಟ್‌ಗೆ ಮೂರನೆಯ ಆಯಾಮವೊಂದು ಇದೆ. ಬ್ರಿಟನ್ ವಿಶ್ವದ ಕಡೆ ಹೆಚ್ಚೆಚ್ಚು ಗಮನ ನೀಡುತ್ತಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ನಡುವಿನ ಮಾತುಕತೆಯಲ್ಲಿ, ಮುಕ್ತ ವ್ಯಾಪಾರ ಒಪ್ಪಂದವೊಂದಕ್ಕೆ ಚಾಲನೆ ನೀಡುವ ಅಂಶವೂ ಇತ್ತು. ಅದನ್ನು ನಾವು ಶುರು ಮಾಡುತ್ತಿದ್ದೇವೆ. ಚೀನಾದ ಜೊತೆ ಕೆಲಸ ಮಾಡುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಎಲ್ಲ ದೇಶಗಳೂ ಹರಸಾಹಸ ಪಡುತ್ತಿವೆ ಎಂಬುದು ನನ್ನ ಭಾವನೆ.

ಪ್ರಶ್ನೆ: ಕಮ್ಯುನಿಸ್ಟ್ ಚೀನಾವನ್ನು ‘ಬೆದರಿಕೆ’ಯಾಗಿ ನೀವು ಪರಿಗಣಿಸುವಿರಾ?

ಚೀನಾದ ವಿಚಾರದಲ್ಲಿ ಉತ್ತರ ಸರಳವಾಗಿಲ್ಲ. ಚೀನಾ ಜೊತೆ ಸ್ಪರ್ಧೆಯಲ್ಲಿ, ಸಹಕಾರದಲ್ಲಿ ಇರಬೇಕಾದ ಸ್ಥಿತಿಯಿದೆ. ವಿರೋಧಿಸಬೇಕಾದ ವಿಷಯಗಳೂ ಇವೆ. ಶೀತಲ ಸಮರದ ಸಂದರ್ಭದ ಪರಿಸ್ಥಿತಿಗಿಂತ ಬಹಳ ಭಿನ್ನ ಸ್ಥಿತಿ ಇದು. ಈ ಮೂರು ಅಂಶಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಹೇಗೆ ಎಂಬ ಬಗ್ಗೆ ಪ್ರತಿ ದೇಶವೂ ಗಮನಿಸಬೇಕು. ಚೀನಾದ ವರ್ತನೆ ಕೂಡ ಇಲ್ಲಿ ಪ್ರಭಾವ ಬೀರುತ್ತದೆ.

ಪ್ರಶ್ನೆ: ಬ್ರಿಟನ್ನಿನ ಸಿಎಸ್‌ಜಿ (ಕ್ಯಾರಿಯರ್ ಸ್ಟ್ರೈಕ್ ಗ್ರೂಪ್) ಭಾರತದ ನೌಕಾಪಡೆ ಜೊತೆ ಸಮರಾಭ್ಯಾಸ ನಡೆಸಿದೆ. ಇದು ಶಕ್ತಿಪ್ರದರ್ಶನದ ಭಾಗವೇ?

ಭಾರತ ಮತ್ತು ಬ್ರಿಟನ್ನಿನ ಪ್ರಧಾನ ಮಂತ್ರಿಗಳು ಸಹಿ ಮಾಡಿದ ಒಪ್ಪಂದವೊಂದರ ಪ್ರಮುಖ ಅಂಶ ಸಾಗರ ವ್ಯವಹಾರಗಳಲ್ಲಿ ಸಹಕಾರ. ಅದರಲ್ಲೂ, ಹಿಂದೂ ಮಹಾಸಾಗರದ ಪಶ್ಚಿಮ ಭಾಗದಲ್ಲಿ ಸಹಕಾರ ಬಹಳ ಮುಖ್ಯ. ಸಿಎಸ್‌ಜಿಯನ್ನು ಅಲ್ಲಿಗೆ ಕಳುಹಿಸಿರುವುದು ಶೀತಲ ಸಮರದ ನಂತರದಲ್ಲಿ ನಾವು ಇರಿಸಿರುವ ಬಹುದೊಡ್ಡ ಹೆಜ್ಜೆ. ನಾವು ಭದ್ರತೆಯ ವಿಚಾರದಲ್ಲಿ ಭಾರತದ ಜೊತೆಗೂಡಿ ಕೆಲಸ ಮಾಡಲು ಸಿದ್ಧರಿದ್ದೇವೆ ಎಂಬುದನ್ನು ಹೇಳುವ ಬಗೆ ಇದು.

ಪ್ರಶ್ನೆ: ಕೋವಿಡ್ ಎರಡನೆಯ ಅಲೆಯ ಸಂದರ್ಭದಲ್ಲಿ ಬ್ರಿಟನ್ ಭಾರತಕ್ಕೆ ವೆಂಟಿಲೇಟರ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ರವಾನಿಸಿತು. ಏಕೆ?

ನಿಜವಾಗಿ ಹೇಳಬೇಕೆಂದರೆ, ಹಿಂದಿನ ವರ್ಷ ಭಾರತವು ನಮಗೆ ಪಿಪಿಇ ಕಿಟ್‌ಗಳನ್ನು, ಇತರ ಉಪಕರಣಗಳನ್ನು ಕಳುಹಿಸಿಕೊಟ್ಟಿತ್ತು. ಆ ನೆರವಿಗೆ ಪ್ರತಿಯಾಗಿ ನಾವೂ ನೆರವು ನೀಡಿದೆವು.

ಸಂದರ್ಶನ: ವಿಜಯ್ ಜೋಷಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಕೊರೊನಾ ವೈರಸ್ ಹಾವಳಿಯಿಂದ ಈ ಬಾರಿಯ ಶಾಲಾ ಕಾಲೇಜು ತರಗತಿ ಹಾಗೂ ಪರೀಕ್ಷೆಗಳು ಅಸ್ತವ್ಯಸ್ತಗೊಂಡಿವೆ. ಶೈಕ್ಷಣಿಕ ವರ್ಷ ಮುಗಿದ ಕಾರಣ, ಕೆಲವು ರಾಜ್ಯಗಳಲ್ಲಿ 10ನೇ ಹಾಗೂ 12ನೇ ತರಗತಿ ವಿದ್ಯಾರ್ಥಿಗಳಿಗೆ ಸರ್ಕಾರ ಬಡ್ತಿ ನೀಡಿ ಮುಂದಿನ ತರಗತಿಗಳಿಗೆ ಕಳುಹಿಸಿದೆ . ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟರ್ ವಿದ್ಯಾರ್ಥಿಗಳ ಆತಂಕ ಹೆಚ್ಚಿಸಿದೆ. ‘ಈ ವರ್ಷ 10 ಮತ್ತು 12ನೇ ವರ್ಗಕ್ಕೆ ಬಡ್ತಿ ಪಡೆದ ವಿದ್ಯಾರ್ಥಿಗಳ ಅಂಕಪಟ್ಟಿಗಳು ಸರ್ಕಾರಿ ಉದ್ಯೋಗಗಳಲ್ಲಿ ಮಾನ್ಯತೆ ಪಡೆದಿರುವುದಿಲ್ಲ’ ಎಂದು ಉಲ್ಲೇಖಿಸಲಾಗಿದೆ.



ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಈ ಪೋಸ್ಟರ್ ಅನ್ನು ಪಿಐಬಿ ಫ್ಯಾಕ್ಟ್ ಚೆಕ್ ತಂಡ ಪರಿಶೀಲಿಸಿದ್ದು, ಇದು ನಕಲಿ ಎಂದು ತಿಳಿಸಿದೆ. ಬಡ್ತಿ ಪಡೆದ ವಿದ್ಯಾರ್ಥಿಗಳ ಅಂಕಪಟ್ಟಿಗಳಿಗೆ ಮಾನ್ಯತೆ ಇರುವುದಿಲ್ಲ ಎಂಬುದಾಗಿ ಸರ್ಕಾರ ಎಲ್ಲಿಯೂ ಘೋಷಿಸಿಲ್ಲ. ಇಂತಹ ದಾರಿ ತಪ್ಪಿಸುವ ನಕಲಿ ಸಂದೇಶಗಳ ಬಗ್ಗೆ ಎಚ್ಚರಿಕೆಯಿಂದ ಇರಿ ಎಂದು ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಮಕ್ಕಳ ಕಷ್ಟಪರಂಪರೆ

ಬೋಧಿಸತ್ವ ಎರಡು ವಿರುದ್ಧ ಚಿಂತನೆಗಳ ನಡುವೆ ಹೊಯ್ದಾಡಿ ಹಣ್ಣಾದ. ತನ್ನ ಪುಟ್ಟ ಮಕ್ಕಳು ಮುದುಕನ ಕ್ರೂರತೆಗೆ ಸಿಕ್ಕು ಕಷ್ಟಪಡುವುದು ಅತ್ಯಂತ ಅನುಚಿತವಾದದ್ದು ಮತ್ತು ದುಃಖಕರವಾದದ್ದು. ಆದರೆ ಸತ್ಪುರುಷರ ಧರ್ಮದಂತೆ, ದಾನನೀಡಿ ನಂತರ ಅದನ್ನು ಹಿಂದೆ ಪಡೆಯುವುದೂ ಅಧರ್ಮ.

ಬೋಧಿಸತ್ವ ತನ್ನ ಪರಂಪರೆಯನ್ನು ನೆನೆದ. ಹಿಂದೆ ಎಲ್ಲ ಮಹಾನುಭಾವರು ಧನತ್ಯಾಗ, ಅಂಗತ್ಯಾಗ, ಸಂತಾನತ್ಯಾಗ, ಭಾರ್ಯತ್ಯಾಗಗಳನ್ನು ಮಾಡಿದವರು. ಈ ಐದೂ ತ್ಯಾಗಗಳನ್ನು ಮಾಡದೆ ಬುದ್ಧರಾದವರು ಒಬ್ಬರೂ ಇಲ್ಲ. ಅವರಲ್ಲಿ ನಾನೂ ಒಬ್ಬ. ಮಕ್ಕಳನ್ನು ತ್ಯಾಗ ಮಾಡದೆ ನಾನು ಬುದ್ಧನಾಗಲಾರೆ. ಆದ್ದರಿಂದ ಬ್ರಾಹ್ಮಣನನ್ನು ಬೆನ್ನತ್ತಿ ಹೋಗಿ ಕೊಲ್ಲುವುದನ್ನು ಯೋಚಿಸುವುದೂ ಪಾಪ. ದಾನಕೊಟ್ಟಮೇಲೆ ಮಕ್ಕಳು ನನ್ನ ವಸ್ತುಗಳಲ್ಲ. ಮುದುಕ ಬ್ರಾಹ್ಮಣ ಏನಾದರೂ ಮಾಡಿಕೊಳ್ಳಲಿ. ಹೀಗೆ ಚಿಂತಿಸಿ, ನಿಶ್ಚಯಿಸಿಕೊಂಡು ಪರ್ಣಕುಟಿಯಿಂದ ಹೊರಗೆ ಬಂದು ಅದರ ದ್ವಾರದ ಪಕ್ಕದಲ್ಲಿದ್ದ ಕಲ್ಲುಬಂಡೆಯ ಮೇಲೆ ಕುಳಿತು ಧ್ಯಾನಮಗ್ನನಾದ. ಒಂದೆರಡು ಕ್ಷಣಗಳಲ್ಲಿ ಆತ ಅಲುಗಾಡದೆ ಸ್ಥಿರವಾಗಿ ಸ್ವರ್ಣಮೂರ್ತಿಯಂತೆ ಕಂಡ.

ಮುದುಕನ ಜೊತೆಗೆ ಹೊರಟ ಮಕ್ಕಳ ಪರಿಸ್ಥಿತಿ ಕಷ್ಟವಾಗಿತ್ತು. ಮುದುಕ ಮಾತು ಮಾತಿಗೆ ಮಕ್ಕಳನ್ನು ಹೊಡೆಯುತ್ತಿದ್ದ. ಕುಮಾರ ಆ ಹಿಂಸೆಯನ್ನು ತಾಳದೆ ಪ್ರಲಾಪ ಮಾಡಿದ. ‘ತಂಗೀ, ಹಿರಿಯರು ಸರಿಯಾಗಿಯೇ ಹೇಳಿದ್ದಾರೆ. ತಾಯಿಯನ್ನು ಕಳೆದುಕೊಂಡವರು ಬದುಕಿದ್ದರೂ ಒಂದೇ, ಸತ್ತರೂ ಒಂದೇ. ಬಾ ಕೃಷ್ಣಾಜಿನ, ನಾವಿಬ್ಬರೂ ಸತ್ತು ಹೋಗೋಣ. ಬದುಕುವುದರಲ್ಲಿ ಯಾವ ಅರ್ಥವೂ ಇಲ್ಲ. ನಮ್ಮ ತಂದೆ ನಮ್ಮನ್ನು ಈ ಧನಲೋಭಿ ಕ್ರೂರ ಬ್ರಾಹ್ಮಣನಿಗೆ ಕೊಟ್ಟುಬಿಟ್ಟಿದ್ದಾನೆ. ಆತ ನಮ್ಮನ್ನು ಹೊಡೆಯುವುದು ಮಾತ್ರವಲ್ಲ, ಮುಂದೆ ಯಾವ ಶಿಕ್ಷೆಗಳನ್ನು ಕೊಡುತ್ತಾನೋ ತಿಳಿದಿಲ್ಲ’ ಎಂದ. ಆಗ ತಂಗಿ ಕೃಷ್ಣಾಜಿನ, ‘ಅಣ್ಣಾ, ನಡೆದು, ನಡೆದು ಪಾದಗಳು ಬಿರುಕು ಬಿಟ್ಟಿವೆ. ಈ ಬ್ರಾಹ್ಮಣ ಬಹಳ ಶೀಘ್ರವಾಗಿ ನಡೆಸುತ್ತಾನೆ. ನಡೆಯಲಾಗದಿದ್ದರೆ ಹೊಡೆಯುತ್ತಾನೆ’ ಎಂದು ಬಿಕ್ಕಳಿಸಿದಳು.

ಮಕ್ಕಳ ಪರಿತಾಪವನ್ನು ಕಂಡು ಹಿಮವಂತವಾಸೀ ದೇವತೆಗಳ ಹೃದಯ ಕರಗಿತು. ಮಕ್ಕಳ ತಾಯಿ ಮಾದ್ರಿ ಮನೆಗೆ ಬಂದಾಗ, ತನ್ನ ಗಂಡ ಮಕ್ಕಳನ್ನು ಬ್ರಾಹ್ಮಣನಿಗೆ ದಾನವಾಗಿ ಕೊಟ್ಟ ಎಂಬುದನ್ನು ತಿಳಿದು, ಆಕೆ ತಕ್ಷಣ ಅವರನ್ನು ಹಿಂಬಾಲಿಸುತ್ತಾಳೆ ಮತ್ತು ದುಃಖಪಡುತ್ತಾಳೆ ಎಂಬುದನ್ನು ಯೋಚಿಸಿ, ಅವರು ಮೂರು ದೇವಪುತ್ರರನ್ನು ಕರೆದರು. ‘ನೀವು ಸಿಂಹ, ಹುಲಿ ಮತ್ತು ಚಿರತೆಯ ರೂಪಗಳನ್ನು ಧರಿಸಿ, ಸಂಜೆ ಮಾದ್ರಿ ಆಶ್ರಮಕ್ಕೆ ಹೋಗುವ ದಾರಿಯಲ್ಲಿದ್ದು, ಆಕೆ ಆಶ್ರಮಕ್ಕೆ ಹೋಗದಂತೆ ತಡೆಯಬೇಕು. ಸೂರ್ಯಾಸ್ತವಾಗುವವರೆಗೂ ಆಕೆ ಮುಂದುವರೆಯದಂತೆ ನೋಡಿಕೊಂಡು, ನಂತರ ಬೆಳದಿಂಗಳಿನಲ್ಲಿ ಆಶ್ರಮಕ್ಕೆ ಹೋಗಲು ಅವಕಾಶ ಮಾಡಿಕೊಡಿ. ಆದರೆ ಆಕೆಗೆ ಕಾಡಿನ ಯಾವ ಮೃಗಗಳಿಂದಲೂ ತೊಂದರೆಯಾಗದಂತೆ ಎಚ್ಚರ ವಹಿಸಬೇಕು’ ಎಂದು ಆಜ್ಞೆ ಮಾಡಿದರು.

ಮೂವರೂ ಉಗ್ರ ಪ್ರಾಣಿಗಳ ರೂಪಗಳನ್ನು ಧರಿಸಿಕೊಂಡು ಮಾದ್ರಿದೇವಿ ಬರುವ ದಾರಿಯಲ್ಲಿ ಕಾಯ್ದುಕುಳಿತರು. ❖

ದಿನ ಭವಿಷ್ಯ

ಮಂಗಳವಾರ ಆಗಸ್ಟ್ 10, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷ ದ್ವಿತೀಯ ಗಂ. 29-19 (ಸಾ. 5-58) ಮಂಗಳವಾರ ನಿತ್ಯ ನಕ್ಷತ್ರ ಮಖೆ ಗಂ. 11-16 (ಹ. 10-44) ಪರಿಘ ನಾಮ ಯೋಗ ಗಂ. 40-10 ಕೌಲವ ಕರಣ ಗಂ. 29-19 ವಿಷ ಗಂ. 31-9 ಅಮೃತ ಗಂ. 4-3 ಪುನರಮೃತ ಗಂ. 55-2 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-10 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 2, 6

ಮೇಷ: ಜಂಟಿ ವ್ಯವಹಾರಗಳಲ್ಲಿ ಗೊಂದಲ ಸಾಧ್ಯತೆ. ಉದ್ಯೋಗಸ್ಥರಿಗೆ ಅಧಿಕಾರಿಗಳಿಂದ ಕಿರಿಕಿರಿ. ಬಹುದಿನಗಳಿಂದ ಬರಬೇಕಾದ ಬಾಕಿ ಹಣ ವಸೂಲಾಗುವ ಸಾಧ್ಯತೆ. ವೈದ್ಯಕೀಯ ವೃತ್ತಿಯವರಿಗೆ ಉದ್ಯೋಗದಲ್ಲಿ ಎಚ್ಚರಿಕೆ.

ವೃಷಭ: ಉದ್ಯೋಗ ಮತ್ತು ವ್ಯವಹಾರಸ್ಥರಿಗೆ ಅಭಿವೃದ್ಧಿ. ದುಂದು ವೆಚ್ಚದಿಂದಾಗಿ ಆರ್ಥಿಕ ಹೊರೆ ಸಾಧ್ಯತೆ. ಖರೀದಿ ವ್ಯವಹಾರದಲ್ಲಿ ತೊಡಕುಂಟಾದೀತು. ಸಮಾಧಾನದಿಂದಾಗಿ ಸಂಸಾರದಲ್ಲಿ ಸಾಮರಸ್ಯ ಕಂಡುಕೊಳ್ಳಬಹುದು.

ಮಿಥುನ: ಸ್ವತಂತ್ರ ಉದ್ಯೋಗದಲ್ಲಿ ದಕ್ಷತೆಯಿಂದಾಗಿ ಯಶಸ್ಸು. ವ್ಯಾಪಾರ ಮತ್ತು ಕೌಟುಂಬಿಕ ವಿಷಯದಲ್ಲಿ ಬದಲಾವಣೆಯ ಗಾಳಿ ಬೀಸಲಿದೆ. ಹೆಣ್ಣುಮಕ್ಕಳಿಗೆ ವಿವಾಹ ನಿಶ್ಚಯವಾಗುವ ಸಾಧ್ಯತೆ.

ಕರ್ಕಾಟಕ: ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ ದೊರಕಲಿದೆ. ಹೆಚ್ಚಿನ ವ್ಯಾಸಂಗಕ್ಕಾಗಿ ಸ್ಥಳ ಬದಲಾವಣೆ ಸಾಧ್ಯತೆ. ವೃದ್ಧರಿಗೆ ಆರೋಗ್ಯದಲ್ಲಿ ತೀವ್ರತರದ ಬದಲಾವಣೆ. ಉದ್ಯೋಗಸ್ಥರಿಗೆ ವಿಶೇಷ ಆದಾಯದ ನಿರೀಕ್ಷೆ.

ಸಿಂಹ: ನೌಕರಿಯಲ್ಲಿರುವವರಿಗೆ ಉದ್ಯೋಗದಲ್ಲಿ ನಿರಾಸಕ್ತಿ. ಎಣ್ಣೆ ಮತ್ತು ಹತ್ತಿ ಮುಂತಾದ ವ್ಯಾಪಾರಸ್ಥರಿಗೆ ಹೇರಳ ಲಾಭ. ಔಷಧ ವಿತರಕರು, ಮಾರಾಟಗಾರರಿಗೆ ಬಿಡುವಿಲ್ಲದ ಕೆಲಸ. ನೇಕಾರರಿಗೆ ಉತ್ತಮ ಆದಾಯ.

ಕನ್ಯಾ: ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಅದೃಷ್ಟದ ಬಾಗಿಲು ತೆರೆಯಲಿದೆ. ಹೂಡಿಕೆ ವ್ಯವಹಾರಗಳಲ್ಲಿ ಆದಾಯ. ಸಾಮಾಜಿಕ ಹಾಗೂ ಧಾರ್ಮಿಕ ಸಂಸ್ಥೆಗಳಲ್ಲಿ ಸನ್ಮಾನಿತರಾಗುವ ಸಾಧ್ಯತೆ. ಮನೆಯಲ್ಲಿ ಸಂತಸದ ವಾತಾವರಣ ಮೂಡಿಬರಲಿದೆ.

ತುಲಾ: ಪ್ರೇಮಿಗಳ ಇಷ್ಟಾರ್ಥ ಸಿದ್ಧಿಯಾಗುವ ಲಕ್ಷಣಗಳು ಕಂಡುಬರುತ್ತಿದೆ. ಸಂಗಾತಿಯೊಂದಿಗೆ ಪ್ರವಾಸ ಕ್ಷೇತ್ರದರ್ಶನ. ಜನ ಸೇವೆಯಲ್ಲಿಯೇ ಜನಾರ್ದನ ಸೇವೆಯನ್ನು ಕಾಣುವಿರಿ. ದಾನ ಧರ್ಮಾದಿಗಳಿಂದ ಮಾನಸಿಕ ಶಾಂತಿ.

ವೃಶ್ಚಿಕ: ತೋಟದ ಬೆಳೆಗಾರರಿಗೆ ಹಾಗೂ ವಾಣಿಜ್ಯ ಬೆಳೆ ವ್ಯಾಪಾರಸ್ಥರಿಗೆ ವಿಶೇಷ ಲಾಭ. ಅರಣ್ಯ ರಕ್ಷಕರು, ಅರಣ್ಯಾಧಿಕಾರಿಗಳಿಗೆ ವಿಶೇಷ ಧನಾಗಮ ಸಾಧ್ಯತೆ. ಕ್ರೀಡಾಪಟುಗಳಿಗೆ ಹಂತ ಹಂತವಾಗಿ ಮೇಲೇರುವ ಅವಕಾಶ.

ಧನು: ಅಪೇಕ್ಷಿತರಿಗೆ ಸಂತಾನ ಭಾಗ್ಯ ಲಕ್ಷಣ. ಯಾವುದೇ ವಿಷಯದಲ್ಲಿ ಆತುರದ ನಡೆ ಸಲ್ಲ. ಆರೋಗ್ಯದ ಬಗ್ಗೆ ವೈದ್ಯರ ಸಲಹೆ ಪಡೆಯುವುದು ಉತ್ತಮ. ಮಕ್ಕಳ ಶ್ರೇಯಸ್ಸಿನಿಂದಾಗಿ ಮನಸ್ಸಿಗೆ ಸಂತೋಷ ಮೂಡಿಬರಲಿದೆ.

ಮಕರ: ಆಸ್ತಿ ಲಾಭವಾಗುವ ಸಾಧ್ಯತೆ. ಹೂಡಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿಬರಲಿದೆ. ವಿದ್ಯುತ್ ಗುತ್ತಿಗೆದಾರರಿಗೆ ಕೆಲಸಗಾರರಿಂದ ತೊಂದರೆ ಸಾಧ್ಯತೆ. ವೈದ್ಯಕೀಯ ಕ್ಷೇತ್ರದಲ್ಲಿ ದುಡಿಯುವವರಿಗೆ ಧನಲಾಭ ಸಾಧ್ಯತೆ.

ಕುಂಭ: ಲೇವಾದೇವಿ ವ್ಯವಹಾರದಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭದೊಂದಿಗೆ ಚಿನ್ನಾಭರಣಗಳು ಪ್ರಾಪ್ತವಾಗುವ ಸಾಧ್ಯತೆ. ಮನಸ್ಸಿನ ಸಂಕಲ್ಪಗಳು ಈಡೇರಲಿವೆ. ಕುಟುಂಬ ಸಮೇತ ಬಂಧುಗಳ ದರ್ಶನ.

ಮೀನ: ಅಧಿಕಾರಕ್ಕಾಗಿ ಹೋರಾಟ ನಡೆಸಬೇಕಾದೀತು. ರಾಜಕೀಯ ಮುಖಂಡರಿಗೆ ವಿರೋಧಿಗಳಿಂದ ತೀವ್ರತರದ ತೊಂದರೆ ಎದುರಾದೀತು. ಶೃಂಗಾರ ಸಾಮಗ್ರಿಗಳ ವ್ಯಾಪಾರಸ್ಥರಿಗೆ ವಿಶೇಷ ಲಾಭ.

ನಿಮ್ಮ ಜನ್ಮದಿನ 10-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ಉದ್ಯೋಗದ ನಿಮಿತ್ತ ಆಗಾಗ್ಗೆ ದೂರದ ಪ್ರಯಾಣ ಹಾಗೂ ವಾಸ್ತವ್ಯ ಮಾಡಬೇಕಾದೀತು. ಕೆಲಸ–ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುವುದರೊಂದಿಗೆ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಲಿದ್ದೀರಿ. ಕಾರ್ಯತತ್ಪರತೆಯಿಂದಾಗಿ ಸಂಸಾರದ ಕಡೆ ನಿರ್ಲಕ್ಷ ಮಾಡುವ ಸಾಧ್ಯತೆ ಕಂಡುಬರುತ್ತಿದೆ.

ಪದಬಂಧ 4684


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಟ್ಟೆ ನೇಯುವ ಸಾಧನ (3)
3.ಉತ್ತರದವರ ವೇತನ (3)
5.ಆಹ್ವಾನ ಅಥವಾ ಬಟ್ಟೆಯ ಅಂಚು (2)
6.ಗಂಡು ಕುರಿ ಇಲ್ಲಿದೆ (3)
7.ನೆನಪಲ್ಲೇ ಇರುವ ಕಾರಣ (2)
9.ಪದ್ಯದ ಒಂದು ಸಾಲು (2)
10.ಅಭಾವದಲ್ಲಿ ಬಂದಿರುವ ಅಕ್ಕನ ಗಂಡ (2)
11.ಕಡಲ ಹತ್ತಿರ ಪಡೆದ ಸಾಲ (2)
13.ಬಗ್ಗಡವಾದುದು ಇದು (3)
15.ಗೃಹ ಇಲ್ಲಿದೆ (2)
16.ದುರಸ್ತಿಯನ್ನು ಹೀಗೆನ್ನಿ (3)
17.ಮೋಕ್ಷ ಮಾಡಿಕೊಂಡಿರುವ ಕೆನ್ನೆ! (3)

ಮೇಲಿಂದ ಕೆಳಕ್ಕೆ

1.ಚಹಾದೊಡನೆ ಕಾಣುವ ಲಕ್ಷಣ! (3)
2.ಕರದಲ್ಲಿ ಹಿಡಿದ ಚಿಪ್ಪು (3)
3.ಇದು ಸುಗಂಧಯುಕ್ತ ಜಲ (3)
4.ಸಾಗಿಸುವುದನ್ನು ಹೀಗೆನ್ನಿ (3)
5.ಲಲಿತಕಲೆಗಳನ್ನು ಆರಾಧಿಸುವವನು (5)
8.ಈ ಪರಿ ಆಗಿರುವ ಮಾರ್ಪಾಟು! (5)
12.ಅನ್ನ ಮಾಡುವ ಪಾತ್ರೆ (3)
13.ಕತ್ತರಿಸುವ ಸಾಧನ (3)
14.ಹೆಂಡತಿ ಸೋದರಿಯ ಗಂಡ (3)
15.ಮರಳ ಹತ್ತಿರ ಹುಚ್ಚನಿದ್ದಾನೆ (3)



4683ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಾಹರಣೆ 3.ಹೊಸಲು
5.ಕರತಾಡನ 7.ಯಮ
9.ಒನಪು 11.ಹಸೆ
13.ರಕ್ತತಿಲಕ
15.ಹಂತಕ 16.ಅಡುಗೆಮನೆ

ಮೇಲಿಂದ ಕೆಳಕ್ಕೆ:
1.ಉತ್ತರೀಯ
2.ರಸಿಕ 4.ಸನ್ಮಾನ 6.ತಾರೀಪು
8.ಮಠ 9.ಒಡತಿ
10.ದ್ರೋಹ
12.ಸೆರೆಮನೆ 13.ರಕುತ
14.ಕನ್ನಡಿ

ಸುಡೊಕು 5070

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5069 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಲಿಂಗಾಯತರ ದೇಣಿಗೆಯಲ್ಲಿ ದರ್ಗಾ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ತಾಲ್ಲೂಕಿನ ಮೋಕಾ ಹೋಬಳಿಯ ಜಾಲಿಹಾಳು ಗ್ರಾಮದಲ್ಲಿ ಲಿಂಗಾಯತ ಸಮುದಾಯದ ದಾನಿಗಳೇ ನೀಡಿರುವ ₹30 ಲಕ್ಷ ದೇಣಿಗೆಯಿಂದ ಹೊನ್ನೂರಸ್ವಾಮಿ ದರ್ಗಾ ನಿರ್ಮಾಣವಾಗಿದ್ದು, ಹಿಂದೂ- ಮುಸ್ಲಿಮರ ಭಾವೈಕ್ಯದ ಸಂಕೇತವಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹೆಬ್ಬಾಳು ಬೃಹನ್ಮಠದ ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಸೋಮವಾರ ನೂತನ ದರ್ಗಾ ಉದ್ಘಾಟಿಸಿದರು. ಹಿಂದೂ- ಮುಸ್ಲಿಂ ಧರ್ಮೀಯರು ಜತೆಗೂಡಿ ಆಚರಿಸುವ ಮೊಹರಂ ಹಬ್ಬದ ವೇಳೆಯಲ್ಲೇ ದರ್ಗಾ ನಿರ್ಮಾಣವಾಗಿರುವುದು ವಿಶೇಷ.

‘ಹಿಂದೂ- ಮುಸ್ಲಿಮರ ಭಾವೈಕ್ಯದ ಪ್ರತಿಬಿಂಬವಾಗಿದೆ ಈ ದರ್ಗಾ ನಿರ್ಮಾಣ’ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು. ಜಾಲಿಹಾಳು ಗ್ರಾಮದ ಮುಖಂಡರಾದ ಮಲ್ಲಿಕಾರ್ಜುನ ಗೌಡ, ಶ್ರೀಧರಗೌಡ, ಪಂಪನಗೌಡ ಸೇರಿದಂತೆ ಹಲವರು ಹಾಜರಿದ್ದರು.



ದರ್ಗಾವನ್ನು ಹೆಬ್ಬಾಳು ಬೃಹನ್ಮಠದ ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು

ಡಾಲರ್ ಇಂಡಸ್ಟ್ರೀಸ್ ಆದಾಯ ಏರಿಕೆ

ಬೆಂಗಳೂರು: ಡಾಲರ್ ಇಂಡಸ್ಟ್ರೀಸ್ ಕಂಪನಿಯು ಜೂನ್ ತ್ರೈಮಾಸಿಕದ ತನ್ನ ಲೆಕ್ಕಪತ್ರವನ್ನು ಪ್ರಕಟಿಸಿದ್ದು, ಒಟ್ಟು ₹ 205.49 ಕೋಟಿ ಆದಾಯ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 159.62 ಕೋಟಿ ಆದಾಯ ಗಳಿಸಿತ್ತು ಎಂದು ಪ್ರಕಟಣೆ ತಿಳಿಸಿದೆ.

‘ಕೋವಿಡ್ ಸಂಬಂಧಿತ ನಿರ್ಬಂಧಗಳ ಕಾರಣದಿಂದಾಗಿ ಮಾರುಕಟ್ಟೆಯು ಇನ್ನಷ್ಟೇ ಚೇತರಿಕೆ ಕಾಣಬೇಕಿದೆ. ಹೀಗಿದ್ದರೂ ಮೊದಲ ತ್ರೈಮಾಸಿಕದಲ್ಲಿನ ಫಲಿತಾಂಶವು ನಮಗೆ ಪ್ರೋತ್ಸಾಹ ನೀಡುವಂತೆ ಇದೆ. ಈ ಫಲಿತಾಂಶವು ನಮ್ಮ ನಿರೀಕ್ಷೆಗಳಿಗೆ ಅನುಗುಣವಾಗಿ ಇದೆ’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಕುಮಾರ್ ಗುಪ್ತ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

9-8-2021

ಜಾವಾ 70/80(ಹೊಸ)	9950-10000
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	9550-9600
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1470)
ಒಂದು ವಾರದ ಡೆಲಿವರಿ	1455 (1465)
ಸೋಯಾ ಕಚ್ಚಾ	1330 (1355)
ಪಾಮ್ ವಾರದ ಡೆಲಿವರಿ	1248(1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,400 (46,800)
ಬೆಳ್ಳಿ ಕೆ.ಜಿ
64,200 (65,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆರ್‌ಬಿಐ ನೀತಿಗೆ ಷೇರುಪೇಟೆ ಪ್ರತಿಕ್ರಿಯಿಸುವುದು ಏಕೆ?

ಷೇರು ಮಾತು
ಶರತ್ ಎಂ.ಎಸ್.



ಷೇರುಗಳಲ್ಲಿ ಹಣ ತೊಡಗಿಸುವವರು ಮುಖ್ಯವಾಗಿ ಗಮನಿಸಬೇಕಾದ ಅಂಶಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿಯೂ ಒಂದು. ಆರ್‌ಬಿಐ ಹಣಕಾಸಿನ ಕುರಿತಾಗಿ ತೆಗೆದುಕೊಳ್ಳುವ ನಿರ್ಧಾರಗಳಿಂದಾಗಿ ಸಾಮಾನ್ಯವಾಗಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಅಥವಾ ಇಳಿಕೆ ಕಾಣುತ್ತವೆ. ಆರ್‌ಬಿಐ ತೆಗೆದುಕೊಳ್ಳುವ ತೀರ್ಮಾನಗಳಿಗೆ ಷೇರುಪೇಟೆ ಹೀಗೆ ವರ್ತಿಸುವುದು ಏಕೆ ಎನ್ನುವುದನ್ನು ತಿಳಿಯೋಣ ಬನ್ನಿ.

ಷೇರುಪೇಟೆ ಪ್ರಗತಿಗೂ, ಆರ್‌ಬಿಐ ನೀತಿಗೂ ಇದೆ ನಂಟು: ಆರ್‌ಬಿಐ ಪ್ರತಿ ಎರಡು ತಿಂಗಳಿಗೊಮ್ಮೆ ಬಡ್ಡಿ ದರಗಳನ್ನು ಪರಾಮರ್ಶಿಸುತ್ತದೆ. ಅರ್ಥ ವ್ಯವಸ್ಥೆಯಲ್ಲಿ ಹಣದ ಹರಿವು ಎಷ್ಟಿರಬೇಕು ಎನ್ನುವುದನ್ನು ಆಧರಿಸಿ ಆರ್‌ಬಿಐ ಬಡ್ಡಿ ದರಗಳನ್ನು ನಿಯಂತ್ರಿಸುತ್ತದೆ. ಹೀಗೆ ಬಡ್ಡಿ ದರ ನಿಯಂತ್ರಿಸುವಾಗ ಅರ್ಥವ್ಯವಸ್ಥೆಯ ಬೆಳವಣಿಗೆ ಮತ್ತು ಹಣದುಬ್ಬರದ (ಬೆಲೆ ಏರಿಕೆ) ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾಗುತ್ತದೆ.

ಬಡ್ಡಿ ದರ ಅತಿಯಾಗಿ ಹೆಚ್ಚಾದರೆ ನಗದು ಹರಿವು ಕಡಿಮೆಯಾಗಿ ಕಂಪನಿಗಳ ಆರ್ಥಿಕ ಪ್ರಗತಿ ಕುಂಠಿತವಾಗುತ್ತದೆ. ಬಡ್ಡಿ ದರ ತೀರಾ ಕಡಿಮೆಯಾದರೆ ನಗದು ಹರಿವು ಹೆಚ್ಚಾಗಿ ಹಣದುಬ್ಬರ ಹೆಚ್ಚಾಗುತ್ತದೆ. ಈ ಸಮಸ್ಯೆ ನಿಯಂತ್ರಿಸಲು ರೆಪೊ ದರ, ರಿವರ್ಸ್ ರೆಪೊ ದರ, ನಗದು ಮೀಸಲು ಅನುಪಾತದಂತಹ (ಸಿಆರ್‌ಆರ್) ಲೆಕ್ಕಾಚಾರಗಳನ್ನು ಆರ್‌ಬಿಐ ಬಳಸುತ್ತದೆ.

ರೆಪೊ, ಸಿಆರ್‌ಆರ್ ಮತ್ತು ಷೇರುಪೇಟೆ: ಬ್ಯಾಂಕ್‌ಗಳು ಆರ್‌ಬಿಐನಿಂದ ಪಡೆದುಕೊಳ್ಳುವ ಸಾಲಕ್ಕೆ ನಿಗದಿಮಾಡುವ ಬಡ್ಡಿ ದರವೇ ರೆಪೊ ದರ. ರೆಪೊ ದರ ಹೆಚ್ಚಳವನ್ನು ಷೇರು ಹೂಡಿಕೆದಾರರು ಸ್ವಾಗತಿಸುವುದಿಲ್ಲ. ಇನ್ನು, ಬ್ಯಾಂಕ್‌ಗಳಿಂದ ಆರ್‌ಬಿಐ ಪಡೆದುಕೊಳ್ಳುವ ಠೇವಣಿಗಳಿಗೆ ನಿಗದಿ ಮಾಡುವ ಬಡ್ಡಿ ದರಕ್ಕೆ ಹೆಸರು ರಿವರ್ಸ್ ರೆಪೊ. ರಿವರ್ಸ್ ರೆಪೊ ದರ ಹೆಚ್ಚಳವಾದರೆ ಬ್ಯಾಂಕ್‌ಗಳು ಕಾರ್ಪೊರೇಟ್ ಕಂಪನಿಗಳಿಗೆ ಸಾಲ ಕೊಡುವ ಬದಲು ಆರ್‌ಬಿಐನಲ್ಲಿಯೇ ಹಣ ಇರಿಸಬಹುದು! ಆಗ ಅರ್ಥ ವ್ಯವಸ್ಥೆಯಲ್ಲಿ ನಗದು ಲಭ್ಯತೆ ಕಡಿಮೆಯಾಗಿ ಸಮಸ್ಯೆಯಾಗುತ್ತದೆ. ಇದಲ್ಲದೆ ರಿಸರ್ವ್ ಬ್ಯಾಂಕ್ ಬಳಿ ಪ್ರತಿ ಬ್ಯಾಂಕ್ ಕೂಡ ಒಂದಿಷ್ಟು ನಿಧಿ ಇಡಬೇಕಾಗುತ್ತದೆ. ಅದೇ ನಗದು ಮೀಸಲು ಅನುಪಾತ (ಸಿಆರ್‌ಆರ್). ಈ ದರ ಹೆಚ್ಚಾದರೆ ಅರ್ಥ ವ್ಯವಸ್ಥೆಯಲ್ಲಿ ಹೆಚ್ಚು ಹಣದ ಹರಿವು ಇರುವುದಿಲ್ಲ. ಹಾಗಾಗಿ ಮೇಲಿನ ಎಲ್ಲ ವಿದ್ಯಮಾನಗಳನ್ನು ಷೇರುಪೇಟೆ ಹೂಡಿಕೆದಾರರು ಕುತೂಹಲದಿಂದ ಗಮನಿಸುತ್ತಿರುತ್ತಾರೆ.



ಆರ್‌ಬಿಐ ನೀತಿಗೆ ಪ್ರತಿಕ್ರಿಯಿಸುವ ವಲಯಗಳು: ಸಾಮಾನ್ಯವಾಗಿ ಆರ್‌ಬಿಐ ಹಣಕಾಸು ನೀತಿ ಪ್ರಕಟಿಸಿದ ಕೂಡಲೇ ರಿಯಲ್ ಎಸ್ಟೇಟ್, ಬ್ಯಾಂಕ್, ಗೃಹ ಸಾಲ ನೀಡುವ ಬ್ಯಾಂಕೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ), ವಾಹನ ತಯಾರಿಕೆ, ಲೋಹ ಉತ್ಪಾದನೆ, ಸಿಮೆಂಟ್ ಉತ್ಪಾದನೆ ಕಂಪನಿಗಳ ಷೇರುಗಳು ಸಕಾರಾತ್ಮಕವಾಗಿ ಅಥವಾ ನಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತವೆ.


ಈ ಕಾರಣಗಳಿಂದಾಗಿ ಷೇರು ಹೂಡಿಕೆ ಮಾಡುವಾಗ ನಿರ್ದಿಷ್ಟ ಕಂಪನಿ ಎಷ್ಟು ಉತ್ತಮವಾಗಿ ಬೆಳವಣಿಗೆ ಸಾಧಿಸುತ್ತಿದೆ ಎನ್ನುವುದರ ಜತೆಗೆ ಆರ್‌ಬಿಐ ತೆಗೆದುಕೊಳ್ಳುವ ಹಣಕಾಸಿನ ನಿರ್ಣಯಗಳನ್ನು ಗಮನಿಸುವುದು ಅತಿ ಮುಖ್ಯ.

ಎಲ್‌ಪಿಜಿ ಸಂಪರ್ಕಕ್ಕೆ ಮಿಸ್ಡ್ ಕಾಲ್

ಬೆಂಗಳೂರು: ಹೊಸ ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ಸಂಪರ್ಕ ಪಡೆಯಲು ಮಿಸ್ಡ್ ಕಾಲ್ ನೀಡುವ ಸೌಲಭ್ಯವನ್ನು ಇಂಡಿಯನ್ ಆಯಿಲ್ ಕಂಪನಿಯು ದೇಶದ ಎಲ್ಲೆಡೆ ವಿಸ್ತರಿಸಿದೆ.

84549 55555 ಸಂಖ್ಯೆಗೆ ಮಿಸ್ಡ್ ಕಾಲ್ ನೀಡುವ ಮೂಲಕ ಹೊಸ ಎಲ್‌ಪಿಜಿ ಸಂಪರ್ಕ ಪಡೆಯಬಹುದು ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಹೊಸ ಸೌಲಭ್ಯಕ್ಕೆ ಚಾಲನೆ ನೀಡಿದ ಇಂಡಿಯನ್ ಆಯಿಲ್ ಅಧ್ಯಕ್ಷ ಎಸ್.ಎಂ. ವೈದ್ಯ, ‘ಈ ಸೌಲಭ್ಯವು ಎಲ್‌ಪಿಜಿ ಸಿಲಿಂಡರ್‌ಅನ್ನು ಗ್ರಾಹಕರಿಗೆ ಸುಲಭವಾಗಿ ತಲುಪಿಸಲು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬ ವಿಶ್ವಾಸವಿದೆ’ ಎಂದಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,238
ಇಂದಿನ ಅಂತ್ಯ	16,258
▲	20
ದಿನದ ಗರಿಷ್ಠ	16,320

ವಿನಿಮಯ ದರ

$ ಡಾಲರ್	74.26
£ ಪೌಂಡ್	103.16
€ ಯುರೊ	87.36
¥ ಯೆನ್ (100ಕ್ಕೆ)	67.5

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1460)
ಸೋಯಾ (ರಿಫೈನ್ಡ್)	₹1385(1390)
ಸೂರ್ಯಕಾಂತಿ (ರಿಫೈನ್ಡ್)	₹1450 (1465)
ಪಾಮೋಲಿನ್	₹1250 (1255)

ಚಿನ್ನ, ಬೆಳ್ಳಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ಬೆಲೆಯು 10 ಗ್ರಾಂಗೆ ₹ 317ರಷ್ಟು ಇಳಿಕೆ ಕಂಡು, ₹ 45,391ರಂತೆ ಮಾರಾಟವಾಗಿದೆ.

ಬೆಳ್ಳಿಯ ಬೆಲೆಯು ಪ್ರತಿ ಕೆ.ಜಿ.ಗೆ ₹ 1,128ರಷ್ಟು ಇಳಿಕೆ ಆಗಿದೆ. ಕೆ.ಜಿ. ಬೆಳ್ಳಿಯು ₹ 62,572ರಂತೆ ಮಾರಾಟವಾಗಿದೆ.

ಠೇವಣಿದಾರರಿಗೆ ಪರಿಹಾರ ಮೊತ್ತ ಹೆಚ್ಚಿಸುವ ಮಸೂದೆಗೆ ಸಂಸತ್ ಅಸ್ತು

ನವದೆಹಲಿ (ಪಿಟಿಐ): ಬ್ಯಾಂಕ್‌ಗಳು ಆರ್‌ಬಿಐನಿಂದ ಹಣಕಾಸಿನ ನಿರ್ಬಂಧಕ್ಕೆ ಒಳಗಾದಲ್ಲಿ, ಆ ಬ್ಯಾಂಕ್‌ನ ಠೇವಣಿದಾರರಿಗೆ 90 ದಿನಗಳಲ್ಲಿ ₹ 5 ಲಕ್ಷದವರೆಗೆ ವಿಮಾ ಪರಿಹಾರ ಮೊತ್ತ ನೀಡಲು ಅವಕಾಶ ಕಲ್ಪಿಸುವ ‘ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮ (ತಿದ್ದುಪಡಿ) ಮಸೂದೆ’ಗೆ (ಡಿಐಸಿಜಿಸಿ ಮಸೂದೆ) ಲೋಕಸಭೆಯು ಸೋಮವಾರ ಅನುಮೋದನೆ ನೀಡಿದೆ.

ವಿರೋಧ ಪಕ್ಷಗಳ ಸದಸ್ಯರು ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಗದ್ದಲ ಎಬ್ಬಿಸಿದ್ದ ಸಂದರ್ಭದಲ್ಲಿ ಈ ಮಸೂದೆಯನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು. ಈ ಮಸೂದೆಯನ್ನು ರಾಜ್ಯಸಭೆಯು ಹಿಂದಿನ ವಾರ ಅನುಮೋದಿಸಿದೆ. ಪಿಎಂಸಿ ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದವರಿಗೆ ಇದರಿಂದ ಪ್ರಯೋಜನ ಆಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿರುವ, ಆರ್‌ಬಿಐನಿಂದ ನಿರ್ಬಂಧಗಳಿಗೆ ಗುರಿಯಾಗಿರುವ ಒಟ್ಟು 23 ಸಹಕಾರ ಬ್ಯಾಂಕ್‌ಗಳ ಠೇವಣಿದಾರರಿಗೂ ಇದರಿಂದ ಅನುಕೂಲ ಆಗಲಿದೆ ಎಂದು ನಿರ್ಮಲಾ ಅವರು ಸ್ಪಷ್ಟಪಡಿಸಿದರು. ಆರ್‌ಬಿಐನ ಅಂಗಸಂಸ್ಥೆ ಆಗಿರುವ ಡಿಐಸಿಜಿಸಿ ಬ್ಯಾಂಕ್ ಠೇವಣಿದಾರರಿಗೆ ವಿಮಾ ಸೌಲಭ್ಯವನ್ನು ನೀಡಲಿದೆ.

ಈಗಿರುವ ನಿಯಮಗಳ ಅನುಸಾರ, ಬ್ಯಾಂಕ್ ನಿರ್ಬಂಧಕ್ಕೆ ಒಳಗಾದ ನಂತರ ಠೇವಣಿದಾರರಿಗೆ ವಿಮಾ ಮೊತ್ತ ಸಿಗಲು 8–10 ವರ್ಷಗಳು ಬೇಕಾಗುವುದೂ ಇದೆ.

‘ಗುರುರಾಘವೇಂದ್ರ ಬ್ಯಾಂಕ್ ಗ್ರಾಹಕರಿಗೆ ಅನುಕೂಲ’

ತಿದ್ದುಪಡಿ ಮಸೂದೆಗೆ ಸಂಸತ್ತಿನ ಅನುಮೋದನೆ ದೊರೆತಿರುವ ಕಾರಣ, ಬೆಂಗಳೂರಿನ ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಹಣ ಠೇವಣಿ ಇರಿಸಿದ್ದವರಿಗೂ ₹ 5 ಲಕ್ಷದವರೆಗಿನ ವಿಮಾ ಪರಿಹಾರ ಮೊತ್ತದ ಪ್ರಯೋಜನ ಸಿಗಲಿದೆ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿಸೂರ್ಯ ಹೇಳಿದ್ದಾರೆ. ಈ ಬ್ಯಾಂಕ್‌ನ ಅಂದಾಜು 40 ಸಾವಿರ ಠೇವಣಿದಾರರಿಗೆ ಪ್ರಯೋಜನ ಆಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಐಎಲ್: ಸಾಲ ಬಾಕಿ ಮೊತ್ತಕ್ಕೆ ಪ್ರತಿಯಾಗಿ ಷೇರು

ನವದೆಹಲಿ (ಪಿಟಿಐ): ಸಾಲದ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಕಂಪನಿಯ ಸಾಲದ ಬಾಕಿ ಮೊತ್ತಕ್ಕೆ ಪ್ರತಿಯಾಗಿ, ಕಂಪನಿಯ ಷೇರುಗಳನ್ನು ಸಾಲದಾತರಿಗೆ ನೀಡುವುದು ಆ ಕಂಪನಿಯನ್ನು ಬಿಕ್ಕಟ್ಟಿನಿಂದ ಪಾರು ಮಾಡಲು ಇರುವ ಒಂದು ಮಾರ್ಗ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟವು ಕೇಂದ್ರ ದೂರಸಂಪರ್ಕ ಇಲಾಖೆಗೆ ಸಲಹೆ ನೀಡಿದೆ.

ಹೊಂದಾಣಿಕೆ ಮಾಡಿದ ಒಟ್ಟು ಆದಾಯದ (ಎಜಿಆರ್) ವಿಚಾರವಾಗಿ ಸುಪ್ರೀಂ ಕೋರ್ಟ್ ಈಚೆಗೆ ನೀಡಿದ ತೀರ್ಪಿನ ನಂತರ ದೂರಸಂಪರ್ಕ ವಲಯದಲ್ಲಿ ಉಂಟಾಗಿರುವ ಹಣಕಾಸಿನ ಸಂಕಷ್ಟದ ಬಗ್ಗೆ ಚರ್ಚಿಸಲು ಇಲಾಖೆಯು ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳ ಸಭೆ ಕರೆದಿತ್ತು.

ಸಾಲದ ಬಾಕಿ ಮೊತ್ತಕ್ಕೆ ಪ್ರತಿಯಾಗಿ ಷೇರುಗಳನ್ನು ನೀಡುವುದು ಒಂದು ಮಾರ್ಗವಾದರೂ ಅದು ಸುಸ್ಥಿರ ಅಲ್ಲ ಎಂಬ ಸಂಗತಿಯನ್ನು ಬ್ಯಾಂಕ್ ಪ್ರತಿನಿಧಿಗಳು ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅಲ್ಲದೆ, ವಿಐಎಲ್ ಕಂಪನಿಯು ಇದುವರೆಗೆ ಸಾಲ ಮರುಪಾವತಿಯನ್ನು ತಪ್ಪಿಸಿಲ್ಲ. ಹಾಗಾಗಿ, ಈಗಲೇ ಯಾವುದೇ ಕ್ರಮ ತೆಗೆದುಕೊಳ್ಳಲು ಆಗುವುದಿಲ್ಲ ಎಂದೂ ಬ್ಯಾಂಕ್ ಪ್ರತಿನಿಧಿಗಳು ಹೇಳಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ಕಂಪನಿಯ ಪ್ರವರ್ತಕರು ಹೆಚ್ಚಿನ ಬಂಡವಾಳವನ್ನು ಕಂಪನಿಯಲ್ಲಿ ಹೂಡಿಕೆ ಮಾಡುವುದೇ ಒಳ್ಳೆಯ ಆಯ್ಕೆ ಎಂದು ಕೂಡ ಬ್ಯಾಂಕ್ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಾಲದ ಮರುಪಾವತಿ ಆಗದಿದ್ದಲ್ಲಿ, ಖಾಸಗಿ ವಲಯದ ಬ್ಯಾಂಕ್‌ಗಳ ಪೈಕಿ ಯೆಸ್ ಬ್ಯಾಂಕ್ ಹಾಗೂ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಹೆಚ್ಚಿನ ನಷ್ಟ ಅನುಭವಿಸಬೇಕಾಗಬಹುದು. ಖಾಸಗಿ ವಲಯದ ಕೆಲವು ಬ್ಯಾಂಕ್‌ಗಳು ಎದುರಾಗಬಹುದಾದ ನಷ್ಟವನ್ನು ನಿಭಾಯಿಸಲು ಈಗಾಗಲೇ ಹಣ ತೆಗೆದಿರಿಸಲು ಆರಂಭಿಸಿವೆ.

ಅಧಿಕೃತ ಅಂಕಿ–ಅಂಶಗಳ ಪ್ರಕಾರ ವಿಐಎಲ್ ಕಂಪನಿಯು ಎಜಿಆರ್ ಬಾಕಿ ರೂಪದಲ್ಲಿ ನೀಡಬೇಕಿರುವ ಮೊತ್ತ ₹ 58,254 ಕೋಟಿ. ಈ ಮೊತ್ತದಲ್ಲಿ ಕಂಪನಿಯು ₹ 7,854 ಕೋಟಿಯನ್ನು ಈಗಾಗಲೇ ಪಾವತಿಸಿದೆ. ಇನ್ನು ಬಾಕಿ ಇರುವ ಮೊತ್ತ ₹ 50,399 ಕೋಟಿ.

ತಾವು ಪಾವತಿ ಮಾಡಬೇಕಿರುವ ಮೊತ್ತವು ಬೃಹತ್ ಆಗಿರುವ ಕಾರಣ, ಕಂಪನಿಗೆ ಇನ್ನೂ ಹೆಚ್ಚಿನ ಬಂಡವಾಳ ತರಲು ಸಾಧ್ಯವಿಲ್ಲ ಎಂದು ವೊಡಾಫೋನ್ ಮತ್ತು ಆದಿತ್ಯ ಬಿರ್ಲಾ ಸಮೂಹ ಹೇಳಿವೆ.

‘ಇ.ಡಿ ದಾಳಿಗೆ ಜೆಡಿಎಸ್ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ರಾಜಕೀಯ ಏಳಿಗೆ ಸಹಿಸದ ಮತ್ತು ನಾನು ಈ ಹಿಂದೆ ಇದ್ದ ಪಕ್ಷದವರೇ (ಜೆಡಿಎಸ್) ನನ್ನ ವಿರುದ್ಧ ಜಾರಿ ನಿರ್ದೇಶನಾಲಯಕ್ಕೆ (ಇಡಿ) ದೂರು ನೀಡಿದ್ದಾರೆ’ ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಆರೋಪಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ನಾನು ಯಾರ ಹೆಸರೂ ಹೇಳುವುದಿಲ್ಲ. ನಾನು ಇಷ್ಟು ಎತ್ತರಕ್ಕೆ ಬೆಳೆಯುತ್ತೇನೆ ಎಂದು ಅವರು ಭಾವಿಸಿರಲಿಲ್ಲ. ನನ್ನ ಏಳಿಗೆ ಸಹಿಸಲು ಆಗದೇ ದಾಳಿ ಮಾಡಿಸಿದ್ದಾರೆ’ ಎಂದು ಪರೋಕ್ಷವಾಗಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

‘ನಾನು ಒಂದು ಒಳ್ಳೆಯ ಮನೆ ಕಟ್ಟಿಸಿರುವುದು ಅವರಿಗೆ ಸಹಿಸಲು ಆಗಲಿಲ್ಲ. ಅವರನ್ನು ಬಿಟ್ಟು ಬೇರೆ ಯಾರೂ ಮನೆ ಕಟ್ಟಬಾರದು ಎಂಬುದು ಅವರ ಉದ್ದೇಶ. ಹೀಗಾಗಿ, ನಾನು ಮನೆ ಕಟ್ಟಿದ ಮಾಹಿತಿಯನ್ನೇ ಮುಂದಿಟ್ಟುಕೊಂಡೇ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಿದ್ದಾರೆ. ನನ್ನ ವಿರುದ್ಧ ದೂರು ಕೊಟ್ಟ ಕುಟುಂಬದವರಿಗೆ ಒಳ್ಳೆಯದಾಗಲಿ’ ಎಂದು ಹೇಳಿದರು.

‘ಇಂಥ ದಾಳಿಗಳಿಂದ ನನ್ನನ್ನು ಹೆದರಿಸಲು ಅಥವಾ ದುರ್ಬಲಗೊಳಿಸಲು ಸಾಧ್ಯವಿಲ್ಲ, ನನ್ನ ರಾಜಕೀಯ ಭವಿಷ್ಯವನ್ನೂ ಮುಗಿಸಲು ಸಾಧ್ಯವಿಲ್ಲ. ದಾಳಿಗೂ ಐಎಂಎ ಹಗರಣಕ್ಕೂ ಸಂಬಂಧವಿಲ್ಲ’ ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13500	12,500	12,200	176ಸೆಂಟ್ಸ್
ಎಸಿ	6000	4,800	4850	
ಆರ್‌ಪಿ	6000	5,700	5950	ಲಂಡನ್
ಆರ್‌ಸಿ	3355	3,300	3425	1743ಡಾಲರ್ಸ್

ರೇಷ್ಮೆಗೂಡು ಮಾರುಕಟ್ಟೆ **ರಾಮನಗರ**
ಮಿಶ್ರ ತಳಿ: 245–499
ದ್ವಿತಳಿ; 273–538

(ಸೋಮವಾರದ ಅಡಿಕೆ ಧಾರಣೆ ಲಭ್ಯವಾಗಿಲ್ಲ)

ನನ್ನ ಕೈಯ್ಯಲಿದೆಯಾ ಇ.ಡಿ, ಐ.ಟಿ: ಎಚ್‌ಡಿಕೆ ಪ್ರಶ್ನೆ

ರಾಮನಗರ: ‘ಹೇಳಿ ದಾಳಿ ಮಾಡಿಸುವುದಕ್ಕೆ ಕೇಂದ್ರ ಸರ್ಕಾರ, ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಆದಾಯ ತೆರಿಗೆ ಇಲಾಖೆಯು ನನ್ನ ಕೈಯಲ್ಲಿದೆಯಾ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

‘ನನ್ನ ಮನೆ ಮೇಲಿನ ದಾಳಿಗೆ ಜೆಡಿಎಸ್ ನಾಯಕರೇ ಕಾರಣ’ ಎಂಬ ಶಾಸಕ ಜಮೀರ್ ಅಹಮ್ಮದ್ ಆರೋಪಕ್ಕೆ ಸೋಮವಾರ ಬಿಡದಿಯಲ್ಲಿ ಅವರು ಈ ರೀತಿ ಪ್ರತಿಕ್ರಿಯೆ ನೀಡಿದರು.

‘ಅವರ ಆರೋಪಗಳ ಬಗ್ಗೆ ಚರ್ಚೆ ಅನವಶ್ಯಕ. ನನಗೆ ಅದರ ಬಗ್ಗೆ ಆಸಕ್ತಿಯೂ ಇಲ್ಲ. ನಾನು ಅಧಿಕಾರದಲ್ಲಿ ಇರಲಿ, ಬಿಡಲಿ ಬಹಳ ಜನರಿಗೆ ನನ್ನ ಮೇಲೆಯೇ ಕಣ್ಣು’ ಎಂದರು.

ಮಂಗಗಳ ಹತ್ಯೆ ಪ್ರಕರಣ: ಎಸ್‌ಪಿ, ಡಿಎಫ್‌ಒ ಹಾಜರಿಗೆ ಸೂಚನೆ

ಬೆಂಗಳೂರು: ಮಂಗಗಳ ಹತ್ಯೆ ಪ್ರಕರಣದ ಮುಂದಿನ ವಿಚಾರಣೆಗೆ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ.

ಪ್ರಕರಣದ ಆರೋಪಿಗಳಿಗೆ ಶಿಕ್ಷೆ ಆಗುವ ರೀತಿಯ ಮೊಕದ್ದಮೆ ದಾಖಲಿಸಿಲ್ಲ ಎಂಬುದನ್ನು ಮೌಖಿಕವಾಗಿ ತಿಳಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

ಬೇಲೂರು ತಾಲ್ಲೂಕಿನ ಚೌಡನಹಳ್ಳಿ ರಸ್ತೆ ಬದಿಯಲ್ಲಿ ಚೀಲದಲ್ಲಿ 38 ಮೃತಪಟ್ಟ ಮಂಗಗಳು ದೊರೆತಿದ್ದವು.

ಕೆಪಿಸಿಸಿಯಿಂದ ಕ್ವಿಟ್ ಇಂಡಿಯಾ ಸ್ಮರಣಾರ್ಥ ಕಾರ್ಯಕ್ರಮ

‘ಮೊಘಲರ ಆಸ್ಥಾನದಲ್ಲಿದ್ದವರೇ ಈಗಿನ ಆರೆಸ್ಸೆಸ್ ನಾಯಕರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊಘಲರ ಆಳ್ವಿಕೆಯಲ್ಲಿ, ಆಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದ ಜನರೇ ಇಂದು ಆರೆಸ್ಸೆಸ್ ನಾಯಕರಾಗಿದ್ದಾರೆ. ಈಗ ಇವರು ಭಾರತೀಯತೆ, ದೇಶಭಕ್ತಿ ಪಾಠ ಮಾಡುತ್ತಾರೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ಕ್ವಿಟ್ ಇಂಡಿಯಾ ಸ್ಮರಣಾರ್ಥ ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು, ‘ರಾಜ್ಯದಲ್ಲಿ ಟಿಪ್ಪು ಜಯಂತಿ ಆಚರಣೆ ಮಾಡಿದ ಕಾರಣಕ್ಕೆ ನನ್ನ ವಿರುದ್ಧ ಜನರನ್ನು ಎತ್ತಿಕಟ್ಟಿದರು. ಟಿಪ್ಪು ಮಾಡಿದ ದೇಶದ್ರೋಹವೇನು? ಟಿಪ್ಪುವಿನ ದಿವಾನರಾಗಿದ್ದ ಪೂರ್ಣಯ್ಯನವರು, ಹಣಕಾಸು ಮಂತ್ರಿಯಾಗಿದ್ದ ಕೃಷ್ಣಸ್ವಾಮಿ ಹಿಂದುವಲ್ಲವೇ’ ಎಂದು ಪ್ರಶ್ನಿಸಿದರು.

‘ಬ್ರಿಟಿಷರ ವಿರುದ್ಧ ಹೈದರಾಲಿ ಮತ್ತು ಟಿಪ್ಪು ನಾಲ್ಕು ಮಹಾಯುದ್ಧಗಳನ್ನು ಮಾಡಿದ್ದರು. ಬ್ರಿಟಿಷರನ್ನು ದೇಶದಿಂದ ಹೊರಹಾಕುವ ಪ್ರಯತ್ನ ಮಾಡಿದ್ದರು. ಇಂಥ ಟಿಪ್ಪುವಿನ ಜಯಂತಿ ಮಾಡಿದರೆ ಬಿಜೆಪಿಯವರಿಗೆ ಕೋಪ ಬರುತ್ತದೆ. ಟಿಪ್ಪು ಮೇಲಿರುವ ಕೋಪ ಪೂರ್ಣಯ್ಯನ ಮೇಲೆ ಏಕಿಲ್ಲ? ಇಂಥವರು ದೇಶಕಟ್ಟುತ್ತಾರಾ? ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

‘ಈಸ್ಟ್ ಇಂಡಿಯಾ ಕಂಪನಿ ನಮ್ಮ ದೇಶವನ್ನು ಲೂಟಿ ಮಾಡಿತು. ನಮ್ಮ ದೇಶಕ್ಕೆ ಬರುವ ಮುಂಚೆ ಜಗತ್ತಿನ ಜಿಡಿಪಿಗೆ ಬ್ರಿಟಿಷರ ಕೊಡುಗೆ ಶೇ 2 ಇತ್ತು. ನಮ್ಮ ದೇಶದಿಂದ ಅವರು ಹೊರ ಹೋಗುವಾಗ ಶೇ 10ಕ್ಕೆ ಹೋಗಿತ್ತು. ನಮ್ಮ ದೇಶ ಹಿಂದೆಯೇ ಸಮೃದ್ಧವಾಗಿತ್ತು. ದೇಶದ ಜಿಡಿಪಿ ಶೇ 23 ಇತ್ತು. ಬ್ರಿಟಿಷರು ಕೊಳ್ಳೆ ಹೊಡೆದ ಪರಿಣಾಮ ಭಾರತ ಬಡ ದೇಶವಾಯಿತು. ಇವತ್ತು ಮತ್ತೆ ಭಾರತ ಬಡದೇಶವಾಗುತ್ತಿದ್ದರೆ ಅದಕ್ಕೆ ಕಾರಣ ಬಿಜೆಪಿಗರು’ ಎಂದರು.

‘ಹಿಂದೆ ಬ್ರಿಟಿಷರ ವಿರುದ್ಧ ಮಾಡಿದ ಹೋರಾಟದ ಮಾದರಿಯಲ್ಲೇ ಈಗ ಮತ್ತೆ ಬಿಜೆಪಿ ಮತ್ತು ಆರೆಸ್ಸೆಸ್ ವಿರುದ್ಧ ಹೋರಾಟ ಮಾಡಬೇಕಿದೆ. ಕ್ವಿಟ್ ಇಂಡಿಯಾ ಚಳವಳಿ ದಿನ, ಗಣರಾಜ್ಯೋತ್ಸವ ದಿನ, ಸ್ವಾತಂತ್ರ್ಯ ದಿನಾಚರಣೆ ಮುಂತಾದ ಪ್ರಮುಖ ದಿನಗಳಂದು ನಾವೆಲ್ಲ ತ್ಯಾಗ ಬಲಿದಾನದ ಮನಸ್ಥಿತಿ ಬೆಳೆಸಿಕೊಳ್ಳುವ ಪ್ರತಿಜ್ಞೆ ಮಾಡಬೇಕಾಗುತ್ತದೆ. ಜೊತೆಗೆ ಬಿಜೆಪಿಯನ್ನು ತೊಲಗಿಸುವ ಕೆಲಸಕ್ಕೆ ಒಂದಾಗಿ ಕೆಲಸ ಮಾಡಬೇಕು’ ಎಂದು ಕರೆ ನೀಡಿದರು.

ಮೇಲ್ಮನವಿ ಸಲ್ಲಿಸಲು ನೀರವ್‌ಗೆ ಅವಕಾಶ



ಲಂಡನ್ (ಪಿಟಿಐ): ಭಾರತಕ್ಕೆ ಹಸ್ತಾಂತರಿಸುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶದ ವಿರುದ್ಧ ನೀರವ್ ಮೋದಿ ಅರ್ಜಿ ಸಲ್ಲಿಸಲು ಲಂಡನ್ ಹೈಕೋರ್ಟ್ ಸೋಮವಾರ ವಜ್ರದ ವ್ಯಾಪಾರಿ ನೀರವ್ ಮೋದಿಗೆ ಅವಕಾಶ ನೀಡಿದೆ.

ಮಾನಸಿಕ ಆರೋಗ್ಯ ಮತ್ತು ಮಾನವ ಹಕ್ಕುಗಳ ಆಧಾರದ ಮೇಲೆ ನ್ಯಾಯಾಲಯ ಈ ಅವಕಾಶ ಕಲ್ಪಿಸಿದೆ.

'ನೀರವ್ ಮೋದಿ ತೀವ್ರ ಖಿನ್ನತೆಗೆ ಒಳಗಾಗಿದ್ದಾರೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳುವ ಅಪಾಯವೇ ಹೆಚ್ಚು' ಎಂದು ವಕೀಲರು ಮಂಡಿಸಿದ ವಾದವನ್ನು ನ್ಯಾಯಮೂರ್ತಿ ಮಾರ್ಟಿನ್ ಚಂಬರ್ಲೈನ್ ಪರಿಗಣಿಸಿ ಈ ಆದೇಶ ನೀಡಿದ್ದಾರೆ.

ಯುಎನ್‌ಎಸ್‌ಸಿ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ

ಕಡಲ ಭದ್ರತೆ: ಸಹಕಾರಕ್ಕೆ ಸಲಹೆ

ವಿಶ್ವಸಂಸ್ಥೆ(ಪಿಟಿಐ): ಕಡಲ ಭದ್ರತೆ ಹೆಚ್ಚಿಸಲು ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಅಂತರರಾಷ್ಟ್ರೀಯ ಕಾನೂನುಗಳ ಅನ್ವಯ ವಿವಾದಗಳನ್ನು ಶಾಂತಿಯುತವಾಗಿ ಇತ್ಯರ್ಥಗೊಳಿಸಬೇಕು ಎಂದು ಸಲಹೆ ನೀಡಿದ್ದಾರೆ.

ಕಡಲ ಭದ್ರತೆ ಕುರಿತು ಸೋಮವಾರ ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಸುರಕ್ಷತೆ ಕ್ರಮಗಳಿಗಾಗಿ ಕಾರ್ಯತಂತ್ರ ರೂಪಿಸಲು ಐದು ಅಂಶಗಳ ಸೂತ್ರಗಳ ಪ್ರಸ್ತಾವನೆಯನ್ನು ಮುಂದಿಟ್ಟರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಿದ್ದ ಮೋದಿ, 'ಸಮುದ್ರ ಮಾರ್ಗಗಳು ಅಂತರರಾಷ್ಟ್ರೀಯ ವ್ಯಾಪಾರದ ಜೀವನಾಡಿಯಾಗಿವೆ. ಆದರೆ,



ಇಂತಹ ಮಾರ್ಗಗಳು ಭಯೋತ್ಪಾದನೆ ಚಟುವಟಿಕೆಗಳಿಗೂ ದುರುಪಯೋಗವಾಗುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'ಮುಕ್ತ ಕಡಲು ವ್ಯಾಪಾರಕ್ಕೆ ಇರುವ ತೊಡಕುಗಳನ್ನು ತೆಗೆದು ಹಾಕಬೇಕಾಗಿದೆ. ಜಾಗತಿಕ ಪ್ರಗತಿಯು ಕಡಲು ವ್ಯಾಪಾರದ ಮೇಲೆ ಅಪಾರ ಅವಲಂಬನೆಯಾಗಿದೆ. ಆದರೆ, ಹಲವು ರೀತಿಯ ತೊಡಕುಗಳಿಂದ ಜಾಗತಿಕ ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತಿದೆ. ಸಮುದ್ರ ಸಂರಕ್ಷಣೆಗಾಗಿ ಪರಸ್ಪರ ಸಹಕಾರ ಅಗತ್ಯ. ಇದಕ್ಕೆ ಎಲ್ಲ ರಾಷ್ಟ್ರಗಳು ಕೈಜೋಡಿಸಬೇಕು' ಎಂದರು.

ಅಂತರರಾಷ್ಟ್ರೀಯ ವಿವಾದಗಳ ಬಗ್ಗೆ ಪ್ರಸ್ತಾಪಿಸಿದ ಅವರು, 'ಪರಸ್ಪರ ವಿಶ್ವಾಸ ವೃದ್ಧಿಸಲು ಅಂತರರಾಷ್ಟ್ರೀಯ ಕಾನೂನುಗಳನ್ನು ಪಾಲಿಸಿ, ಶಾಂತಿಯುತವಾಗಿ ವಿವಾದಗಳನ್ನು ಪರಿಹರಿಸಿಕೊಳ್ಳಬೇಕು. ಬಾಂಗ್ಲಾ ದೇಶದ ಜತೆಗಿನ ಬಿಕ್ಕಟ್ಟನ್ನು ಭಾರತವು ಇದೇ ಸೂತ್ರದ ಅನ್ವಯ ಬಗೆಹರಿಸಿಕೊಂಡಿತು. ಜಾಗತಿಕ ಶಾಂತಿ ಮತ್ತು ಸ್ಥಿರತೆಗೆ ಇಂತಹ ಕ್ರಮಗಳು ಅಗತ್ಯ' ಎಂದು ವಿವರಿಸಿದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಕ್ತ ಚರ್ಚೆಯ ಅಧ್ಯಕ್ಷತೆ ವಹಿಸಿಕೊಂಡಿದ್ದ ನರೇಂದ್ರ ಮೋದಿ ಅವರು ಭಾರತದ ಮೊದಲ ಪ್ರಧಾನಿ. ರಷ್ಯಾ ಪ್ರಧಾನಿ ವ್ಲಾದಿಮಿರ್ ಪುಟಿನ್, ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಸೇರಿ ದಂತೆ ಹಲವು ರಾಷ್ಟ್ರಗಳ ನಾಯಕರು ಭಾಗವಹಿಸಿದ್ದರು.

'ಶಕ್ತಿ ತುಂಬಿದ ಕ್ವಿಟ್ ಇಂಡಿಯಾ ಚಳವಳಿ'

ನವದೆಹಲಿ: ಕ್ವಿಟ್ ಇಂಡಿಯಾ ಚಳವಳಿಯಲ್ಲಿ (ಬ್ರಿಟಿಷರೇ ಭಾರತ ಬಿಟ್ಟು ತೊಲಗಿ) ಪಾಲ್ಗೊಂಡ ಶ್ರೇಷ್ಠ ವ್ಯಕ್ತಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಗೌರವ ನಮನ ಸಲ್ಲಿಸಿದರು.

ಕ್ವಿಟ್ ಇಂಡಿಯಾ ಚಳವಳಿಯ 79ನೇ ವರ್ಷಾಚರಣೆ ಅಂಗವಾಗಿ ಟ್ವೀಟ್ ಮಾಡಿರುವ ಮೋದಿ, 'ಈ ಚಳವಳಿ, ಭಾರತದಾದ್ಯಂತ ಪ್ರತಿಧ್ವನಿಸುವ ಜತೆಗೆ, ನಮ್ಮ ದೇಶದ ಯುವ ಸಮೂಹಕ್ಕೆ ಶಕ್ತಿ ತುಂಬಿದಂತಹ ಆಂದೋಲನ ಎಂದರು.

ಊಟದ ಡಬ್ಬಿಯಲ್ಲಿ ಆರ್‌ಡಿಎಕ್ಸ್ ಪತ್ತೆ

ಚಂಡೀಗಢ(ಪಿಟಿಐ): ಅಮೃತಸರ ಬಳಿಯ ಹಳ್ಳಿಯೊಂದರಲ್ಲಿ ಎರಡು ಕೆ.ಜಿಯಷ್ಟು ಆರ್‌ಡಿಎಕ್ಸ್ ತುಂಬಿದ್ದ ಊಟದ ಡಬ್ಬಿ ಪತ್ತೆಯಾಗಿದೆ.

ಪಾಕಿಸ್ತಾನದಿಂದ ಡ್ರೋನ್ ಮೂಲಕ ಈ ಡಬ್ಬಿಯನ್ನು ತಂದು ಇಲ್ಲಿ ಹಾಕಲಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

'ಊಟದ ಡಬ್ಬಿ ಇದ್ದ ಚೀಲದಲ್ಲಿ ಇತರ ಕೆಲವು ಸ್ಫೋಟಕಗಳೂ ಪತ್ತೆಯಾಗಿವೆ' ಎಂದು ಪೊಲೀಸ್ ಮಹಾ ನಿರ್ದೇಶಕ ದಿನಕರ್ ಗುಪ್ತಾ ತಿಳಿಸಿದ್ದಾರೆ.

'ಅಮೃತಸರ ಗ್ರಾಮಾಂತರ ಜಿಲ್ಲೆಯ ಲೋಪೋಕ್ ಪೊಲೀಸ್ ಠಾಣೆಯ ವ್ಯಾಪ್ತಿಯ ಧಾಲಿಕೆ ಗ್ರಾಮದಲ್ಲಿ ಭಾನುವಾರ ಕೆಲವು ವಸ್ತುಗಳನ್ನು ವಶಕ್ಕೆ ಪಡೆದಿದ್ದೇವೆ. ಐದು ಗ್ರೆನೇಡ್‌ಗಳು, ರಿಮೋಟ್ ಕಂಟ್ರೋಲ್ ಉಪಕರಣ ಸೇರಿದಂತೆ ಕೆಲವು ಸ್ಫೋಟಕ ವಸ್ತುಗಳು ಪತ್ತೆಯಾಗಿವೆ. ಅತ್ಯಂತ ಮುಖ್ಯವಾಗಿ ಊಟದ ಡಬ್ಬಿಯಲ್ಲಿ ಸುಧಾರಿತ ಸ್ಫೋಟಕ ಪತ್ತೆಯಾಗಿದೆ' ಎಂದು ಗುಪ್ತಾ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

'ಈ ಬಾಂಬ್ ಅನ್ನು ಗಡಿಯಾಚೆಯಿಂದ ಡ್ರೋನ್ ಮೂಲಕ ತಂದು ಹಾಕಲಾಗಿದೆ' ಎಂದು ನಾವು ಶಂಕಿಸಿದ್ದೇವೆ ಎಂದು ಅವರು ಹೇಳಿದ್ದಾರೆ.

'ಬಾಂಬ್ ಪತ್ತೆಯಾದ ಪ್ರದೇಶದಲ್ಲಿ ಕೆಲವು ಡ್ರೋನ್‌ಗಳು ಹಾರಾಟ ನಡೆಸಿರುವ ಬಗ್ಗೆ ಗ್ರಾಮದ ಮಾಜಿ ಸರಪಂಚರು ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಡಿಜಿಪಿ ತಿಳಿಸಿದ್ದಾರೆ.

ಪಂಜಾಬ್ ಪೊಲೀಸರ ಕೋರಿಕೆಯಂತೆ ರಾಷ್ಟ್ರೀಯ ಭದ್ರತಾ ದಳ ಹೆಚ್ಚಿನ ತನಿಖೆಯನ್ನು ಕೈಗೊಂಡಿದೆ.

ಮೂರು ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಸೋಮವಾರ ಲೋಕಸಭೆಯಲ್ಲಿ 6 ಮಸೂದೆಗಳನ್ನು ಮಂಡಿಸಿ, ಮೂರಕ್ಕೆ ಸದನದ ಅನುಮೋದನೆ ಪಡೆದುಕೊಂಡಿದೆ.

ಕಲಾಪ ಆರಂಭ ವಾದಾಗ ಪೆಗಾಸಸ್ ಗೂಢಚರ್ಯೆ ಮತ್ತು ರೈತರ ಪ್ರತಿಭಟನೆ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದರು. ಪ್ರತಿಭಟನೆ ಮಧ್ಯೆಯೇ ಸರ್ಕಾರವು, ಎಲ್‌ಎಲ್‌ಪಿ (ತಿದ್ದುಪಡಿ) ಮಸೂದೆ-2021, ಐಸಿಜಿಸಿ (ತಿದ್ದುಪಡಿ) ಮಸೂದೆ-2021 ಮತ್ತು ಸಂವಿಧಾನ (ಪರಿಶಿಷ್ಟ ಪಂಗಡ) ಆದೇಶ (ತಿದ್ದುಪಡಿ) ಮಸೂದೆ-2021ಗಳನ್ನು ಮಂಡಿಸಿ ಅನುಮೋದನೆ ಪಡೆದುಕೊಂಡಿತು.

ಸಂವಿಧಾನದ 127ನೇ ತಿದ್ದುಪಡಿ ಮಸೂದೆ ವೇಳೆ ವಿರೋಧ ಪಕ್ಷಗಳು ಪೂರ್ವನಿರ್ಧಾರದಂತೆ ಪ್ರತಿಭಟನೆಯನ್ನು ನಿಲ್ಲಿಸಿದವು.

ಓದುಗರ ಜತೆ ನಿಸರ್ಗದ ಅದ್ಭುತ ಸಂಗತಿ ಹಂಚಿಕೊಂಡಿರುವೆ:ಸುಧಾ

'ಹೌ ದ ಅರ್ಥ್ ಗಾಟ್ ಇಟ್ಸ್ ಬ್ಯೂಟಿ' ಶೀರ್ಷಿಕೆಯ ಪುಸ್ತಕವನ್ನು ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಪ್ರಿಂಟ್ ಪಫಿನ್ ಪ್ರಕಟಿಸಿದೆ.

ಭೂಮಿಯ ಸೌಂದರ್ಯ ವಿವರಿಸುವ ಸುಧಾಮೂರ್ತಿಯ ಹೊಸ ಪುಸ್ತಕ

ನವದೆಹಲಿ: ಭೂಮಿಯ ಸೌಂದರ್ಯವನ್ನು ವಿಭಿನ್ನ ಬಗೆಯಲ್ಲಿ ವಿವರಿಸುವ ಪುಸ್ತಕವನ್ನು ಖ್ಯಾತ ಲೇಖಕಿ ಸುಧಾ ಮೂರ್ತಿ ಅವರು ಈ ಬಾರಿ ಬರೆದಿದ್ದಾರೆ. ಭೂಮಿಯ ಕುರಿತ ಅದ್ಭುತ ಕಥೆಗಳನ್ನು ಈ ಪುಸ್ತಕ ಒಳಗೊಂಡಿದೆ.

ಐದರಿಂದ ಎಂಟು ವರ್ಷದ ಮಕ್ಕಳಿಗಾಗಿ ಈ ಪುಸ್ತಕ ರಚಿಸಲಾಗಿದೆ. ಪುಸ್ತಕದಲ್ಲಿನ ವರ್ಣ ರಂಜಿತ ಚಿತ್ರಗಳು ಮಕ್ಕಳನ್ನು ಆಕರ್ಷಿಸುತ್ತವೆ.



ಸುಧಾ ಮೂರ್ತಿ

'ಪ್ರವಾಸದ ಸಂದರ್ಭದಲ್ಲಿ ವಿಭಿನ್ನ ರೀತಿಯ ಭೂದೃಶ್ಯಗಳು, ಮಂಜು ಆವರಿಸಿಕೊಂಡಿರುವ ಬೆಟ್ಟಗಳು, ನದಿಗಳ ನಾದ, ಹತ್ತಾರು ಪ್ರಾಣಿಗಳ ಸಂಚಾರ, ಜಲಮೂಲಗಳಲ್ಲಿ ವಾಸಿಸುವ ಜೀವಿಗಳನ್ನು ನೋಡುತ್ತಿದ್ದೆ. ಇವೆಲ್ಲವೂ ಅದ್ಭುತ ಲೋಕ. ಇವುಗಳನ್ನು ಸೃಷ್ಟಿಸಿದ ಕಲಾ ಜಾದೂಗಾರ ಯಾರು? ಇಂತಹ ಭೂಮಿಯನ್ನು ಸೃಷ್ಟಿಸಿದ್ದು ಯಾರು? ಎನ್ನುವ ಕುತೂಹಲ ಮೂಡುತ್ತಿತ್ತು. ನನಗೆ ಬಹಳಷ್ಟು ಆಶ್ಚರ್ಯವಾಗುತ್ತಿತ್ತು. ಇಂತಹ ರಮಣೀಯ ಸೌಂದರ್ಯವೇ ಪುಸ್ತಕ ರೂಪದಲ್ಲಿ ಅನಾವರಣಗೊಂಡಿತು' ಎಂದು ಸುಧಾಮೂರ್ತಿ ಅವರು ಪುಸ್ತಕದ ಬಗ್ಗೆ ವಿವರಿಸಿದ್ದಾರೆ.

'ಮಕ್ಕಳಿಗೆ ಸುಂದರವಾದ ಚಿತ್ರಗಳ ಜತೆ ಕಥೆ ಹೇಳುವ ಸನ್ನಿವೇಶವನ್ನು ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ. ಜನಪ್ರಿಯ ಲೇಖಕರಾಗಿರುವ ಸುಧಾಮೂರ್ತಿ ಅವರು ಮಕ್ಕಳಿಗೆ ವಿಭಿನ್ನ ಶೈಲಿಯಲ್ಲಿ ಕಥೆಗಳನ್ನು ರಚಿಸಿದ್ದಾರೆ. ಕಥೆಗಳ ಜತೆಗಿನ ವರ್ಣರಂಜಿತ ಕಲಾ ಚಿತ್ರಗಳು ಗಮನಸೆಳೆಯುತ್ತವೆ. ಮಕ್ಕಳ ಗ್ರಂಥಾಲಯಕ್ಕೆ ಇದೊಂದು ಅದ್ಭುತ ಪುಸ್ತಕ' ಎಂದು ಪೆಂಗ್ವಿನ್ ರ‍್ಯಾಂಡಮ್ ಹೌಸ್‌ನ ಸೊಹಿನಿ ಮಿತ್ರ ವಿವರಿಸಿದ್ದಾರೆ.

ದೆಹಲಿ ಗಡಿಯಲ್ಲಿ ಯಥಾರೀತಿ ಮುಂದುವರಿಯಲಿದೆ ರೈತರ ಪ್ರತಿಭಟನೆ

ಮುಕ್ತಾಯಗೊಂಡ 'ಕಿಸಾನ್ ಸಂಸತ್'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕೃಷಿ ಕಾಯ್ದೆ ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ಇಲ್ಲಿನ ಜಂತರ್‌-ಮಂತರ್ ಬಳಿ ನಡೆಸಲಾದ 'ಕಿಸಾನ್ ಸಂಸತ್' ಕಾರ್ಯಕ್ರಮ ಮುಕ್ತಾಯಗೊಂಡಿದೆ.

'ಕಿಸಾನ್ ಸಂಸತ್'ನ ಕೊನೆಯ ದಿನವಾದ ಸೋಮವಾರ ರೈತರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಅಂಗೀಕರಿಸಿದ ಬಳಿಕ ಕಾರ್ಯಕ್ರಮ ಮುಕ್ತಾಯ ಗೊಳಿಸಲಾಯಿತು.

ಆದರೆ, ಕಾಯ್ದೆಯನ್ನು ವಿರೋಧಿಸಿ 9 ತಿಂಗಳುಗಳಿಂದ ದೆಹಲಿಯ ಗಡಿಯಲ್ಲಿರುವ ಸಿಂಘು, ಟಿಕ್ರಿ ಮತ್ತು ಗಾಜಿಪುರ ಬಳಿ ನಡೆದಿರುವ ಪ್ರತಿಭಟನೆಯು ಎಂದಿನಂತೆ ಮುಂದುವರಿಯಲಿದೆ ಎಂದು ಮೋರ್ಚಾ ತಿಳಿಸಿದೆ.

'ರೈತರೂ ಒಳಗೊಂಡಂತೆ ದೇಶದ ಜನರ ನಂಬಿಕೆಗೆ ಅರ್ಹವಲ್ಲದ ಕೇಂದ್ರ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯುವ ಹಕ್ಕು ಇಲ್ಲ' ಎಂದು ಮೋರ್ಚಾದ ಭಾಗವಾಗಿರುವ ಭಾರತೀಯ ಕಿಸಾನ್ ಒಕ್ಕೂಟದ ಮಾಧ್ಯಮ ಉಸ್ತುವಾರಿ ಧರ್ಮೇಂದ್ರ ಮಲಿಕ್ ಹೇಳಿದ್ದಾರೆ.



ಉತ್ತರ ಪ್ರದೇಶದ ಗಾಜಿಯಾಬಾದ್ ಬಳಿಯ ಮೋದಿನಗರದಲ್ಲಿ ಸೋಮವಾರ ಬಿಕೆಯು ವಕ್ತಾರ ರಾಕೇಶ್ ಟಿಕಾಯತ್ ಅವರು 'ಮಹಾಪಂಚಾಯತ್'ನಲ್ಲಿ ಕೇಂದ್ರದ ಕೃಷಿ ಸುಧಾರಣಾ ಕಾಯ್ದೆಗಳನ್ನು ವಿರೋಧಿಸಿ ಮಾತನಾಡಿದರು –ಪಿಟಿಐ ಚಿತ್ರ

ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಜುಲೈ 22ರಿಂದ ಆಗಸ್ಟ್ 9ರವರೆಗೆ, ನಿತ್ಯವೂ 200 ಪ್ರತಿಭಟನಕಾರರನ್ನು ಒಳಗೊಂಡ 'ಕಿಸಾನ್ ಸಂಸತ್' ಕಾರ್ಯಕ್ರಮವನ್ನು ಆಯೋಜಿಸಲು ದೆಹಲಿ ಪೊಲೀಸರು ಅನುಮತಿ ನೀಡಿದ್ದರು.

ಜಂತರ್‌- ಮಂತರ್ ಬಳಿ ರೈತರು ನಡೆಸುತ್ತಿರುವ 'ಕಿಸಾನ್ ಸಂಸತ್' ಕಾರ್ಯಕ್ರಮ ಹಾಗೂ ಶಾಂತಿಯುತ ಪ್ರತಿಭಟನೆ ಸೋಮವಾರ ಕೊನೆಗೊಂಡಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಭಟನೆಯ ವೇಳೆ ವಿವಾದಾತ್ಮಕ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ಜಂತರ್-ಮಂತರ್ ಬಳಿ ಭಾನುವಾರ ನಡೆದ ಪ್ರತಿಭಟನೆ ವೇಳೆ ಕೆಲವರು ಕೋಮು ಭಾವನೆ ಕೆರಳಿಸುವ ಘೋಷಣೆಗಳನ್ನು ಕೂಗಿರುವ ದೃಶ್ಯದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಈ ವಿಡಿಯೊ ಆಧರಿಸಿ ಸೋಮವಾರ ಪ್ರಕರಣ ದಾಖಲಿಸಿಕೊಂಡಿರುವ ದೆಹಲಿ ಪೊಲೀಸರು, ಘೋಷಣೆ ಕೂಗಿರುವವರ ಪತ್ತೆಗೆ ಶೋಧಕಾರ್ಯ ನಡೆಸಿದ್ದಾರೆ.

ಭಾರತ್ ಜೋಡೋ ಆಂದೋಲನ್ ಸಂಘಟನೆಯು, ಬಿಜೆಪಿಯ ಮಾಜಿ ವಕ್ತಾರ ಅಶ್ವಿನಿ ಉಪಾಧ್ಯಾಯ ನೇತೃತ್ವದಲ್ಲಿ ಏರ್ಪಡಿಸಿದ್ದ ಪ್ರತಿಭಟನೆ ವೇಳೆ ಕೋಮು ಭಾವನೆ ಕೆರಳಿಸುವ ಘೋಷಣೆ ಕೂಗಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಪ್ರತಿಭಟನೆಗೆ ಅನುಮತಿ ನೀಡಲಾಗಿರಲಿಲ್ಲ. ಆದರೂ ಕಾರ್ಯಕ್ರಮ ಆಯೋಜಿಸ ಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಬ್ರಿಟಿಷರ ಕಾಲದ 222 ಕಾಯ್ದೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ಈ ಪ್ರತಿಭಟನೆ ನಡೆಸಲಾಗಿತ್ತು. ವಿವಾದಾತ್ಮಕ ಘೋಷಣೆಗಳಿರುವ ವಿಡಿಯೊವನ್ನು ಪರಿಶೀಲಿಸಲಾಗುತ್ತಿದೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

'ನಾನೂ ವಿಡಿಯೊ ವೀಕ್ಷಿಸಿದ್ದೇನೆ. ಪ್ರತಿಭಟನೆಯ ವೇಳೆ ಕೋಮು ವಿರೋಧಿ ಘೋಷಣೆ ಕೂಗಲಾಗಿದೆ. ಆದರೆ, ಘೋಷಣೆ ಕೂಗಿದವರೊಂದಿಗೆ ಸಂಘಟನೆಯು ಯಾವುದೇ ರೀತಿಯ ಸಂಪರ್ಕ ಹೊಂದಿಲ್ಲ. ವಿವಾದ ಸೃಷ್ಟಿಸಿದವರು ಯಾರು ಎಂಬುದು ತಿಳಿದಿಲ್ಲ' ಎಂದು ಭಾರತ್ ಜೋಡೋ ಆಂದೋಲನದ ಮಾಧ್ಯಮ ಉಸ್ತುವಾರಿ ಶಿಪ್ರಾ ಶ್ರೀವಾಸ್ತವ ತಿಳಿಸಿದ್ದಾರೆ.

'ಘೋಷಣೆಗೂ ನಮಗೂ ಯಾವುದೇ ಸಂಬಂಧವಿಲ್ಲ' ಎಂದು ತಿಳಿಸಿರುವ ಅಶ್ವಿನಿ ಉಪಾಧ್ಯಾಯ, ವೈರಲ್ ಆಗಿರುವ ವಿಡಿಯೊ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪೊಲೀಸರಿಗೆ ದೂರು ಸಲ್ಲಿಸಿರುವುದಾಗಿ ಹೇಳಿದ್ದಾರೆ.

ಸ್ಥಳದಲ್ಲಿದ್ದ ಪತ್ರಕರ್ತರೊಬ್ಬರಿಗೆ ಬೆದರಿಕೆ ಹಾಕಿರುವ ಪ್ರತಿಭಟನಾಕಾರರು, 'ಜೈ ಶ್ರೀರಾಮ್' ಘೋಷಣೆ ಕೂಗುವಂತೆ ಒತ್ತಾಯಿಸಿದ್ದಾರೆ.

ಚಿತ್ರೀಕರಣದ ವೇಳೆ ವಿದ್ಯುತ್ ಸ್ಪರ್ಶ: ಸಾಹಸ ಕಲಾವಿದ ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿನ ಜೋಗರಪಾಳ್ಯದ ತೆಂಗಿನತೋಟದಲ್ಲಿ ಸೋಮವಾರ 'ಲವ್ ಯೂ ರಚ್ಚು' ಸಿನಿಮಾ ಚಿತ್ರೀಕರಣ ವೇಳೆ ವಿದ್ಯುತ್ ಸ್ಪರ್ಶಿಸಿ ಸಾಹಸ ಕಲಾವಿದ ವಿವೇಕ್ (35) ಸಾವನ್ನಪ್ಪಿದ್ದಾರೆ.

ಐದು ದಿನಗಳಿಂದ ಚಿತ್ರೀಕರಣ ನಡೆದಿತ್ತು. ಬೆಳಿಗ್ಗೆ 11 ಗಂಟೆ ವೇಳೆಗೆ ಚಿತ್ರದ ಸಾಹಸ ನಿರ್ದೇಶಕ ವಿನೋದ್ ಸಂಯೋಜನೆಯಲ್ಲಿ ಕಲಾವಿದರು ಮೇಲಿನಿಂದ ನೀರಿನ ತೊಟ್ಟಿಗೆ ಬೀಳುವ ದೃಶ್ಯದ ಚಿತ್ರೀಕರಣ ನಡೆದಿತ್ತು. ಇದಕ್ಕಾಗಿ ಕಲಾವಿದ ವಿವೇಕ್ ಅವರಿಗೆ ಮೆಟಲ್ ರೋಪ್ ಕಟ್ಟಿ ಅವರನ್ನು ಕ್ರೇನ್ ಮೂಲಕ ಮೇಲಕ್ಕೆ ಎತ್ತಲಾಯಿತು. ಈ ವೇಳೆ ಮೇಲಿದ್ದ ಹೈಟೆನ್ಶನ್ ವಿದ್ಯುತ್ ತಂತಿ ಸ್ಪರ್ಶಿಸಿ ಅವಘಡ ನಡೆಯಿತು.

ಫೈಟರ್ ಜಾಕೆಟ್ ಧರಿಸಿದ್ದ ಮತ್ತೊಬ್ಬ ಕಲಾವಿದ ರಂಜಿತ್ ಅವರಿಗೂ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಿವೇಕ್ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಇವರು ತಮಿಳುನಾಡು ಮೂಲದವರು. ನಾಲ್ಕೈದು ವರ್ಷದಿಂದ ಸಾಹಸ ಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಅಜಯ್ ರಾವ್ ಹಾಗೂ ರಚಿತಾ ರಾಮ್ ನಟನೆಯ ಚಿತ್ರ ಇದಾಗಿದ್ದು, ಜನವರಿಯಲ್ಲಿ ಚಿತ್ರ ಸೆಟ್ಟೇರಿತ್ತು. ಸೋಮವಾರ ಚಿತ್ರೀಕರಣ ಸಂದರ್ಭ ಅಜಯ್ ರಾವ್ ಸ್ಥಳದಲ್ಲಿದ್ದರು ಎನ್ನಲಾಗಿದೆ. ಅವಘಡದ ನಂತರ ಚಿತ್ರೀಕರಣ ನಿಲ್ಲಿಸಿ ಇಡೀ ತಂಡ ಅಲ್ಲಿಂದ ತೆರಳಿದೆ.

ಚಿತ್ರೀಕರಣಕ್ಕೆ ಪೊಲೀಸರಿಂದ ಅನುಮತಿ ಪಡೆದಿರಲಿಲ್ಲ. ಘಟನೆ ಸಂಬಂಧ ಚಿತ್ರದ ನಿರ್ದೇಶಕ ಆರ್. ಶಂಕರ್, ಸಾಹಸ ನಿರ್ದೇಶಕ ವಿನೋದ್, ಕ್ರೇನ್ ಚಾಲಕ ಮುನಿರಾಜು, ಜಮೀನು ಮಾಲೀಕ ಪುಟ್ಟರಾಜು ಅವರನ್ನು ವಶಕ್ಕೆ ಪಡೆಯಲಾಗಿದೆ. ನಿರ್ಮಾಪಕ ಗುರು ದೇಶಪಾಂಡೆ ಅವರಿಗೆ ಹುಡುಕಾಟ ನಡೆಸಿದ್ದೇವೆ ಎಂದು ರಾಮನಗರ ಎಸ್ಪಿ ಗಿರೀಶ್ ತಿಳಿಸಿದರು.

ನಿರ್ಲಕ್ಷ್ಯ ಕಾರಣ?

ಜಮೀನಿನ ಮೇಲ್ಭಾಗದಲ್ಲಿ ಹೈಟೆನ್ಶನ್ ವಿದ್ಯುತ್ ತಂತಿ ಹಾದು ಹೋಗಿದೆ. ಇದನ್ನು ಲೆಕ್ಕಿಸದೇ ಚಿತ್ರ ತಂಡ ಸಾಹಸ ದೃಶ್ಯಗಳ ಚಿತ್ರೀಕರಣಕ್ಕೆ ಮುಂದಾಗಿದ್ದು, ಅಗತ್ಯವಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರಲಿಲ್ಲ. ಕ್ರೇನ್ ಮೂಲಕ ಕಲಾವಿದರಿಬ್ಬರನ್ನು ಮೇಲೆ ಎತ್ತಲಾಗಿತ್ತು. ಈ ವೇಳೆ ಕ್ರೇನ್ ಮುಂದೆ ಸಾಗಲಿಲ್ಲ. ಮೆಟಲ್ ರೋಪ್ ಬಳಕೆ ಮಾಡಿದ್ದು, ಅದು ವಿದ್ಯುತ್ ತಂತಿಗೆ ಸ್ಪರ್ಶಿಸಿದ ಕಾರಣ ಅವಘಡ ನಡೆದಿದೆ. ಇದರಲ್ಲಿ ಚಿತ್ರತಂಡದ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದು ಪೊಲೀಸರು ತಿಳಿಸಿದರು.

ಹೆಚ್ಚು ಬಿಸಿಯಾಗುತ್ತಿದೆ ಹಿಂದೂ ಮಹಾಸಾಗರ: ಐಪಿಸಿಸಿ ವರದಿ

ನವದೆಹಲಿ (ಪಿಟಿಐ): ಹಿಂದೂ ಮಹಾಸಾಗರವು ಇತರ ಸಾಗರಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಬಿಸಿಯಾಗುತ್ತಿದೆ ಎಂದು ಹವಾಮಾನ ಬದಲಾವಣೆಯ ಕುರಿತ ಅಂತರಸರ್ಕಾರಿ ಸಮಿತಿಯ (ಐಪಿಸಿಸಿ) ವರದಿ ಸೋಮವಾರ ತಿಳಿಸಿದೆ.

ಹವಾಮಾನ ಬದಲಾವಣೆ ಪರಿಣಾಮವಾಗಿ ಭಾರತವು ಬಿಸಿಗಾಳಿ ಮತ್ತು ಪ್ರವಾಹಕ್ಕೆ ಸಾಕ್ಷಿಯಾಗಲಿದೆ ಎಂದು ಎಚ್ಚರಿಕೆ ನೀಡಿದೆ.

'ಹವಾಮಾನ ಬದಲಾವಣೆ 2021: ಭೌತಿಕ ವಿಜ್ಞಾನದ ಆಧಾರ' ಹೆಸರಿನ ಐಪಿಸಿಸಿಯ ಆರನೇ ಮೌಲ್ಯಮಾಪನ ವರದಿಯಲ್ಲಿ, 'ಸಮುದ್ರದ ತಾಪಮಾನವು, ನೀರಿನ ಮಟ್ಟ ಏರಿಕೆಗೆ ಕಾರಣವಾಗುತ್ತದೆ. ಕರಾವಳಿ ಮತ್ತು ತಗ್ಗು ಪ್ರದೇಶಗಳಲ್ಲಿ ಆಗಾಗ್ಗೆ ತೀವ್ರವಾದ ಪ್ರವಾಹ ಉಂಟಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

'ಬಿಸಿಗಾಳಿ ಹೆಚ್ಚಳ, ಭಾರೀ ಪ್ರಮಾಣದ ಮಳೆ ಸುರಿಯುವ ಘಟನೆಗಳು ಮತ್ತು ಹಿಮನದಿ ಮತ್ತಷ್ಟು ಕರಗುವಿಕೆ ವಿದ್ಯಮಾನವನ್ನು ನಾವು ನೋಡುತ್ತೇವೆ. ಇದು ಭಾರತದಂತಹ ದೇಶದ ಮೇಲೆ ಪರಿಣಾಮ ಬೀರುತ್ತವೆ. ಸಮುದ್ರಮಟ್ಟದ ಏರಿಕೆಯಿಂದ ಹೆಚ್ಚಿನ ಅನಾಹುತಕಾರಿ ಘಟನೆಗಳು, ಉಷ್ಣವಲಯದ ಚಂಡಮಾರುತಗಳು ಬಂದಾಗ ಪ್ರವಾಹ ಉಂಟಾಗಬಹುದು' ಎಂದು ವರದಿಯ ಲೇಖಕರಲ್ಲಿ ಒಬ್ಬರಾದ ಫ್ರೀಡೆರಿಕ್ ಒಟ್ಟೊ ಹೇಳಿದ್ದಾರೆ.

ಉಷ್ಣತೆಯಿಂದ ಶೇ 50ರಷ್ಟು ಸಮುದ್ರ ಮಟ್ಟ ಏರಿಕೆ ಆಗಿದೆ ಎಂದು ಇನ್ನೊಬ್ಬ ಲೇಖಕಿ, ಭಾರತೀಯ ಉಷ್ಣವಲಯದ ಹವಾಮಾನ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಸ್ವಪ್ನಾ ಪಣಿಕ್ಕಲ್ ಹೇಳಿದ್ದಾರೆ.

ಮಾನವ ಚಟುವಟಿಕೆಗಳು ಹವಾಮಾನ ಬದಲಾವಣೆಗೆ ಕಾರಣ. ಹೀಗಾಗಿ ಬಿಸಿಗಾಳಿ, ಭಾರೀ ಮಳೆ ಮತ್ತು ಬರ ಸೇರಿದಂತೆ ತೀವ್ರ ಹವಾಮಾನದ ಘಟನೆಗಳನ್ನು ಆಗಾಗ್ಗೆ ಮತ್ತು ತೀವ್ರವಾಗಿ ಹೆಚ್ಚುತ್ತಿವೆ ಎಂದು ವರದಿ ಹೇಳಿದೆ.

ಒಬಿಸಿ ಪಟ್ಟಿ: ರಾಜ್ಯಗಳಿಗೆ ಅಧಿಕಾರ

ಒಂದನೇ ಪುಟದಿಂದ

ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವ ಉದ್ದೇಶದಿಂದ ಸಮುದಾಯಗಳನ್ನು ಇತರ ಹಿಂದುಳಿದ ವರ್ಗಗಳು (ಒಬಿಸಿ) ಎಂದು ಘೋಷಿಸುವ ಅಧಿಕಾರ ರಾಜ್ಯಗಳಿಗಿಲ್ಲ ಎಂದು ಮೇ 5ರಂದು ನೀಡಿದ ತೀರ್ಪಿನಲ್ಲಿ ಹೇಳಿತ್ತು.

ಈ ತೀರ್ಪು ಮರುಪರಿಶೀಲಿಸುವಂತೆ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನೂ ವಜಾಗೊಳಿಸಿತ್ತು.

ಸುಪ್ರೀಂ ಕೋರ್ಟ್‌ನ ತೀರ್ಪಿನ ನಂತರ, ಸಂವಿಧಾನಕ್ಕೆ ಮತ್ತೆ ತಿದ್ದುಪಡಿ ತರಲು ಸರ್ಕಾರವು ಮುಂದಾಗಿದೆ. ಆ ಭಾಗವಾಗಿ 127ನೇ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದೆ.

ಒಕ್ಕೂಟ ವ್ಯವಸ್ಥೆ ಕಾಯ್ದುಕೊಳ್ಳಲು ಅಗತ್ಯ: 'ದೇಶದ ಒಕ್ಕೂಟ ವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಸಲುವಾಗಿ, ತಮ್ಮದೇ ಆದ ಪ್ರತ್ಯೇಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಬೇಕಿದೆ. ಇದಕ್ಕಾಗಿ ಸಂವಿಧಾನದ 342ನೇ ಎ, 338 ಬಿ ಮತ್ತು 366ನೇ ವಿಧಿಗಳಿಗೆ ತಿದ್ದುಪಡಿ ತರಬೇಕಿದೆ' ಎಂದು ಸಚಿವ ವಿರೇಂದ್ರ ಕುಮಾರ್ ಅವರು ಮಸೂದೆ ಮಂಡನೆ ವೇಳೆ ಹೇಳಿದ್ದಾರೆ.

ಮಸೂದೆಯ ಮೇಲೆ ಲೋಕಸಭೆಯಲ್ಲಿ ಇನ್ನಷ್ಟೇ ಚರ್ಚೆ ನಡೆಯಬೇಕಿದೆ. ಲೋಕಸಭೆಯಲ್ಲಿ ಮಂಗಳವಾರ ಈ ಮಸೂದೆಗೆ ಅಂಗೀಕಾರ ದೊರೆಯುವ ನಿರೀಕ್ಷೆ ಇದೆ.

ರಾಜ್ಯಸಭೆ ಯಲ್ಲಿ ಈ ಮಸೂದೆಯನ್ನು ಸರ್ಕಾರ ಇನ್ನೂ ಮಂಡಿಸಿಲ್ಲ. ಎರಡೂ ಸದನ ಗಳಲ್ಲಿ ಮಸೂದೆಗೆ ಅಂಗೀಕಾರ ದೊರೆತ ನಂತರ, ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಲಾಗುತ್ತದೆ.

ನ್ಯಾಯಾಧೀಶರ ಹತ್ಯೆ ಪ್ರಕರಣದ ತನಿಖೆ: ಹೈಕೋರ್ಟ್ ಮೇಲ್ವಿಚಾರಣೆ

ನವದೆಹಲಿ (ಪಿಟಿಐ): 'ಧನಬಾದ್ ನ್ಯಾಯಾಧೀಶರ ಹತ್ಯೆ ಬಗ್ಗೆ ಸಿಬಿಐ ನಡೆಸುತ್ತಿರುವ ತನಿಖೆಯ ಪ್ರಗತಿ ಬಗ್ಗೆ ಜಾರ್ಖಂಡ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರು ವಾರಕ್ಕೊಮ್ಮೆ ಮೇಲ್ವಿಚಾರಣೆ ನಡೆಸಲಿದ್ದಾರೆ' ಎಂದು ಸುಪ್ರೀಂಕೋರ್ಟ್ ಸೋಮವಾರ ಹೇಳಿದೆ.

'ಈ ಪ್ರಕರಣ ಸಂಬಂಧ ಹೈಕೋರ್ಟ್‌ಗೆ ಪ್ರತಿ ವಾರ ವರದಿ ಯನ್ನು ಸಲ್ಲಿಸಬೇಕು. ಅದನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ಪರಿಶೀಲಿಸಲಿದೆ' ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ವಿನೀತ್ ಶರಣ್, ಸೂರ್ಯಕಾಂತ್ ಅವರನ್ನೊಳಗೊಂಡ ಪೀಠವು ಸಿಬಿಐಗೆ ಸೂಚಿಸಿದೆ.

ಧನಬಾದ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಉತ್ತಮ್ ಆನಂದ್ ಅವರನ್ನು ಜುಲೈ 28ರಂದು ಬೆಳಿಗ್ಗೆ ವಾಯುವಿಹಾರಕ್ಕೆ ತೆರಳಿದ್ದಾಗ ಹಿಂದಿನಿಂದ ಬಂದ ವಾಹನವೊಂದು ಡಿಕ್ಕಿ ಹೊಡೆದಿತ್ತು. ಆನಂದ್ ಅವರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದರು.

ಪಿಎಂ ಕಿಸಾನ್: ಹಣ ಬಿಡುಗಡೆ

ನವದೆಹಲಿ (ಪಿಟಿಐ): 'ಪಿಎಂ ಕಿಸಾನ್ ಯೋಜನೆಯಡಿ ಸೋಮವಾರ ಸುಮಾರು 9.75 ಕೋಟಿ ಫಲಾನುಭವಿ ರೈತರ ಖಾತೆಗಳಿಗೆ ₹ 19,500 ಕೋಟಿ ವರ್ಗಾಯಿಸಲಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ.

ಈ ಕುರಿತು ನಡೆದ ವರ್ಚುವಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರೈತರ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗಿರುವ ಹಣವು ಅವರಿಗೆ ಉಪಯುಕ್ತವಾಗಲಿದೆ. ಪಿಎಂ ಕಿಸಾನ್ ಯೋಜನೆಯಡಿ ಇದುವರೆಗೆ ಸುಮಾರು ₹ 1.6 ಲಕ್ಷ ಕೋಟಿ ವರ್ಗಾಯಿಸಲಾಗಿದೆ ಎಂದರು.

ಐಸಿಎಂಆರ್, ಕೇಂದ್ರ ಸರ್ಕಾರಕ್ಕೆ ನೋಟಿಸ್

ಒಂದನೇ ಪುಟದಿಂದ

ರಾಷ್ಟ್ರೀಯ ತಾಂತ್ರಿಕ ಸಲಹಾ ಮಂಡಳಿ ಮಾಜಿ ಸದಸ್ಯ ಡಾ. ಜಾಕೋಬ್ ಪುಲಿಯೆಲ್ ಅರ್ಜಿ ಸಲ್ಲಿಸಿದ್ದಾರೆ. ಲಸಿಕೆ ಪಡೆದ ಬಳಿಕ ಉಂಟಾಗುವ ಅಡ್ಡಿಪರಿಣಾಮ ಪ್ರಕರಣಗಳ ವರದಿ ಮಾಡುವ ಬಗ್ಗೆಯೂ ಅರ್ಜಿಯಲ್ಲಿ ಮಾಹಿತಿ ಕೋರಲಾಗಿದೆ.

'ತಮ್ಮ ಕ್ಲಿನಿಕಲ್ ಪರೀಕ್ಷೆಯ ದತ್ತಾಂಶಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸದಿದ್ದರೂ ಲಸಿಕೆ ತೆಗೆದುಕೊಳ್ಳುವಂತೆ ಜನರಿಗೆ ಒತ್ತಾಯಿಸಲಾಗುತ್ತಿದೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವನ್ನು ವೈದ್ಯಕೀಯ ಪ್ರಯೋಗ ಪೂರ್ಣಗೊಳಿಸದೇ ಅಥವಾ ದತ್ತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸದೇ ಜಾರಿಗೆ ತರಲಾಗಿದೆ. ದೇಶದ ಜನಸಂಖ್ಯೆಯ ಮೂರನೇ ಎರಡರಷ್ಟು ಜನರು ಈಗಾಗಲೇ ಕೋವಿಡ್‌ಗೆ ಒಡ್ಡಿಕೊಂಡಿದ್ದಾರೆ. ಹೀಗಾಗಿ ಅವರಿಗೆ ಲಸಿಕೆ ಹಾಕುವುದು ಪ್ರತಿಕೂಲ ಪರಿಣಾಮಗಳಿಗೆ ಕಾರಣವಾಗಬಹುದು' ಎಂದು ವರದಿಯನ್ನು ಉಲ್ಲೇಖಿಸಿ ಪ್ರಶಾಂತ್ ಭೂಷಣ್ ವಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೋರ್ಟ್, 'ದೇಶದ ಶೇ 50ಕ್ಕಿಂತ ಹೆಚ್ಚು ಜನರಿಗೆ ಈಗಾಗಲೇ ಲಸಿಕೆ ಹಾಕಲಾಗಿದೆ. ಈಗ ವೈದ್ಯಕೀಯ ಪ್ರಯೋಗದ ವರದಿ ಕೇಳಿದರೆ, ಅವರ ಮನಸ್ಸಿನಲ್ಲಿ ಗೊಂದಲ ಏರ್ಪಡುವುದಿಲ್ಲವೇ? ಸಾರ್ವಜನಿಕರ ದೃಷ್ಟಿಯಿಂದ ಈ ವಿಚಾರದ ಬಗ್ಗೆ ಯೋಚಿಸಿದ್ದೀರಾ' ಎಂದು ಪ್ರಶ್ನಿಸಿತು.

'ದೇಶದಲ್ಲಿ ಇನ್ನೂ 4 ಲಕ್ಷ ಸಕ್ರಿಯ ಕೋವಿಡ್ ಪ್ರಕರಣಗಳಿವೆ. ಕಳೆದ 100 ವರ್ಷಗಳಲ್ಲಿ ಪ್ರಪಂಚವು ಈ ರೀತಿಯ ಸಾಂಕ್ರಾಮಿಕ ರೋಗವನ್ನು ಎದುರಿಸಿರಲಿಲ್ಲ. ಮೇಲಾಗಿ ಲಸಿಕೆಗಳಿಗೆ ಭಾರಿ ಬೇಡಿಕೆಯಿದೆ' ಎಂದು ಕೋರ್ಟ್ ಹೇಳಿತು.

'ಸಾರ್ವಜನಿಕರ ಹಿತದೃಷ್ಟಿಯಿಂದ ಈ ವಿಷಯ ಅತ್ಯಂತ ಮಹತ್ವದ್ದಾಗಿರುವುದರಿಂದ ತಾವು ಅರ್ಜಿ ಸಲ್ಲಿಸಿದ್ದಾಗಿ ಹೇಳಿದ ಭೂಷಣ್, ಇದು ಕೋಟ್ಯಂತರ ಜನರ ಮೇಲೆ ಪರಿಣಾಮ ಬೀರುವಂಥದ್ದಾಗಿದೆ' ಎಂದರು. ಇದು ಲಸಿಕೆ ವಿರೋಧಿಸಿ ಹಾಕಿದ ಅರ್ಜಿಯಂತೂ ಅಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ, ಲಸಿಕೆ ಪಡೆಯಲು ಬಲವಂತ ಹಾಗೂ ಕಡ್ಡಾಯ ಮಾಡಿರುವುದಕ್ಕೆ ಹಾಗೂ ಲಸಿಕೆ ಪಡೆಯದವರ ಸಂಚಾರದ ಮೇಲೆ ನಿರ್ಬಂಧ ಹೇರಿರುವ ವಿಷಯವೂ ಇಲ್ಲಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಹಾಗೂ ಇತರ ಸಂಸ್ಥೆಗಳಿಗೆ ನೋಟಿಸ್ ನೀಡಿದ ನ್ಯಾಯಾಲಯವು, ಇದಕ್ಕೆ ನಾಲ್ಕು ವಾರಗಳಲ್ಲಿ ಉತ್ತರಿಸುವಂತೆ ಸೂಚಿಸಿತು.

ಎನ್‌ಟಿಎಫ್ ಶಿಫಾರಸುಗಳ ಅನುಷ್ಠಾನ: ವರದಿ ಸಲ್ಲಿಸಲು ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

ನವದೆಹಲಿ: ಕೋವಿಡ್–19ನ ಸಂಭಾವ್ಯ ಮೂರನೇ ಅಲೆಯನ್ನು ಎದುರಿಸಲು ಕೇಂದ್ರ ಸರ್ಕಾರವು ಏನು ಸಿದ್ಧತೆ ಮಾಡಿಕೊಂಡಿದೆ ಎಂದು ಕೇಳಿರುವ ಸುಪ್ರೀಂ ಕೋರ್ಟ್, ರಾಷ್ಟ್ರೀಯ ಕಾರ್ಯಪಡೆಯ (ಎನ್‌ಟಿಎಫ್) ಶಿಫಾರಸಿನ ಅನ್ವಯ ಕೈಗೊಂಡ ಕ್ರಮಗಳ ಬಗ್ಗೆ ಎರಡು ವಾರಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿದೆ.

ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ವೈದ್ಯಕೀಯ ಆಮ್ಲಜನಕ ಹಂಚಿಕೆ ಮಾಡುವ ಸಂಬಂಧ ನ್ಯಾಯಾಲಯವು ಈ ಹಿಂದೆ ರಾಷ್ಟ್ರೀಯ ಕಾರ್ಯಪಡೆ ನೇಮಿಸಿತ್ತು.

ಸದ್ಯದ ತುರ್ತು ಅಗತ್ಯಗಳನ್ನು ಹಾಗೂ ಭವಿಷ್ಯದಲ್ಲಿ ಎದುರಾಗಬಹುದಾದ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ, ಕಾರ್ಯಪಡೆಯು ನೀಡಿರುವ ಶಿಫಾರಸುಗಳನ್ನು ಕೇಂದ್ರ ಸರ್ಕಾರವು ನೀತಿ ನಿರೂಪಣಾ ಹಂತದಲ್ಲಿ ಅನುಷ್ಠಾನಗೊಳಿಸುವುದು ಅನಿವಾರ್ಯ ಎಂದು ಹೇಳಿದೆ.

ಈ ವಿಷಯದ ಮುಂದಿನ ವಿಚಾರಣೆಯನ್ನು ಎರಡು ವಾರಗಳ ನಂತರ ಕೈಗೆತ್ತಿಕೊಳ್ಳುವುದಾಗಿ ತಿಳಿಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್ ಶಾ ಅವರನ್ನೊಳಗೊಂಡ ಪೀಠವು, ಇದನ್ನು ಕೋವಿಡ್ ಸಿದ್ಧತೆ ಕುರಿತು ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸುವ ವಿಷಯಗಳ ಪಟ್ಟಿಯಲ್ಲಿ ಸೇರಿಸಿತು.

157 ವಿದ್ಯಾರ್ಥಿಗಳು 625/ 625

ಒಂದನೇ ಪುಟದಿಂದ

ಒಟ್ಟು 1,28,931 (ಶೇ 16.52) ವಿದ್ಯಾರ್ಥಿಗಳು 90ರಿಂದ 100 ಅಂಕ ಗಳಿಸಿ 'ಎ+' ಗ್ರೇಡ್, 2,50,317 (ಶೇ 32.07) ವಿದ್ಯಾರ್ಥಿಗಳು 80ರಿಂದ 89 ಅಂಕ ಗಳಿಸಿ 'ಎ' ಗ್ರೇಡ್, 2,87,684 (ಶೇ 36.86) ವಿದ್ಯಾರ್ಥಿಗಳು 60ರಿಂದ 79 ಅಂಕ ಪಡೆದು 'ಬಿ' ಗ್ರೇಡ್. ಉಳಿದ (ಶೇ 14.55) ವಿದ್ಯಾರ್ಥಿಗಳು 35ರಿಂದ 59 ಅಂಕ ಪಡೆದು 'ಸಿ' ಗ್ರೇಡ್ ಪಡೆದಿದ್ದಾರೆ.

ಕೃಪಾಂಕ: 35ಕ್ಕಿಂತ ಕಡಿಮೆ ಅಂಕ ಬಂದ ವಿದ್ಯಾರ್ಥಿಗಳಿಗೆ ಕೃಪಾಂಕ (ಗ್ರೇಸ್ ಮಾರ್ಕ್) ನೀಡಿ ಪಾಸ್ ಮಾಡಲಾಗಿದೆ. ಒಟ್ಟು ಶೇ 9 ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲಾಗಿದೆ. 13 ವಿದ್ಯಾರ್ಥಿಗಳಿಗೆ ಗರಿಷ್ಠ 28 ಅಂಕ ಕೃಪಾಂಕ (ಗ್ರೇಸ್ ಮಾರ್ಕ್) ನೀಡಿ ಉತ್ತೀರ್ಣಗೊಳಿಸಲಾಗಿದೆ.

ಎಲ್ಲ ಜಿಲ್ಲೆಗಳಿಗೆ 'ಎ' ಗ್ರೇಡ್: ಪ್ರತಿ ಬಾರಿ ಆಯಾ ಜಿಲ್ಲೆಗಳಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಪ್ರಮಾಣ ಆಧರಿಸಿ ಜಿಲ್ಲೆಗಳಿಗೆ ರ‍್ಯಾಂಕ್ ನೀಡಲಾಗುತ್ತಿತ್ತು. ಈ ಬಾರಿ ಎಲ್ಲ ಜಿಲ್ಲೆಗಳಲ್ಲೂ ಶೇ 100 ಉತ್ತೀರ್ಣ ದಾಖಲಾಗಿದ್ದು, ಎಲ್ಲ ಜಿಲ್ಲೆಗಳು 'ಎ' ಗ್ರೇಡ್ ಪಡೆದಿವೆ.

ಒಬ್ಬಳು ಫೇಲ್: ಪರೀಕ್ಷೆಗೆ ಹಾಜರಾದವರೆಲ್ಲ ಪಾಸ್ ಎಂದು ಶಿಕ್ಷಣ ಇಲಾಖೆ ಹೇಳಿದ್ದರೂ ಖಾಸಗಿಯಾಗಿ ನೋಂದಾಯಿಸಿದ್ದ ಒಬ್ಬ ವಿದ್ಯಾರ್ಥಿನಿಯನ್ನು ಫೇಲ್ ಮಾಡಲಾಗಿದೆ. ಆಕೆ ತಾನು ಪರೀಕ್ಷೆ ಬರೆಯದೆ, ಬೇರೊಬ್ಬಳನ್ನು ಕಳುಹಿಸಿ ಸಿಕ್ಕಿ ಬಿದ್ದಿದ್ದು, ಡಿಬಾರ್ ಮಾಡಲಾಗಿದೆ.

ಅಂಕಿ-ಅಂಶಗಳು

8,76,506 ಪರೀಕ್ಷೆಗೆ ನೋಂದಣಿಯಾದವರು

8,71,443 ಪರೀಕ್ಷೆಗೆ ಹಾಜರಾದವರು

8,71,442 ಉತ್ತೀರ್ಣರಾದವರು

5,063 ಹಾಜರಾಗದೆ ಮುಂದಿನ ಪರೀಕ್ಷೆಗೆ ಹೊಸ ಅಭ್ಯರ್ಥಿಗಳಾಗಿ ಅವಕಾಶ ಪಡೆದವರು

ಮಾಧ್ಯಮವಾರು ವಿದ್ಯಾರ್ಥಿಗಳು

ಕನ್ನಡ	4,56,403
ಇಂಗ್ಲಿಷ್	2,91,086
ಉರ್ದು	22,023
ಮರಾಠಿ	10,591
ತೆಲುಗು	212
ತಮಿಳು	87
ಹಿಂದಿ	140

ವಿಷಯವಾರು ಗರಿಷ್ಠ ಅಂಕ ಪಡೆದವರು

ಪ್ರಥಮ ಭಾಷೆ	25,702
ದ್ವಿತೀಯ ಭಾಷೆ	36,628
ತೃತೀಯ ಭಾಷೆ	36,776
ಗಣಿತ	6,321
ವಿಜ್ಞಾನ	3,649
ಸಮಾಜ ವಿಜ್ಞಾನ	9,367

ನಿಧನ ವಾರ್ತೆ

ಸಮರವೀರ ಗೋಪಾಲ ರಾವ್

ಚೆನ್ನೈ (ಪಿಟಿಐ): 1971ರ ಸಮರ ವೀರ, 'ಮಹಾವೀರ ಚಕ್ರ' ಪುರಸ್ಕೃತ ಕಾಮೊಡೋರ್ (ನೌಕಾಪಡೆಯ ಉನ್ನತ ಅಧಿಕಾರಿ) ಕಾಸರಗೋಡು ಪಟ್ಟಣಶೆಟ್ಟಿ ಗೋಪಾಲ ರಾವ್ (94) ಅವರು ಸೋಮವಾರ ನಿಧನರಾದರು ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

ಅವರು ಭಾನುವಾರವೇ ನಿಧನರಾದರೆಂದು ಮೂಲಗಳು ಈ ಮೊದಲು ಹೇಳಿದ್ದವು. ಆದರೆ, ಸೋಮವಾರ ಇಹಲೋಕ ತ್ಯಜಿಸಿದ್ದಾಗಿ ಸ್ಪಷ್ಟಪಡಿಸಲಾಗಿದೆ.

ನೌಕಾಪಡೆಯ ನಿವೃತ್ತ ಸೇನಾನಿಯಾಗಿದ್ದ ಅವರು ವಯೋಸಹಜ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಅವರಿಗೆ ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ.

ರಾವ್ ಅವರು ವಿಶಿಷ್ಟ ಸೇವಾ ಪದಕಕ್ಕೂ ಭಾಜನರಾಗಿದ್ದರು. ಈಗಿನ ಬಾಂಗ್ಲಾದೇಶವನ್ನು (ಪೂರ್ವ ಪಾಕಿಸ್ತಾನ) ಮುಕ್ತಿಗೊಳಿಸುವ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿ ಅವರು ಪ್ರಮುಖ ಪಾತ್ರ ನಿರ್ವಹಿಸಿದ್ದರು.

'ಆಪರೇಷನ್ ಕ್ಯಾಕ್ಟಸ್ ಲಿಲ್ಲಿ' ಎಂಬ ಕಾರ್ಯಾಚರಣೆಯ ಹೊಣೆ ಹೊತ್ತಿದ್ದ ಪಶ್ಚಿಮ ನೌಕಾಪಡೆಯ ತಂಡವೊಂದರ ನೇತೃತ್ವ ವಹಿಸಿಕೊಂಡಿದ್ದ ಗೋಪಾಲ ರಾವ್ ಅವರು, ಕರಾಚಿ ಬಂದರಿನ ಮೇಲೆ ಅಕ್ರಮಣ ನಡೆಸಿದ್ದರು.

ವಾಯುದಾಳಿ, ಜಲಾಂತರ್ಗಾಮಿಗಳ ಭೀತಿ ಮತ್ತು ಇನ್ನಿತರೆ ಯಾವುದೇ ದಾಳಿಗಳನ್ನೂ ಲೆಕ್ಕಿಸದೇ, 1971ರ ಡಿ.4ರಂದು ರಾತ್ರಿ ನೌಕಾದಳದ ಒಂದು ಗುಂಪನ್ನು ಪಾಕಿಸ್ತಾನದ ಜಲಪ್ರದೇಶಕ್ಕೆ ಕೊಂಡೊಯ್ದಿದ್ದ ರಾವ್, ಕರಾಚಿ ಬಂದರನ್ನು ಉಡಾಯಿಸಿದ್ದರು.

ನಟ ಅನುಪಮ್ ಶ್ಯಾಮ್ ಇನ್ನಿಲ್ಲ



ಮುಂಬೈ: ಬಾಲಿವುಡ್‌ನ ಖ್ಯಾತ ನಟ ಅನುಪಮ್ ಶ್ಯಾಮ್ (63), ಬಹುಅಂಗಾಂಗ ವೈಫಲ್ಯದಿಂದ ಸೋಮವಾರ ಮುಂಜಾನೆ ನಿಧನರಾಗಿದ್ದಾರೆ.

ಮೂತ್ರಪಿಂಡದ ಸೋಂಕಿನಿಂದ ಬಳಲುತ್ತಿದ್ದ ಅನುಪಮ್ ಅವರನ್ನು ಕಳೆದ ವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಕಿರುತೆರೆಯ 'ಮನ್ ಕೀ ಅವಾಜ್ ಪ್ರತಿಜ್ಞಾ' ಧಾರಾವಾಹಿಯ 'ಠಾಕೂರ್ ಸಜ್ಜನ್ ಸಿಂಗ್' ಪಾತ್ರದ ಮುಖಾಂತರ ಅನುಪಮ್ ಖ್ಯಾತಿ ಪಡೆದಿದ್ದರು. 2009ರಲ್ಲಿ ಸ್ಟಾರ್‌ಪ್ಲಸ್ ವಾಹಿನಿಯಲ್ಲಿ ಇದು ಪ್ರಸಾರವಾಗಿತ್ತು. ಇತ್ತೀಚೆಗೆ ಈ ಧಾರಾವಾಹಿಯ ಎರಡನೇ ಆವೃತ್ತಿಗಾಗಿ ಶೂಟಿಂಗ್ ಪ್ರಾರಂಭಿಸಿದ್ದರು.

ಮೂರು ದಶಕಗಳ ಸಿನಿಮಾ ಪಯಣದಲ್ಲಿ 'ಸ್ಲಮ್‌ಡಾಗ್ ಮಿಲಿಯನರ್', 'ಸತ್ಯ', 'ದಿಲ್ ಸೇ', 'ಲಗಾನ್', 'ರಕ್ತ ಚರಿತ್ರ', 'ಗೋಲ್‌ಮಾಲ್' ಮುಂತಾದ 40ಕ್ಕೂ ಅಧಿಕ ಚಿತ್ರಗಳಲ್ಲಿ ಅನುಪಮ್ ಅಭಿನಯಿಸಿದ್ದಾರೆ.

ಮೂತ್ರಕೋಶದ ಸಮಸ್ಯೆಯಿಂದ ಬಳಲುತ್ತಿದ್ದ ಅನುಪಮ್ ಅವರು ಕಳೆದ ವರ್ಷ ಡಯಾಲಿಸಿಸ್ ನಡೆಸುವ ಸಂದರ್ಭದಲ್ಲಿ ಕುಸಿದುಬಿದ್ದಿದ್ದರು. ಅವರ ಚಿಕಿತ್ಸೆಗಾಗಿ ಚಿತ್ರರಂಗದ ನೆರವನ್ನು ಕುಟುಂಬದ ಸದಸ್ಯರು ಕೋರಿದ್ದರು.



ಟೋಕಿಯೊದಿಂದ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೋಮವಾರ ಬಂದಿಳಿದ ಭಾರತದ ಕ್ರೀಡಾಪಟುಗಳನ್ನು ಸ್ವಾಗತಿಸಲು ಸೇರಿದ್ದ ಜನಸ್ತೋಮ



ಪದಕ ಪ್ರದರ್ಶಿಸಿ ಸಂಭ್ರಮಿಸಿದ ಬಾಕ್ಸಿಂಗ್ ತಾರೆ ಲವ್ಲಿನಾ ಬೊರ್ಗೊಹೈನ್ —ಪಿಟಿಐ ಚಿತ್ರಗಳು

ಟೋಕಿಯೊದಿಂದ ಮರಳಿದ ಭಾರತದ ಅಥ್ಲೀಟ್‌ಗಳು: ನವದೆಹಲಿ ವಿಮಾನ ನಿಲ್ದಾಣದಲ್ಲಿ ಸಂಭ್ರಮ

ಒಲಿಂಪಿಕ್ಸ್ ವೀರರಿಗೆ ಭವ್ಯ ಸ್ವಾಗತ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದು ದೇಶದ ಹಿರಿಮೆ ಹೆಚ್ಚಿಸಿದ್ದ ಕ್ರೀಡಾಪಟುಗಳು ಸೋಮವಾರ ತವರಿಗೆ ಮರಳಿದರು. ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಚಿನ್ನದ ಹುಡುಗ ನೀರಜ್ ಚೋಪ್ರಾ, ಪುರುಷರ ಮತ್ತು ಮಹಿಳಾ ಹಾಕಿ ತಂಡಗಳ ಸದಸ್ಯರು ಹಾಗೂ ಇತರ ಕ್ರೀಡಾಪಟುಗಳು ಟೋಕಿಯೊದಿಂದ ಹಿಂತಿರುಗುತ್ತಿದ್ದಾರೆ ಎಂಬ ವಿಷಯ ಗೊತ್ತಾದ ಕೂಡಲೇ ವಿಮಾನ ನಿಲ್ದಾಣದ ಹೊರಭಾಗದಲ್ಲಿ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು. ಅವರೆಲ್ಲಾ ಪದಕ ವೀರರ ಹೆಸರುಗಳನ್ನು ಹೇಳುತ್ತಾ ಜಯಘೋಷ ಮೊಳಗಿಸಿದರು. ಡೋಲು ಮತ್ತು ಇತರ ವಾದ್ಯಗಳ ಲಯಕ್ಕೆ ತಕ್ಕಂತೆ ನೃತ್ಯ ಮಾಡಿದ ಕ್ರೀಡಾಪ್ರೇಮಿಗಳು ತ್ರಿವರ್ಣ ಧ್ವಜ ಬೀಸಿದರು.

ಭಾರತೀಯ ಕ್ರೀಡಾ ಪ್ರಾಧಿಕಾರದ (ಸಾಯ್) ಪ್ರಧಾನ ನಿರ್ದೇಶಕ ಸಂದೀಪ್ ಪ್ರಧಾನ್ ನೇತೃತ್ವದ ಅಧಿಕಾರಿಗಳ ತಂಡವು ಕ್ರೀಡಾಪಟುಗಳಿಗೆ ಹೂಗುಚ್ಛ ನೀಡಿ ಬರಮಾಡಿಕೊಂಡಿತು. ಭಾರತೀಯ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಮುಖ್ಯಸ್ಥ ಆದಿಲ್ ಸುಮರಿವಾಲಾ ಕೂಡ ಜೊತೆಗಿದ್ದರು.

ಹೊರಭಾಗದಲ್ಲಿ ಭಾರಿ ಸಂಖ್ಯೆಯಲ್ಲಿ ಜನ ನೆರೆದಿರುವುದನ್ನು ಮನಗಂಡ ವಿಮಾನ ನಿಲ್ದಾಣದ ಸಿಬ್ಬಂದಿ, ಕ್ರೀಡಾಪಟುಗಳನ್ನು ಬೇರೊಂದು ಮಾರ್ಗದ ಮೂಲಕ ಹೊರಗೆ ಕಳುಹಿಸಿದರು. ನಿಲ್ದಾಣದಲ್ಲಿದ್ದವರ ಪೈಕಿ ಅನೇಕರು ನೀರಜ್ ಜೊತೆ ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದರು. ಅವರನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಹರಸಾಹಸಪಟ್ಟರು.

ಕೋವಿಡ್ ಹಿನ್ನೆಲೆಯಲ್ಲಿ ಕ್ರೀಡಾಪಟುಗಳು ತಾವು ಪಾಲ್ಗೊಳ್ಳುವ ಸ್ಪರ್ಧೆಯ ಪದಕ ಪ್ರದಾನ ಮುಗಿದ 48 ಗಂಟೆಗಳೊಳಗೆ ಕ್ರೀಡಾಗ್ರಾಮ ತೊರೆಯಬೇಕೆಂದು ಒಲಿಂಪಿಕ್ಸ್ ಆಯೋಜಕರು ಸೂಚಿಸಿದ್ದರು. ಹೀಗಾಗಿ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಮತ್ತು ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಕೆಲದಿನಗಳ ಹಿಂದೆಯೇ ತವರಿಗೆ ಬಂದಿದ್ದರು.

ಹೋಟೆಲ್‌ನಲ್ಲೂ ಜನಜಂಗುಳಿ: ವಿಮಾನ ನಿಲ್ದಾಣದಿಂದ ಕ್ರೀಡಾಪಟುಗಳನ್ನು ಅಶೋಕ ಹೋಟೆಲ್‌ಗೆ ಕರೆದುಕೊಂಡು ಹೋಗಲಾಯಿತು. ಹೋಟೆಲ್‌ನ ಲಾಬಿಯಲ್ಲೂ ಜನರು ಗುಂಪುಸೇರಿ ಜಯಘೋಷ ಮೊಳಗಿಸಿದರು.

ಮೊದಲು ಕೇಕ್ ಕತ್ತರಿಸಿ ಕ್ರೀಡಾಪಟುಗಳು ಸಂತೋಷ ವ್ಯಕ್ತಪಡಿಸಿದರು. ನಂತರ ಪದಕ ವಿಜೇತರು ಮತ್ತು ಅವರ ಕೋಚ್‌ಗಳನ್ನು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಸನ್ಮಾನಿಸಿದರು. ಮಾಜಿ ಕ್ರೀಡಾ ಸಚಿವ ಕಿರಣ್ ರಿಜಿಜು ಇದ್ದರು.

‘ಇದು ಭಾರತದ ಚಿನ್ನದ ಪದಕ’

‘ಚಾಂಪಿಯನ್ ಆದ ಮರುದಿನ ದೇಹದಲ್ಲಿ ವಿಪರೀತ ನೋವು ಕಾಣಿಸಿಕೊಂಡಿತ್ತು. ಆದರೂ ದೇಶಕ್ಕಾಗಿ ಚಿನ್ನದ ಪದಕ ಗೆದ್ದ ಖುಷಿಯಲ್ಲಿ ಅದನ್ನು ಮರೆತೆ’ ಎಂದು ನೀರಜ್ ಚೋಪ್ರಾ ಸನ್ಮಾನ ಸಮಾರಂಭದಲ್ಲಿ ಹೇಳಿದರು.

‘ಫೈನಲ್‌ನಲ್ಲಿ ಎರಡನೇ ಪ್ರಯತ್ನದ ನಂತರ ಖುಷಿಯಾಗಿತ್ತು. ಆ ಪ್ರಯತ್ನದಲ್ಲಿ ಪದಕ ಗೆಲ್ಲುವಷ್ಟು ದೂರ ಜಾವೆಲಿನ್ ಸಾಗಿತು ಎಂದು ತಿಳಿದಿತ್ತು. ಟೋಕಿಯೊದಲ್ಲಿ ಗೆದ್ದ ಪದಕ ನನ್ನೊಬ್ಬನದಲ್ಲ. ಅದು ದೇಶಕ್ಕೆ ಸಲ್ಲಬೇಕಾದದ್ದು’ ಎಂದು ಅವರು ಹೇಳಿದರು.

‘ಉದ್ದ ಕೂದಲು ಬಿಡುವುದು ನನಗಿಷ್ಟ. ಆದರೆ ಅದು ಸ್ಪರ್ಧೆಯ ಸಂದರ್ಭದಲ್ಲಿ ಕಿರಿಕಿರಿ ಮಾಡುತ್ತದೆ. ಆದ್ದರಿಂದ ಕತ್ತರಿಸಿಬಿಟ್ಟೆ’ ಎಂದರು.

‘ಎಂಟು ವರ್ಷ ಮನೆಯ ಕಡೆ ತಿರುಗಿಯೂ ನೋಡಿಲ್ಲ’

ನವದೆಹಲಿ (ಪಿಟಿಐ): ‘ಬರೋಬ್ಬರಿ ಎಂಟು ವರ್ಷ ಮನೆಯಿಂದ ದೂರ ಇದ್ದೆ. ಅಪ್ಪ, ಅಮ್ಮ, ಕುಟುಂಬದವರ ಕಷ್ಟ ಸುಖದಲ್ಲಿ ಭಾಗಿಯಾಗಲೂ ಆಗಿರಲಿಲ್ಲ. ದೂರದಿಂದಲೇ ಎಲ್ಲವನ್ನು ನೋಡಬೇಕಾಗಿತ್ತು. ಇದು ನಾನು ಮಾಡಿದ ಬಹುದೊಡ್ಡ ತ್ಯಾಗ...’

ಒಲಿಂಪಿಕ್ಸ್‌ನ ಮಹಿಳೆಯರ ಬಾಕ್ಸಿಂಗ್‌ನಲ್ಲಿ ಕಂಚಿನ ಸಾಧನೆ ಮಾಡಿರುವ ಲವ್ಲಿನಾ ಬೊರ್ಗೊಹೈನ್ ಅವರ ನುಡಿಗಳಿವು.

‘ಹೊರಗಡೆ ಸುತ್ತಾಡಬೇಕು, ನೋಡಿದ್ದನ್ನೆಲ್ಲಾ ತಿನ್ನಬೇಕು ಹೀಗೆ ನನ್ನ ವಯೋಮಾನದವರಿಗೆ ಸಾಕಷ್ಟು ಆಸೆಗಳಿರುತ್ತವೆ. ಅದನ್ನೆಲ್ಲಾ ಬದಿಗೊತ್ತಿದ್ದೆ. ಎಂಟು ವರ್ಷಗಳಲ್ಲಿ ಒಂದೇ ಒಂದು ದಿನವೂ ತರಬೇತಿಯಿಂದ ದೂರ ಉಳಿದಿಲ್ಲ. ಕುಳಿತರೂ, ನಿಂತುಕೊಂಡರೂ ಬಾಕ್ಸಿಂಗ್ ಬಗ್ಗೆಯೇ ಯೋಚಿಸುತ್ತಿದ್ದೆ’ ಎಂದು 23 ವರ್ಷದ ಲವ್ಲಿನಾ, ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಟೋಕಿಯೊ ಕೂಟ ಮುಗಿದ ಅಧ್ಯಾಯ. 2024ರಲ್ಲಿ ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ನಿಗದಿಯಾಗಿದೆ. ಅಲ್ಲಿ ಪದಕ ಗೆಲ್ಲಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು. ಈ ಬಾರಿ ಏನೆಲ್ಲಾ ತಪ್ಪುಗಳನ್ನು ಮಾಡಿದ್ದೇನೆ ಎಂಬುದನ್ನು ಪತ್ತೆಹಚ್ಚಿ ತಿದ್ದಿಕೊಳ್ಳಬೇಕು. ಜೊತೆಗೆ ಇನ್ನಿತರ ಹೊಸ ತಂತ್ರಗಳನ್ನು ಕಲಿಯಬೇಕು. ಅದಕ್ಕೂ ಮುನ್ನ ಚಿಕ್ಕ ಬಿಡುವು ಪಡೆಯುತ್ತೇನೆ’ ಎಂದಿದ್ದಾರೆ.

‘ಒಲಿಂಪಿಕ್ಸ್‌ಗೆ ನಾಲ್ಕು ತಿಂಗಳು ಇದ್ದಾಗ ಸ್ಟ್ರೆಂತ್ ಮತ್ತು ಕಂಡಿಷನಿಂಗ್‌ಗೆ ಒತ್ತು ನೀಡಿದ್ದೆ. ಈ ಕೆಲಸ ನಾಲ್ಕು ವರ್ಷವೂ ಆಗಬೇಕು. ಹಾಗಾದಾಗ ಮಾತ್ರ ಒಲಿಂಪಿಕ್ಸ್‌ನಂತಹ ಮಹಾ ಕೂಟದಲ್ಲಿ ಶ್ರೇಷ್ಠ ಸಾಮರ್ಥ್ಯ ತೋರಲು ಸಾಧ್ಯ. ಭಾವನೆಗಳನ್ನೆಲ್ಲಾ ನನ್ನೊಳಗೆ ಕಟ್ಟಿಹಾಕಿದ್ದೆ. ಅಂತರಂಗದಲ್ಲಿ ಹುದುಗಿದ್ದ ಅವು ಪಂದ್ಯ ಗೆದ್ದಾಗ ಒಂದೊಂದಾಗಿಯೇ ಅಭಿವ್ಯಕ್ತಗೊಳ್ಳುತ್ತಿದ್ದವು’ ಎಂದು ಅವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾಗೆ ಬಾಂಗ್ಲಾ ಆಘಾತ

ಢಾಕಾ (ಎಎಫ್‌ಪಿ): ಶಕೀಬ್ ಅಲ್ ಹಸನ್ ನಾಲ್ಕು ವಿಕೆಟ್ ಗಳಿಸಿ ಸಂಭ್ರಮಿಸಿದರು. ಇದರ ಪರಿಣಾಮ ಆಸ್ಟ್ರೇಲಿಯಾ ಟಿ20 ಕ್ರಿಕೆಟ್‌ನಲ್ಲಿ ತನ್ನ ಕನಿಷ್ಠ ರನ್‌ಗಳಿಗೆ ಪತನ ಕಂಡಿತು. ಸೋಮವಾರ ನಡೆದ ಟಿ20 ಸರಣಿಯ 5ನೇ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು 60 ರನ್‌ಗಳಿಂದ ಮಣಿಸಿದ ಬಾಂಗ್ಲಾದೇಶ 4–1ರಲ್ಲಿ ಜಯ ಸಾಧಿಸಿತು.

123 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ 13.4 ಓವರ್‌ಗಳಲ್ಲಿ 62 ರನ್‌ಗಳಿಗೆ ಪತನಗೊಂಡಿತು. ಸ್ಪಿನ್ನರ್ ಶಕೀಬ್ ಒಂಬತ್ತು ರನ್‌ಗಳಿಗೆ 4 ವಿಕೆಟ್ ಗಳಿಸಿದರು. ಮೊಹಮ್ಮದ್ ಸೈಫುದ್ದೀನ್ 2 ವಿಕೆಟ್ ಉರುಳಿಸಿದರು. ಆಸ್ಟ್ರೇಲಿಯಾದ ಈ ಹಿಂದಿನ ಕನಿಷ್ಠ ಮೊತ್ತ 79 ರನ್ ಆಗಿತ್ತು(2005).

ಬೆಂಗಳೂರಿನಲ್ಲಿ ನಿಗದಿಯಾಗಿದ್ದ ಬ್ಯಾಡ್ಮಿಂಟನ್ ಟೂರ್ನಿ ಮುಂದಕ್ಕೆ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ನಿಗದಿಯಾಗಿದ್ದ ಪುರುಷರ ಮತ್ತು ಮಹಿಳೆಯರ ಸೀನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯನ್ನು ಕೋವಿಡ್‌ನಿಂದಾಗಿ ಮುಂದೂಡಲಾಗಿದೆ.

ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಸೋಮವಾರ ಈ ವಿಷಯ ಪ್ರಕಟಿಸಿದೆ. ಈ ಋತುವಿನ ಮೊದಲ ಟೂರ್ನಿಯಾಗಿದ್ದ ಇದು ಆಗಸ್ಟ್ 27ರಿಂದ ಸೆಪ್ಟೆಂಬರ್ 3ರವರೆಗೆ ನಡೆಯಬೇಕಿತ್ತು.

‘ಕರ್ನಾಟಕ ಸರ್ಕಾರವು ಟೂರ್ನಿ ಆಯೋಜಿಸಲು ಅನುಮತಿ ನಿರಾಕರಿಸಿದೆ. ಹೀಗಾಗಿ ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲು ತೀರ್ಮಾನಿಸಿದ್ದೇವೆ’ ಎಂದು ಬಿಎಐ ಮಹಾ ಕಾರ್ಯದರ್ಶಿ ಅಜಯ್ ಸಿಂಘಾನಿಯಾ ತಿಳಿಸಿದ್ದಾರೆ.

ಏಪ್ರಿಲ್‌ನಲ್ಲೇ ಈ ಋತುವಿನ ಬ್ಯಾಡ್ಮಿಂಟನ್ ಟೂರ್ನಿಗಳನ್ನು ನಡೆಸಲು ಬಿಎಐ ನಿರ್ಧರಿಸಿತ್ತು. ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಈ ನಿರ್ಧಾರವನ್ನು ಕೈಬಿಟ್ಟಿತ್ತು.

ಅಶ್ವಿನಿ–ಸಿಕ್ಕಿ ರನ್ನರ್ಸ್ ಅಪ್

ಎಸ್ಬರ್ಗ್, ಡೆನ್ಮಾರ್ಕ್ (ಪಿಟಿಐ): ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ಸಿಕ್ಕಿ ರೆಡ್ಡಿ ಅವರು ಡೆನ್ಮಾರ್ಕ್ ಮಾಸ್ಟರ್ಸ್ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದ್ದಾರೆ.

ಮಹಿಳಾ ಡಬಲ್ಸ್ ವಿಭಾಗದಲ್ಲಿ ಕಣಕ್ಕಿಳಿದಿದ್ದ ಈ ಜೋಡಿ ಫೈನಲ್ ಹಣಾಹಣಿಯಲ್ಲಿ 21–15, 19–21, 14–21ರಿಂದ ಡೆನ್ಮಾರ್ಕ್‌ನ ಅಮೆಲಿ ಮಗೆಲುಂಡ್ ಮತ್ತು ಫ್ರೆಜಾ ರಾವ್ನ್ ಎದುರು ಸೋತಿತು.



ಅಶ್ವಿನಿ ಪೊನ್ನಪ್ಪ (ಎಡ) ಮತ್ತು ಸಿಕ್ಕಿ

ಕರ್ನಾಟಕದ ಅಶ್ವಿನಿ ಮತ್ತು ಹೈದರಾಬಾದ್‌ನ ಸಿಕ್ಕಿ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದರು.

ಕ್ವಾರ್ಟರ್‌ಫೈನಲ್‌ಗೆ ಅಗ್ನಿಪುತ್ರ

ಬೆಂಗಳೂರು: ಹರೀಶ್‌ಕುಮಾರ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಅಗ್ನಿಪುತ್ರ ಎಫ್‌ಸಿ ತಂಡವು ಕೆಎಸ್‌ಎಫ್‌ಎ– ಬಿಡಿಎಫ್‌ಎ ಸಿ ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಸೋಮವಾರ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಗ್ನಿಪುತ್ರ ತಂಡವು 4–2ರಿಂದ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ತಂಡವನ್ನು ಮಣಿಸಿತು. ಹರೀಶ್‌ಕುಮಾರ್ ನಾಲ್ಕು ಮತ್ತು 42ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಪ್ರೇಮ್ (7ನೇ ನಿ.) ಹಾಗೂ ಪ್ರಮೋದ್ ಕುಮಾರ್ (16ನೇ ನಿ.) ತಲಾ ಒಂದು ಗೋಲು ಹೊಡೆದರು. ಲೆಜೆಂಡ್ಸ್ ಪರ ದಿನಕರಣ್ (43ನೇ ನಿ.) ಮತ್ತು ನಿರ್ಮಲ್‌ಕುಮಾರ್ (52ನೇ ನಿ. ಪೆನಾಲ್ಟಿ) ಗೋಲು ದಾಖಲಿಸಿದರು.

16ರ ಘಟ್ಟದ ಮತ್ತೊಂದು ಹಣಾಹಣಿಯಲ್ಲಿ ರೊನಾಲ್ಡೊ ಎಫ್‌ಸಿ 1–0ಯಿಂದ ಅಲ್ ಫತೇಹ್ ಎದುರು ಗೆದ್ದಿತು. ಅಜಲ್ ವಿ. 42ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಮಂಗಳವಾರ ನಡೆಯುವ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮಹೇಶ್ ರಾಜ್ ಎಫ್‌ಸಿ–ಬೆಂಗಳೂರು ಸ್ಟ್ರೈಕರ್ಸ್ ಎಫ್‌ಸಿ ಸೆಣಸಲಿವೆ.

ಭಾರತ ಫುಟ್‌ಬಾಲ್ ತಂಡದ ತರಬೇತಿ ಕೋಲ್ಕತ್ತದಲ್ಲಿ

ನವದೆಹಲಿ (ಪಿಟಿಐ): ‘ಸಿಟಿ ಆಫ್ ಜಾಯ್’ ಖ್ಯಾತಿಯ ಕೋಲ್ಕತ್ತದಲ್ಲಿ 15 ವರ್ಷಗಳ ನಂತರ ಭಾರತ ಫುಟ್‌ಬಾಲ್ ತಂಡದ ತರಬೇತಿ ಶಿಬಿರ ಆಯೋಜಿಸಲಾಗಿದೆ.

‘ಮುಂದಿನ ತಿಂಗಳು ನಡೆಯುವ ಅಂತರರಾಷ್ಟ್ರೀಯ ಸೌಹಾರ್ದ ಪಂದ್ಯಗಳಿಗೆ ಸಿದ್ಧತೆ ಕೈಗೊಳ್ಳುವ ಸಲುವಾಗಿ ಈ ಶಿಬಿರ ಹಮ್ಮಿಕೊಳ್ಳಲಾಗಿದೆ. ಸಂಭಾವ್ಯ ತಂಡದಲ್ಲಿ ಸ್ಥಾನ ಪಡೆದಿರುವ 23 ಆಟಗಾರರು ಹಾಗೂ ನೆರವು ಸಿಬ್ಬಂದಿ ಇದೇ 15ರಂದು ಕೋಲ್ಕತ್ತಕ್ಕೆ ಬಂದಿಳಿಯಲಿದ್ದಾರೆ. ಇದೇ 16ರಿಂದ ಶಿಬಿರ ಶುರುವಾಗಲಿದೆ. ಇದು ಸಂಪೂರ್ಣವಾಗಿ ಬಯೋ ಬಬಲ್ ವಾತಾವರಣದಲ್ಲೇ ನಡೆಯಲಿದೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಪ್ರಕಟಣೆ ತಿಳಿಸಿದೆ. ಭಾರತ ತಂಡವು 2006ರಲ್ಲಿ ಕೊನೆ ಯದಾಗಿ ಕೋಲ್ಕತ್ತದಲ್ಲಿ ತರಬೇತಿ ನಡೆಸಿತ್ತು.

‘ಬೆಂಗಳೂರು ಎಫ್‌ಸಿ ಮತ್ತು ಎಟಿಕೆ ಮೋಹನ್ ಬಾಗನ್ ಕ್ಲಬ್‌ಗಳು ಎಎಫ್‌ಸಿ ಕಪ್‌ನಲ್ಲಿ ಪಾಲ್ಗೊಳ್ಳಲಿವೆ. ಹೀಗಾಗಿ ಈ ಕ್ಲಬ್‌ಗಳನ್ನು ಪ್ರತಿನಿಧಿಸುವ ಆಟಗಾರರು ತಡವಾಗಿ ಶಿಬಿರ ಸೇರಿಕೊಳ್ಳಲಿದ್ದಾರೆ’ ಎಂದು ಭಾರತ ತಂಡದ ಮುಖ್ಯ ಕೋಚ್ ಇಗರ್ ಸ್ಟಿಮ್ಯಾಕ್ ತಿಳಿಸಿದ್ದಾರೆ.



ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಭಾರತದ ನೀರಜ್ ಚೋಪ್ರಾ ಅವರು ಚಿನ್ನದ ಪದಕ ಗೆದ್ದ ಪ್ರಯುಕ್ತ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ಸಂಭ್ರಮಾಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಭಾರತ ಅಥ್ಲೆಟಿಕ್ಸ್ ತಂಡದ ಆಯ್ಕೆ ಸಮಿತಿ ಸದಸ್ಯ ಉದಯ್ ಕೆ. ಪ್ರಭು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್, ಕಾರ್ಯದರ್ಶಿ ಅನಂತರಾಜು, ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯದರ್ಶಿ ಎ.ರಾಜವೇಲು, ಕೋಚ್‌ಗಳು, ತಾಂತ್ರಿಕ ಅಧಿಕಾರಿಗಳು ಇದ್ದರು.



ಭಾರತ ಫುಟ್‌ಬಾಲ್ ತಂಡದ ಆಟಗಾರರು

ಟೆನಿಸ್: ಪ್ರೀಕ್ವಾರ್ಟರ್‌ಗೆ ರುಹಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಲಭ ಜಯ ಸಂಪಾದಿಸಿದ ಅಗ್ರಶ್ರೇಯಾಂಕದ ಆಟಗಾರರು ಎಐಟಿಎ 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಪ್ರೀಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಳದಲ್ಲಿ ಸೋಮವಾರ ಆರಂಭವಾದ ಟೂರ್ನಿಯ ಬಾಲಕರ ವಿಭಾಗದಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಕರ್ನಾಟಕದ ರುಹಾನ್ ಕೋಮಂದೂರ್ 8–6ರಿಂದ ಶ್ರೇಯಾಂಕ್ ಮಂಜುನಾಥ್ ಎದುರು ಗೆದ್ದರು.

ಬಾಲಕಿಯರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅಹಿದಾ ಸಿಂಗ್ ಅವರು ಇಷ್ಟೇ ಅಂತರದಿಂದ ತಮಿಳುನಾಡಿನ ಬಾನು ಜ್ಞಾನ ಅಶ್ವಿನ್ ಅವರನ್ನು ಮಣಿಸಿದರು. ಟೂರ್ನಿಯಲ್ಲಿ ಕರ್ನಾಟಕದ ಅಹಿದಾಗೆ ಅಗ್ರಶ್ರೇಯಾಂಕ ನೀಡಲಾಗಿದೆ.

ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದ ಮತ್ತೊಂದು ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಶ್ರೀಅಕ್ಷಾ ಪೆನುಮೆಸ್ತಾ ಅವರು 8–7 (6) ರಿಂದ ಕೃತಿಕಾ ರಾಮಮೂರ್ತಿ ಅವರನ್ನು ಪರಾಭವಗೊಳಿಸಿದರು. ದೀರ್ಘ ರ‍್ಯಾಲಿಗಳಿಗೆ ಸಾಕ್ಷಿಯಾದ 15 ಗೇಮ್‌ಗಳ ಈ ಪಂದ್ಯವು ಒಂದು ತಾಸು 27 ನಿಮಿಷಗಳವರೆಗೆ ನಡೆಯಿತು.




ಶ್ರೀಅಕ್ಷಾ ಪೆನುಮೆಸ್ತಾ

ಒಲಿಂಪಿಯನ್ಸ್ ಮಕ್ಕಳಿಗೆ ಶಿಷ್ಯವೇತನ

ಸಿಂಗಾಪುರ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿರುವ ಕ್ರೀಡಾಪಟುಗಳ ಮಕ್ಕಳಿಗೆ ವಿಶೇಷ ಶಿಷ್ಯವೇತನ ನೀಡುವುದಾಗಿ ಸಿಂಗಾಪುರ ಮೂಲದ ಗ್ಲೋಬಲ್ ಇಂಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್ (ಜಿಐಐಎಸ್) ಸೋಮವಾರ ಘೋಷಿಸಿದೆ.

ಶ್ರೀಜೇಶ್‌ಗೆ ₹1 ಕೋಟಿ ಬಹುಮಾನ



ಪಿ.ಆರ್. ಶ್ರೀಜೇಶ್

ತಿರುವನಂತಪುರ (ಪಿಟಿಐ): ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ. ಆರ್. ಶ್ರೀಜೇಶ್ ಅವರಿಗೆ ಅಬುಧಾಬಿಯಲ್ಲಿ ನೆಲೆಸಿರುವ ಭಾರತದ ಉದ್ಯಮಿ ಡಾ.ಶಂಷೇರ್ ವಯಾಲಿಲ್ ಅವರು ₹1 ಕೋಟಿ ನಗದು ಬಹುಮಾನ ಘೋಷಿಸಿದ್ದಾರೆ.

ಒಲಿಂಪಿಕ್ಸ್ ಹಾಕಿಯಲ್ಲಿ ಪುರುಷರ ತಂಡ 41 ವರ್ಷಗಳ ಬಳಿಕ ಪದಕ ಗೆದ್ದು ಇತಿಹಾಸ ಬರೆದಿತ್ತು. ತಂಡದ ಕಂಚಿನ ಸಾಧನೆಯಲ್ಲಿ ಕೇರಳದ ಶ್ರೀಜೇಶ್ ಅವರ ಪಾತ್ರ ಮಹತ್ವದ್ದೆನಿಸಿತ್ತು.

ಬಾಕ್ಸಿಂಗ್ ಟೂರ್ನಿ: ಮನದೀಪ್‌ಗೆ ಗೆಲುವು

ಥಾಂಪಾ, ಫ್ಲೋರಿಡಾ (ಪಿಟಿಐ): ಭಾರತದ ಮನದೀಪ್ ಜಾಂಗ್ರಾ ವೃತ್ತಿಪರ ಬಾಕ್ಸಿಂಗ್‌ನಲ್ಲಿ ಎರಡನೇ ಗೆಲುವು ದಾಖಲಿಸಿದ್ದಾರೆ. ಭಾನುವಾರ ನಡೆದ 61 ಕೆ.ಜಿ.ವಿಭಾಗದ ಲೈಟ್‌ವೇಟ್ ಹಣಾಹಣಿಯಲ್ಲಿ ಮಂದೀಪ್, ಸ್ಥಳೀಯ ಬಾಕ್ಸರ್ ಡೆವೊನ್ ಲಿರಾ ಅವರನ್ನು ಪರಾಭವಗೊಳಿಸಿದರು.

2013ರ ಏಷ್ಯನ್ ಚಾಂಪಿಯನ್‌ಷಿಪ್ ಮತ್ತು 2014ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿಯ ಪದಕ ಗೆದ್ದ ಸಾಧನೆ ಮಾಡಿರುವ 27 ವರ್ಷದ ಮನದೀಪ್, ಈ ವರ್ಷದ ಮಾರ್ಚ್‌ನಲ್ಲಿ ವೃತ್ತಿಪರ ಬಾಕ್ಸಿಂಗ್‌ಗೆ ಅಡಿ ಇಟ್ಟಿದ್ದರು.ಮೊದಲ ಸುತ್ತಿನ ಹಣಾಹಣಿಯಲ್ಲಿ ಮನದೀಪ್, ಅರ್ಜೆಂಟೀನಾದ ಲುಸಿ ಯಾನೊ ರಾಮೊಸ್ ಅವರನ್ನು ಸೋಲಿಸಿದ್ದರು.

ಲಂಡನ್‌ಗೆ ಭಾರತ ತಂಡ; ಲಾರ್ಡ್ಸ್‌ಗೆ ಗಂಗೂಲಿ

ನಾಟಿಂಗ್‌ಹ್ಯಾಂನಲ್ಲೇ ಉಳಿದ ಸೂರ್ಯ, ಪೃಥ್ವಿ ಶಾ; 10 ದಿನ ಕ್ವಾರಂಟೈನ್

ಲಂಡನ್ (ಪಿಟಿಐ): ವಿರಾಟ್ ಕೊಹ್ಲಿ ನಾಯಕತ್ವದ ಭಾರತ ಕ್ರಿಕೆಟ್ ತಂಡ ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್ ಪಂದ್ಯ ಆಡಲು ಸೋಮವಾರ ಲಂಡನ್‌ಗೆ ಬಂದು ತಲುಪಿತು. ಪಂದ್ಯ 12ರಂದು ಆರಂಭಗೊಳ್ಳಲಿದ್ದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಈ ಪಂದ್ಯದ ವೇಳೆ ಹಾಜರಿರುವರು.

ನಾಟಿಂಗ್‌ಹ್ಯಾಂನಲ್ಲಿ ಭಾನುವಾರ ಕೊನೆಗೊಂಡ ಮೊದಲ ಟೆಸ್ಟ್ ಡ್ರಾದಲ್ಲಿ ಕೊನೆಗೊಂಡಿತ್ತು. ಭಾರತ ಗೆಲುವಿಗೆ ಸುಲಭ ಗುರಿಯನ್ನು ಬೆನ್ನತ್ತಿತ್ತು. ಆದರೆ ಕೊನೆಯ ದಿನದ ಆಟಕ್ಕೆ ಮಳೆ ಅಡ್ಡಿಯಾದ ಕಾರಣ ಪಂದ್ಯವನ್ನು ಡ್ರಾದಲ್ಲಿ ಮುಕ್ತಾಯಗೊಳಿಸಲು ನಿರ್ಧರಿಸಲಾಗಿತ್ತು. ಶ್ರೀಲಂಕಾ ಎದುರಿನ ಸರಣಿಯಲ್ಲಿ ಆಡಿ ತಡವಾಗಿ ತಂಡವನ್ನು ಸೇರಿಕೊಂಡಿರುವ ಸೂರ್ಯಕುಮಾರ್ ಯಾದವ್ ಮತ್ತು ಪೃಥ್ವಿ ಶಾ ಅವರು ನಾಟಿಂಗ್‌ಹ್ಯಾಂನಲ್ಲೇ ಉಳಿದಿದ್ದು ಕ್ವಾರಂಟೈನ್‌ಗೆ ಒಳಗಾಗಿದ್ದಾರೆ.

ಆರ್‌ಟಿ–ಪಿಸಿಆರ್ ಪರೀಕ್ಷೆಯ ವರದಿ ನೆಗೆಟಿವ್ ಬಂದ ಕಾರಣ ಎಲ್ಲ ಆಟಗಾರರೂ ಲಂಡನ್‌ಗೆ ತೆರಳಿದ್ದಾರೆ. ಪೃಥ್ವಿ ಶಾ ಮತ್ತು ಸೂರ್ಯಕುಮಾರ್ ಯಾದವ್ ಅವರ ಕ್ವಾರಂಟೈನ್ ಆಗಸ್ಟ್ 13ರಂದು ಮುಕ್ತಾಯವಾಗಲಿದೆ. ಆದ್ದರಿಂದ ಆಗಸ್ಟ್ 14ರ ನಂತರವಷ್ಟೇ ಅವರು ಅಭ್ಯಾಸ ಮಾಡಲಿದ್ದಾರೆ. ಹೀಗಾಗಿ 3ನೇ ಟೆಸ್ಟ್ ಪಂದ್ಯಕ್ಕೆ ಅವರು ಲಭ್ಯರಾಗಲಿದ್ದಾರೆ. ಪಂದ್ಯ ಲೀಡ್ಸ್‌ನಲ್ಲಿ ಆಗಸ್ಟ್ 25ರಂದು ಆರಂಭ ವಾಗಲಿದೆ.

ಪಂದ್ಯ ವೀಕ್ಷಣೆಗೆ ಗಂಗೂಲಿ: ಭಾರತದಿಂದ ತೆರಳುವ ಪ್ರವಾಸಿಗರಿಗೆ ನಿರ್ಬಂಧ ಸಡಿಲಗೊಳಿಸಿರುವ ಕಾರಣ ಎರಡನೇ ಪಂದ್ಯ ವೀಕ್ಷಣೆಗೆ ಸೌರವ್ ಗಂಗೂಲಿ ತೆರಳಲಿದ್ದಾರೆ. ಬ್ರಿಟನ್ ಆರೋಗ್ಯ ಇಲಾಖೆಯ ಪ್ರಕಾರ ಎರಡು ಡೋಸ್ ಲಸಿಕೆ ಪಡೆದಿರುವ ಯಾವುದೇ ವ್ಯಕ್ತಿ ಈಗ ಅಲ್ಲಿಗೆ ಪ್ರಯಾಣ ಬೆಳೆಸಬಹುದಾಗಿದೆ. ಅವರಿಗೆ 10 ದಿನಗಳ ಕಠಿಣ ಕ್ವಾರಂಟೈನ್ ಅಗತ್ಯವಿಲ್ಲ.

ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಉಪಾಧ್ಯಕ್ಷ ರಾಜೀವ್ ಶುಕ್ಲಾ, ಖಜಾಂಚಿ ಅರುಣ್ ಧುಮಲ್ ಮುಂತಾದವರು ಕೂಡ ಪಂದ್ಯ ವೀಕ್ಷಿಸುವ ಸಾಧ್ಯತೆ ಇದೆ ಎನ್ನಲಾಗಿದೆ.



ಜಸ್‌ಪ್ರೀತ್ ಬೂಮ್ರಾ ಮತ್ತು ಚೇತೇಶ್ವರ್ ಪೂಜಾರ —ಎಎಫ್‌ಪಿ ಚಿತ್ರ